



894.814 308 72
ANA N95
ಗ್ರಂಥ ಸ್ವಾಮ್ಯ ವಿಭಾಗ

# ಫೈನಲ್ ಅಸಾಲ್ಟ್

9676
1995

ಬಿ. ವಿ. ಅನಂತರಾಮ್

ಸಪ್ತಗಿರಿ ಪ್ರಕಾಶನ
2. ಮದಾರ್ ಸಾಬ್ ಗಲ್ಲಿ. ಬೆಂಗಳೂರು-53

META ENTERED

First Edition : 1995
Title of the Novel : FINAL ASSULT
Author : B. V. Anantha Ram
Rights : B. V. Anantha Ram
Price : Rs. 20-00

64248 CR

---

ಮುದ್ರಕರು :
ಅನಿತಾ ಪ್ರಿಂಟರ್ಸ್
ಮಾಗಡಿ ರಸ್ತೆ, ಬೆಂಗಳೂರು-23

---

ಮೊದಲ ಮುದ್ರಣ : 1995
ಕೃತಿಯ ಹೆಸರು : ಫೈನಲ್ ಅಸಾಲ್ಟ್
ಕೃತಿಗಾರ : ಬಿ. ವಿ. ಅನಂತರಾಮ್
ಹಕ್ಕುಗಳು : ಬಿ. ವಿ. ಅನಂತರಾಮ್
ಬೆಲೆ : ರೂ. 20-00

# ಮುನ್ನುಡಿ

ಜೆಂಕೆಯ ಹೊಸದೊಂದು ಅಸೈನ್‌ಮೆಂಟ್ ಇದೀಗ ನಿಮ್ಮ ಕೈಯಲ್ಲಿದೆ ಓದಿ ನಿಮ್ಮ ಅಭಿಪ್ರಾಯ ತಿಳಿಸಿ.

ಈ ಕಾದಂಬರಿಯನ್ನು ಪುಸ್ತಕ ರೂಪದಲ್ಲಿ ನಿಮ್ಮ ಕೈ ತಲುಪಿಸುತ್ತಿರುವ ಸಪ್ತಗಿರಿ ಪ್ರಕಾಶನದವರಿಗೆ ನನ್ನ ಕೃತಜ್ಞತೆಗಳು.

ಮುಖಪುಟದ ಕಲಾವಿದರಿಗೆ, ಅಚ್ಚುಕೂಟದ ಗೆಳೆಯರಿಗೆ ನನ್ನ ವಂದನೆಗಳು.

ವಿಶ್ವಾಸವಿರಲಿ

ಬಿ. ವಿ. ಅನಂತರಾಮ್

1652, ಪ್ರಕಾಶನಗರ
ಮೂರನೇ ಹಂತ
ಬೆಂಗಳೂರು-560021

# 1

ಹ್ಯಾಂಡ್ಸ್ಅಪ್....ಡೋಂಟ್ ಮೂವ್" ಕರ್ಕಶ ಧ್ವನಿಯೊಂದು ವಾರ್ನ್ ಮಾಡಿತು.

ಡೋರ್ ಹ್ಯಾಂಡಲ್ ಮೇಲಿಟ್ಟಿದ್ದ ಕೈ ಹಾಗೆಯೇ ಸ್ಥಗಿತಗೊಳಿಸಿ ಕದಲದೇ ನಿಂತ ಮಹೇಶ.

"ಕಮಾನ್ ಇತ್ತ....ಬಾ !" ಮತ್ತೊಮ್ಮೆ ಆಜ್ಞಾಪಿಸಿತು ಅದೇ ಧ್ವನಿ.

ಕೈಗಳನ್ನು ಮೇಲೆತ್ತಿ ಮೆಲ್ಲನೆ ಹಿಂದೆ ತಿರುಗಿದ ಮಹೇಶ. ಎದುರಿಗಿದ್ದ ಕೊಠಡಿಯ ಬಾಗಿಲು ಅರೆ ತೆರೆದಿತ್ತು. ಬಾಗಿಲ ಸಂದಿಯಿಂದ ಪಿಸ್ತೂಲೊಂದರ ನಳಿಗೆ ಹೊರಗಿಣುಕುತ್ತಿತ್ತು. ಅದಕ್ಕಳವಡಿಸಿರುವ ಸೈಲೆನ್ಸರ್ ಕಾರಿಡಾರ್‌ನಲ್ಲಿ ಬೆಳಗುತ್ತಿರುವ ನಿಯಾನ್ ಲೈಟ್ ಬೆಳಕಿಗೆ ಮಿರ ಮಿರ ಮಿಂಚುತ್ತಿತ್ತು.

"ಹಲೋ....ವಾಟ್ ಕೆನ್ ಐ ಡೂ ಫಾರ್ ಯು ?" ಮುಗುಳ್ನಗೆ ಬೀರಿ ಕೇಳಿದ ಮಹೇಶ.

ತುಸು ಕದಲಿತು ಪಿಸ್ತೂಲ ನಳಿಗೆ. "ರಗಳೆ ಮಾಡದೆ ನೇರ ಒಳಗೆ ಬಾ...." ಮತ್ತೊಮ್ಮೆ ಆಜ್ಞೆ ಕೇಳಿಸಿತು.

ಕಣ್ಣ ಕೊನೆಯಿಂದ ಕಾರಿಡಾರ್ ಒಮ್ಮೆ ಪರಿಶೀಲಿಸಿ ಮುಂದಕ್ಕೆ ಚಲಿಸಿದ ಮಹೇಶ. ಟೈಂ ರಾತ್ರಿ ಎರಡಾದ್ದರಿಂದ ಒಂದು ತಲೆಯೂ ಕಾಣಿಸುತ್ತಿಲ್ಲ. ತನ್ನ ಸದ್ಯದ ಸ್ಥಿತಿ ಗಮನಿಸಿ ತಲೆ ಕೆಡಿಸಿಕೊಳ್ಳುವವರ್‍ಯಾರೂ ಇಲ್ಲವೆಂದು ಗ್ರಹಿಸಿ ಆ ಅನಾಮಿಕ ಹೇಳಿದಂತೆಯೇ ಬಾಗಿಲು ತಳ್ಳಿಕೊಂಡು ಒಳಕ್ಕಡಿಯಿರಿಸಿದ. ಗೋಡೆಯ ಬದಿಗೇ ಪಿಸ್ತೂಲನ್ನು ಸಿದ್ಧವಾಗಿಡಿದು

ನಿಂತಿದ್ದ ಆ ವ್ಯಕ್ತಿ. ಮಹೇಶ ಒಳ ಬಂದೊಡನೆ ಬಾಗಿಲು ಮುಚ್ಚಿ ಲಾಕ್ ಮಾಡಿಬಿಟ್ಟ. ಪಿಸ್ತೂಲ ಮೊನೆ ಮಾತ್ರ ಮಹೇಶನ ಕುತ್ತಿಗೆಗೆ ನೋಕುತ್ತಲೇ ಇತ್ತು. ಮಹೇಶನ ಜೇಬುಗಳನ್ನು ಕೇರ್‌ಫುಲ್ಲಾಗಿ ಚೆಕ್ ಹೊಡೆದ ಆ ವ್ಯಕ್ತಿ. ಏನೂ ಸಿಗದಿದ್ದಾಗ ಮುಂದೆ ಬಂದು ಎದುರಿಗೆ ನಿಂತ.

ಮೀಡಿಯಂ ಹೈಟ್, ಅಮ್ಮಮ್ಮ ಮುಖ, ಗಡ್ಡವನ್ನು ನೋಕುತ್ತಿರುವ ವಾಲು ಮೀಸೆ, ಕ್ರೂರತ್ವ ಬಿಂಬಿಸುವ ಬೆಕ್ಕಿನ ಕಣ್ಣುಗಳು.... ನೋಡಲೇ ವಿಕಾರವಾಗಿತ್ತವನ ರೂಪ.

ಕಿಟಕಿಗಳು ಮುಚ್ಚಿದ್ದವು. ಕರ್ಟೆನ್‌ಗಳನ್ನೂ ಪೂರ್ಣವಾಗಿ ಎಳೆಯಲಾಗಿತ್ತು.

"ಸೆಕೆಯಾಗುತ್ತಿದೆ....ಕಿಟಕಿಗಳನ್ನಾದರೂ ತೆರೆಯಬಾರದೇ ?" ಕೇಳುತ್ತಾ ಕುರ್ಚಿಯಲ್ಲಿ ಆಸೀನನಾದ ಮಹೇಶ.

ಅನುಮಾನದೊಡನೆ ನೋಡಿದ ಆ ವ್ಯಕ್ತಿ. ಪಿಸ್ತೂಲು ತುಸು ಮುಂದಕ್ಕೆ ಮೂವಾಯಿಸುತ "ನಿನಗೋಸ್ಕರ ಮೂರು ದಿನಗಳಿಂದ ಕಾಯುತ್ತಿದ್ದೇನೆ ಗೊತ್ತೇ ?" ಅಂದ ಬೆಡ್ ಮೇಲೆ ಕುಳಿತು.

"ಐಯಾಮ್ ರಿಯಲಿ ಸಾರಿ....ನನಗಾಗಿ ಕಾಯುತ್ತಿರುವುದು ತಿಳಿದಿದ್ದರೆ ಇನ್ನೂ ಸ್ವಲ್ಪ ಮೊದಲೇ ಬರಲು ಪ್ರಯತ್ನಿಸುತ್ತಿದ್ದೆನಲ್ಲ ! ಸೇಲ್ಸ್ ರಿಪ್ರೆಸೆಂಟೇಟಿವ್ ಜೀವನ ಹೇಗಿರುತ್ತದೆಂದು ನಿನಗೂ ಗೊತ್ತಿರಬೇಕಲ್ಲವೇ?" ಅಂದ ಪ್ರಶಾಂತ ಧ್ವನಿಯಲ್ಲಿ ಮಹೇಶ.

"ಸೇಲ್ಸ್ ರಿಪ್ರೆಸೆಂಟೇಟಿವ್ ?"

"ನನ್ನ ಹೆಸರು ಗೊತ್ತಿಲ್ಲ ಅಲ್ಲವೇ ನಿನಗೆ ? ಐಯಾಮ್ ಕುಮಾರ್ ಫ್ರಂ ಇಂಪೋರ್ಟರ್ಸ್ ಎಕ್ಸ್‌ಪೋರ್ಟರ್ಸ್ ಕಂಪನಿ, ಇಂಡಿಯಾ...." ಅಂದ ಮಹೇಶ.

"ಷಟಪ್ !" ಅಸಹನೆಯೊಡನೆ ಕಿರುಚಿದ ಆ ವ್ಯಕ್ತಿ, "ನೀವ್ಯಾರು, ನಿನ್ನ ಹೆಸರು, ಊರು ಎಲ್ಲವೂ ನನಗೆ ಪರಿಚಿತ. ಇಂದೇ ಸಿಂಗಪುರ್‌ನಿಂದ ಬಂದೆಯೆಂದೂ ಗೊತ್ತು !"

"ಮೈಗಾಡ್ ! ನನ್ನ ವಿವರಗಳೆಲ್ಲಾ ಗೊತ್ತೇ ?" ಅಚ್ಚರಿಗೊಂಡ ಮಹೇಶ.

"ಎಸ್....ನಿನ್ನ ವಿವರಗಳೆಲ್ಲಾ ಗೊತ್ತು ಮಿಸ್ಟರ್ ಮ....ಕುಮಾರ್. ಎಷ್ಟೋ ವರ್ಷಗಳಿಂದ ನಮ್ಮ ಬಗಲ್-ಕಾ-ಚೂರಿಯಾಗಿರುವವ ನೀನು ಸತ್ಯ ನುಡಿಯುವುದು ನಿನ್ನ ಆರೋಗ್ಯಕ್ಕೆ ಒಳ್ಳೆಯದು ಅಸೈನ್‌ಮೆಂಟೊಂದರ ನಿರ್ವಹಣೆಗಾಗಿ ಬರೆದೆಯಲ್ಲವೇ ನೀನು ?" ಕೇಳಿದ ಅವನು.

"ಅಸೈನ್‌ಮೆಂಟ್. ನಮ್ಮದು ಇಂಪೋರ್ಟ್ ಎಕ್ಸ್‌ಪೋರ್ಟ್...."

ಕಣ್ಣುಗಳು ಕೆಂಪಾಗುತ್ತಿದ್ದಂತೆ ಸರ್ರನೆದ್ದು ನಿಂತ ಆ ವ್ಯಕ್ತಿ. ದವಡೆ ಬಿಗಿದು ಪಿಸ್ತೂಲನ್ನು ಮಹೇಶನ ಗಡ್ಡಕ್ಕೆ ಸೋಕಿಸಿದ.

"ಈ ಕಥೆಗಳು ನನ್ನ ಬಳಿ ಬೇಡ ಮಿಸ್ಟರ್ ಕಿಲ್ ಮಾಸ್ಟರ್ ! ಇನ್ನು ಮುಸುಕಿನ ಗುದ್ದಾಟವೇಕೆ ? ಈ ಕೊಠಡಿಯಿಂದ ಜೀವಂತವಾಗಿ ಹೊರ ಬೀಳುವುದು, ಬಿಡುವುದು ನಿನ್ನ ಕೈನಲ್ಲೇ ಇದೆ !" ಅಂದ

"ನನ್ನ ಕೈನಲ್ಲಿಲ್ಲ ಅದು....ನಿನ್ನ ಕೈನಲ್ಲಿದೆ. ಹೋಗೆಂದರೆ ಈಗಲೇ ಹೊರಟುಬಿಡುತ್ತೇನೆ" ಅನ್ನುತ್ತಾ ಎದ್ದ ಮಹೇಶ.

ಫಟ್ಟನೆ ಪಿಸ್ತೂಲ ಹಿಡಿಯಿಂದ ಅವನ ದವಡೆಗೆ ಹೊಡೆದ ಆ ವ್ಯಕ್ತಿ. ಏಟಿನ ಬಿರುಸಿಗೆ ಮತ್ತೆ ಕುರ್ಚಿಯಲ್ಲಿ ಕುಕ್ಕರಿಸಿದ ಮಹೇಶ. ಕಣ್ಣುಗಳು ಹಚ್ಚಗಾದವು. ನರಗಳು ನೋವಿಗೆ ಕುಂಯ್ ಗುಟ್ಟಿದವು.

"ನಿನ್ನ ನಾಟಕಗಳಿಗೆ ಮರುಳಾಗುವವನಲ್ಲ ನಾನು. ಒಳ್ಳೆಯ ಮಾತಿಗೆ ನನ್ನ ಪ್ರಶ್ನೆಗಳಿಗೆ ಉತ್ತರಿಸು. ಪ್ರಾಣ ಉಳಿಸಿಕೋ ಇಲ್ಲದಿದ್ದರೆ...." ಟ್ರಿಗರ್ ಮೇಲೆ ತೋರುಬೆರಳು ಬಿಗಿಸಿದ

ಹೇಳಿದಂತೆ ಮಾಡುತ್ತಾನಿವ ಎಂದೆನಿಸಿ ತನ್ನ ಧೋರಣೆ ಬದಲಾಯಿಸಿ ಕೊಂಡ ಮಹೇಶ "ನಿನ್ನ ಪ್ರಶ್ನೆಗಳೇನು ?" ಅಂದ ದವಡೆ ಉಜ್ಜಿ ಕೊಳ್ಳುತ್ತಾ.

"ಸಿಲ್ವರ್ ಕಿಂಗ್ ಎಲ್ಲಿದೆ ?" ಕೇಳಿದ ಆ ವ್ಯಕ್ತಿ.

"ಸಿಲ್ವರ್ ಕಿಂಗ್ ? ಏನದು ?" ಅನಾಯಾಸ ಮುಖಭಾವ ದೊಡನೆ ಕೇಳಿದ ಮಹೇಶ

"ಭಾರತ ತಯಾರಿಸಿರುವ ಅತ್ಯಾಧುನಿಕ ಸಬ್ ಮರೀನ್. ತಿಂಗಳ ಹಿಂದೆ ಹಿಂದೂ ಮಹಾಸಾಗರದಲ್ಲಿ ಟ್ರಯಲ್ಸ್‌ಗೆಂದು ಹೊರಟಿತು....ಈಗೆಲ್ಲಿದೆ ಅದು ?" ಕೇಳಿದ ಆ ವ್ಯಕ್ತಿ.

ಅರ್ಥವಾಗದವನಂತೆ ಮುಖವಿಟ್ಟ ಮಹೇಶ. "ಯು ವಿಷ್ ಟು ಸೇ....ಐ ನೋ ವೇರ್ ದಟ್ ಸಬ್ ಮೇರಿನ್ ಈಸ್ ?" ಕೇಳಿದ ವಿಚಿತ್ರ ನೋಟದೊಡನೆ.

"ಸರ್ಟನ್ಲಿ ! ಇಂಡಿಯನ್ ಓಷನ್‌ನಲ್ಲಿ ಎಲ್ಲೋ ಒಂದೆಡೆ ಕಟ್ಟಿ ನಿಂತಿದೆ ಅದು. ಅದಕ್ಕಾಗಿಯೇ ನೀನಿಲ್ಲಿಗೆ ಬಂದಿರುವಿ. ನೀನು ದೆಹಲಿ ಬಿಟ್ಟಾಗಿನಿಂದ ಫಾಲೋ ಮಾಡುತ್ತಿದ್ದಾರೆ ನಮ್ಮವರು. ನಿನಗದು ತಿಳಿದಿಲ್ಲ ಮಸ್ಟೇ ! ನೋ....ಬದುಕುವ ಆಸೆಯಿದ್ದಲ್ಲಿ ಸಿಲ್ವರ್‌ಕಿಂಗ್ ಎಲ್ಲಿದೆಯೆಂಬು ದನ್ನು ತಿಳಿಸು." ಅಂದ ಆ ವ್ಯಕ್ತಿ.

ವೇಗವಾಗಿ ಪರಿಭ್ರಮಿಸುತ್ತಿದ್ದವು ಮಹೇಶನ ಆಲೋಚನೆಗಳು ತನ್ನ ಕವರ್ ಬಟ್ಟಬಯಲಾಯಿತು. ತನ್ನನ್ನು ಶತ್ರುಗಳು ಫಾಲೋ ಮಾಡ ಬಹುದೆಂಬ ಯೋಚನೆಯೊಡನೆಯೇ ಸೇಲ್ಸ್ ರಿಪ್ರೆಸೆಂಟೆಟಿವ್ ಆಗಿ ನಟಿ ಸುತ್ತಾ ಡೈರೆಕ್ಟಾಗಿ ಡರ್ಟಿ ಐಲೇಂಡ್‌ಗೆ ಬರದೆ ರೌಂಡ್ ರೂಟ್ ಮೂಲಕ ಇಲ್ಲಿಗೆ ಬಂದಿದ್ದ ಅವನು. ಆದರೂ ತನ್ನ ರಹಸ್ಯ ಅರಿತುಬಿಟ್ಟಿದ್ದಾರೆ ಶತ್ರು ಗಳು. ಈಗೇನು ಮಾಡುವುದು ? ಇಲ್ಲಿನವರ್ಯಾರಿಗೂ ತಿಳಿಯದಂತೆ ಈ ಅಪಾಯದಿಂದ ಪಾರಾಗುವುದು ಹೇಗೆ ?

"ಆಲ್‌ರೈಟ್ ! ಹೇಳುತ್ತೇನೆ. ನಿಮಗೆಲ್ಲಾ ವಿವರಗಳು ತಿಳಿದ ಮೇಲೆ ಬಚ್ಚಿಟ್ಟೇನು ಪ್ರಯೋಜನ ? ಆದರೆ ನನ್ನ ವಿಷಯವೇನು ? ಎಲ್ಲಾ ಹೇಳಿದ ಮೇಲೆ...." ಅರ್ಧಕ್ಕೆ ಮಾತು ನಿಲ್ಲಿಸಿ ಉಗುಳು ನುಂಗಿದ ಮಹೇಶ.

ತನ್ನ ಮಾತಿಗೆ ಬೆಲೆ ಕೊಟ್ಟದ್ದಕ್ಕೆ, ಮಹೇಶ ಅಷ್ಟು ಸಲೀಸಾಗಿ ಒಪ್ಪಿ ಕೊಂಡಿದ್ದಕ್ಕೆ ಸಂತಸಗೊಂಡ ಆ ವ್ಯಕ್ತಿ. ಅದು ಅವನ ಕಣ್ಣುಗಳಿಂದಲೇ ಅರಿಯಬಹುದಿತ್ತು.

"ಸಿಲ್ವರ್‌ಕಿಂಗ್ ಟ್ರೇಸ್ ಮಾಡುವವರಿಗೆ ನಿನ್ನ ಇಲ್ಲಿನ ನಮ್ಮ ರಹಸ್ಯ ಸ್ಥಾವರದಲ್ಲಿರಿಸುತ್ತೇವೆ. ಅಲ್ಲಿಂದ ನಮ್ಮ ಹೆಡ್‌ಕ್ವಾರ್ಟರ್ಸ್‌ಗೆ ಕರೆ ದೊಯ್ಯುತ್ತೇವೆ. ನಿನ್ನನ್ನು ಬಂಧಿಸಿ ಇಂಟರಾಗೇಟ್ ಮಾಡಬೇಕೆಂದು ನಮ್ಮವರು ಬಹಳ ದಿನಗಳಿಂದ ಕಾಯುತ್ತಿದ್ದಾರೆ. ನೀನು ಬುದ್ಧಿವಂತ ನಂತೆ ವರ್ತಿಸಿದರೆ ಟಾರ್ಚರ್ ಮಾಡುವ ನೆಸೆಸಿಟಿಯಿರದು. ಅತೀ ಬುದ್ಧಿ ವಂತಿಕೆ ತೋರಿದರೆ ಮಾತ್ರ ಜೀವಂತವಾಗಿ ಸುಟ್ಟುಬಿಡುತ್ತೇವೆ" ಬೆದರಿಸಿದ,

"ಆಲ್‌ರೈಟ್ ! ನೀವಿಷ್ಟು ಹೇಳಿದ ಮೇಲೆ ಇನ್ನೂ ಮೌನದೊಡನಿರುವುದು ಸರಿಯಲ್ಲ !" ಅನ್ನುತ್ತಾ ಕ್ಯಾಷುಯಲ್ ಆಗಿ ಜೇಬು ತಡವಿ ಸಿಗರೇಟ್ ಪ್ಯಾಕ್ ಹೊರತೆಗೆದ ಮಹೇಶ.

ಒಂದು ಸಿಗರೇಟ್ ತೆಗೆದು ತುಟಿಗಳ ನಡುವೆಯಿರಿಸಿಕೊಂಡ. ಒಂದು ಕ್ಷಣ ಯೋಚಿಸಿ ಪ್ಯಾಕ್ ಅವನ ಕಡೆಗೆಸೆದ. "ಹ್ಯಾವ್ ಎ ಸಿಗರೇಟ್ !" ಅಂದ.

ಎಡಗೈನಿಂದ ಪ್ಯಾಕ್ ಕ್ಯಾಚ್ ಮಾಡಿ ಟೇಬಲ್ ಮೇಲಿಟ್ಟ ಆ ವ್ಯಕ್ತಿ. "ನನಗಭ್ಯಾಸವಿಲ್ಲ." ಅಂದ.

ಸಿಗರೇಟ್ ತುಟಿಯಂಚಿಗೆ ತಂದು ಕುರ್ಚಿಯಲ್ಲಿ ಹಿಂದಕ್ಕೊರಗಿ ಕುಳಿತ ಮಹೇಶ. "ನಮ್ಮ ಸಂಸ್ಥೆಯಲ್ಲೆಲ್ಲೋ ಲೀಕ್ ಆಗುತ್ತಿದೆ. ನನ್ನ ವಿಷಯ ಬಹಳ ಬೇಗ ಔಟ್ ಆಗಿಬಿಟ್ಟಿದೆ." ಅಚ್ಚರಿ ಪ್ರಕಟಿಸಿದ ಮತ್ತೊಮ್ಮೆ.

"ಸರಸಸಲ್ಲಾಪ ಆಮೇಲೆ....ಮೊದಲು ಸಿಲ್ವರ್‌ಕಿಂಗ್ ವಿಷಯ ಹೇಳು !" ಎಂದು ಗುರಾಯಿಸಿದ ಆ ವ್ಯಕ್ತಿ.

"ಖಂಡಿತಾ ಹೇಳುತ್ತೇನೆ ಬಾಯಲ್ಲಿ ಹೇಳಿದರೆ ಅರ್ಥವಾಗುವುದು ಕಷ್ಟ. ಮ್ಯಾಪ್ ತೋರಿಸಿ ಹೇಳುತ್ತೇನೆ." ಅಂದ ಮಹೇಶ.

"ವೆರಿಗುಡ್ ! ಪೇಪರ್ ಪೆನ್ಸಿಲ್ ಟೇಬಲ್ ಮೇಲಿದೆ ನೋಡು."

ಎರಡನ್ನೂ ಎತ್ತಿ ತನ್ನ ಮುಂದಿರಿಸಿಕೊಂಡ ಮಹೇಶ ಜೇಬಿಗೆ ಮತ್ತೆ ಕೈ ಹಾಕಿದ. ಅರ್ಧದಲ್ಲೇ ಅಡ್ಡ ಬಂದ ಆ ವ್ಯಕ್ತಿ. "ಅದೇಕೆ ?" ಅಂದ.

"ಲೈಟರ್ ತೆಗೆಯುತ್ತಿದ್ದೇನೆ." ಅವನ ಮಾತೇ ಕೇಳಿಸದವನಂತೆ ಲೈಟರ್ ಹೊರತೆಗೆದ ಮಹೇಶ

ಪಿಸ್ತೂಲನ್ನು ಸ್ಟೆಡಿಯಾಗಿಡಿದು ಅನುಮಾನದೊಡನೆ ನೋಡುತ್ತಿದ್ದ ಆ ವ್ಯಕ್ತಿ. ಲೈಟರ್ ಕ್ಲಿಕ್ ಮಾಡುವುದರ ವಿನಹ ಬೇರೇನೇ ಚೇಷ್ಟೆ ಮಾಡಿದರೂ ಫೈರ್ ಮಾಡಲು ಸನ್ನದ್ಧನಾಗಿದ್ದ ಅವನು.

ಲೈಟರ್ ತೋರುಬೆರಳಿಂದ ಎರಡು ಸಲ ಕ್ಲಿಕ್ ಮಾಡಿದ ಮಹೇಶ. ಹತ್ತಲಿಲ್ಲ. ಮತ್ತೆ ನಾಲ್ಕು ಸಲ ಪ್ರೆಸ್ ಮಾಡಿದಾಗ ಹತ್ತಿತ್ತು. ಸಿಗರೇಟ್‌ಗೆ ಅಗ್ನಿಸ್ಪರ್ಶ ಮಾಡಿ ಲೈಟರ್ ಅವನ ಕಡೆಗೆಸೆದುಬಿಟ್ಟ ಮಹೇಶ.

## ಫೈನಲ್ ಅಸಾಲ್ಟ್

"ನಾನು ಸಿಗರೇಟ್ ಸೇದುವುದಿಲ್ಲವೆಂದು ಎಷ್ಟು ಸಾರಿ ಹೇಳುವುದು?" ಕೋಪದೊಡನೆ ಹೇಳಿ ಲೈಟರ್ ಹಿಡಿದು ಟೇಬಲ್ ಮೇಲಿಟ್ಟ ಆ ವ್ಯಕ್ತಿ.

ಸರಿಯಾಗಿ ಐದು ಸೆಕೆಂಡ್‌ಗಳಾದೊನೆ, "ಐಯಾಮ್ ವೆರಿ ಸಾರಿ!" ಅನ್ನುತ್ತಾ ಲೈಟರ್ ಎತ್ತಿಕೊಳ್ಳುವವನಂತೆ ಕುರ್ಚಿಯಿಂದೆದ್ದು ಸರ್ರನೆ ನೆಲಕ್ಕೆ ಕುಸಿದು ಟೇಬಲ್ ಅಡಿಗೆ ಜಾರಿಬಿಟ್ಟ.

ಆ ವ್ಯಕ್ತಿ ದಿಗ್ಭ್ರಾಂತನಾಗಿ ವಿಷಯವೇನೆಂದು ಅರ್ಥ ಮಾಡಿಕೊಂಡು ಪಿಸ್ತೂಲನ್ನು ಮಹೇಶನ ಕಡೆಗೆ ತಿರುಗಿಸುವಷ್ಟರಲ್ಲೇ ಸಣ್ಣ ಶಬ್ದದೊಡನೆ ಸ್ಫೋಟವೊಂದು ಸಂಭವಿಸಿತು. ಕ್ಷಣದ ನಂತರ ಸದ್ದು ಅಡಗಿತು. ಟೇಬಲ್ ಕಾಲು ತಗಲಿ ನೋವಾಗುತ್ತಿದ್ದ ಭುಜವನ್ನು ಉಜ್ಜಿಕೊಳ್ಳುತ್ತಾ ಎದ್ದು ನಿಂತ ಮಹೇಶ

ಅಂಗಾತನಾಗಿ ನೆಲದ ಮೇಲೆ ಬಿದ್ದುಬಿಟ್ಟಿದ್ದ ಆ ವ್ಯಕ್ತಿ. ಮುಖ ಸಂಪೂರ್ಣ ಕರಕಾಗಿ ಗುರುತು ಹಿಡಿಯಲೇ ಆಗುತ್ತಿರಲಿಲ್ಲ. ಬಲಗೈ ಚಿಂದಿಯಾಗಿ ಹೋಗಿತ್ತು.

ಲೈಟರ್‌ನಲ್ಲಿರುವ ಪ್ಲಾಸ್ಟಿಕ್ ಬಾಂಬ್ ಮಾಡುವುದು ಬಹಳ ಮೆಲು ಶಬ್ದವೇ. ಆದರೂ ಆ ಶಬ್ದ ಅಕ್ಕಪಕ್ಕದ ಕೊಠಡಿಗಳವರಿಗೆ ಕೇಳಿಸಿತೇನೋ ಎಂದು ಐದು ನಿಮಿಷ ಹೆಜ್ಜೆ ಶಬ್ದಗಳಿಗಾಗಿ ಕಾದ ಮಹೇಶ. ನಂತರ ಯಾರಿಗೂ ಕೇಳಿಸಿಲ್ಲವೆಂಬುದು ಖಚಿತವಾದ ಮೇಲೆ ಡೆಡ್‌ಬಾಡಿಯನ್ನು ಬೆಡ್‌ಶೀಟ್‌ನಲ್ಲಿ ಸುತ್ತಿ ಹೊರಕ್ಕೆತ್ತಿಕೊಂಡು ಬಂದ. ಕಾರಿಡಾರ್ ನಿರ್ಮಾನುಷ್ಯವಾಗಿ ಇತ್ತು. ಬೇಗನೇ ತನ್ನ ಕೊಠಡಿಯ ಬಾಗಿಲು ತೆಗೆದು ಒಳಕ್ಕೆ ನುಸುಳಿದ

ಮಂಚದ ಮೇಲಿನ ಬೆಡ್‌ಶೀಟ್ ತೆಗೆದು ಬಾಡಿ ಮಂಚದ ಮೇಲಿರಿಸಿದ. ಕುಮಾರ್ ಐಡೆಂಟಿಫಿಕೇಷನ್ ಕಾರ್ಡ್ಸ್, ಟ್ರಾವೆಲರ್ಸ್ ಚೆಕ್‌ಗಳನ್ನು ಅವನ ಜೇಬಿನಲ್ಲಿಟ್ಟ. ಅವನ ಜೇಬಲ್ಲಿದ್ದ ಕಾಗದಗಳನ್ನು ತೆಗೆದುಕೊಂಡು ಕಿಟಕಿಗಳನ್ನು ಮುಚ್ಚಿ ಕರ್ಟನ್‌ಗಳನ್ನೆಳೆದ. ತನ್ನ ಬ್ರೀಫ್‌ಕೇಸ್‌ನಿಂದ ಕೆಲವು ವಸ್ತುಗಳನ್ನು ಮಾತ್ರ ತೆಗೆದುಕೊಂಡು ಬಾಗಿಲನ್ನು ಲಾಕ್ ಮಾಡಿ ಆ ವ್ಯಕ್ತಿಯ ಕೊಠಡಿಗೆ ವಾಪಸ್ಸಾದ.

ತನ್ನ ಕೊಠಡಿಯಿಂದ ತಂದ ಬೆಡ್‌ಶೀಟ್ ಹಾಸಿಗೆಯ ಮೇಲೆ ಹಾಸಿದ. ವೇಳೆ ಅಷ್ಟೊತ್ತಿಗೆ ಎರಡೂವರೆಯಾಗಿತ್ತು.

ಜೇಬಿನಿಂದ ಫ್ರೆಷ್ ಸಿಗರೇಟ್ ಪ್ಯಾಕ್ ತೆಗೆದು ಒಂದು ಸಿಗರೇಟ್ ಹಚ್ಚಿಕೊಂಡು ಕೊಠಡಿಯನ್ನೆಲ್ಲಾ ಕೇರ್‌ಫುಲ್ಲಾಗಿ ಹಿಯರಿಂಗ್ ಬಗ್ಸ್‌ಗಳಿಗಾಗಿ ಹುಡುಕಾಡಿದ. ಮಂಚದ ಮೇಲೆ, ಕೆಳಗೆ, ಟೀಪಾಯ್, ಗೋಡೆಗಳು, ಬಾತ್‌ರೂಂ ಎಲ್ಲವನ್ನೂ ಪರಿಶೀಲಿಸಿ ರೂಂ ಕ್ಲೀನಾಗಿದೆಯೆಂದು ಮನಗಂಡ ಮೇಲೆ ತೃಪ್ತಿಯಾಗಿ ಮಂಚದ ಮೇಲೆ ಕುಳಿತ.

ಲೈಟರ್ ವೀಲ್ ಎಷ್ಟು ಸಲ ತಿರುಗಿದರೆ ಅದಕ್ಕೊಂದು ಸೆಕೆಂಡ್ ಕಡಿಮೆ ಅವಧಿಯಲ್ಲಿ ಬಾಂಬ್ ಸ್ಫೋಟಿಸುವಂತೆ ಟೈಮಿಂಗ್ ಸಿಸ್ಟಂ ಅರೇಂಜ್ ಆಗಿತ್ತು ಅದರಲ್ಲಿ. ಅದರ ಸ್ಫೋಟದ ಎಫೆಕ್ಟ್ ಮೂರಡಿಗಳವರೆಗೆ ಮಾತ್ರ ಅಪರಿಮಿತ. ಟೇಬಲ್ ಕೆಳಗಿದ್ದ ಕಾರಣ ಅದರ ಮಾರಕತೆಯಿಂದ ಬಚಾವಾಗಿದ್ದ ಮಹೇಶ. ಎದುರಿಗೆ ನಿಂತಿದ್ದ ಆ ವ್ಯಕ್ತಿ ಬಲಿಯಾಗಿದ್ದ.

ಅವನ ಜೇಬಿನಲ್ಲಿ ಸಿಕ್ಕ ಪೇಪರ್ಸ್ ಪರಿಶೀಲಿಸಿದ ಮಹೇಶ ಸಿಂಗಪುರ್ ಪಾಸ್ ಪೋರ್ಟೊಂದು ಪೀಟರ್ ಎಂಬ ಹೆಸರಿನಲ್ಲಿ ಇಷ್ಯೂ ಆಗಿತ್ತು. ಅದೇ ಹೆಸರಲ್ಲಿ ಒಂದು ಡ್ರೈವಿಂಗ್ ಲೈಸೆನ್ಸ್, ಸಿಂಗಪುರ್‌ಗೆ ವಾಪಸ್ಸಾಗಲು ರಿಟರ್ನ್ ಟಿಕೆಟ್ ಇದ್ದವು.

ತೀವ್ರಾಲೋಚನೆಯೊಡನೆ ಆ ಪೇಪರ್ಸ್ ಜೇಬಿಗೆ ಸೇರಿಸಿದ ಮಹೇಶ್ ಸತ್ತ ಏಜೆಂಟ್ ಯಾರು, ಶತ್ರು ಸಂಸ್ಥೆಯಲ್ಲಿ ಅವನ ಇನ್‌ಫ್ಲುಯೆನ್ಸ್ ಎಲ್ಲಿಯವರೆಗೆ ಎಂದು ತಿಳಿಯುವ ಅವಕಾಶ ಲಭಿಸಲಿಲ್ಲ. ಎನಿಮಿಯನ್ನು ಕದಲಲು ಬಿಡುವುದು ತಪ್ಪು ಎಂಬ ಸಾಮಾನ್ಯ ನಿಯಮ ಮರೆತು ಆ ತಪ್ಪಿಗೆ ಪ್ರಾಣವನ್ನೇ ಕಳೆದುಕೊಂಡಿದ್ದ ಆ ವ್ಯಕ್ತಿ. ಅವನ ಬಗೆಗಿನ ಯೋಚನೆಯನ್ನು ಬಲವಂತವಾಗಿ ಒತ್ತಟ್ಟಿಗಿರಿಸಿ ಫೋನ್ ಕೈಗೆತ್ತಿಕೊಂಡ ಮಹೇಶ.

ತನಗಾಗಿ ಅಷ್ಟು ಕೇರ್‌ಫುಲ್ಲಾಗಿ ಅಡ್ವಾನ್ಸಾಗಿ ಕಾಯುತ್ತಿದ್ದನೆಂದರೆ ಹೋಟೆಲ್ ಮ್ಯಾನೇಜರ್ ಸಹಾಯ ಹಸ್ತವಿರಲೇಬೇಕವನಿಗೆ ತನ್ನ ಕೆಲಸಗಳನ್ನೂ ಆ ಮ್ಯಾನೇಜರ್ ಮೂಲಕವೇ ಮಾಡಿಸಿಕೊಂಡರೆ ಅರ್ಧಬಾಧೆ ತಪ್ಪೀತೆಂಬ ದೂರಾಲೋಚನೆಯೊಡನೆ ರಿಸೆಪ್ಷನ್ ಡೆಸ್ಕ್ ಕಾಂಟಾಕ್ಟ್ ಮಾಡಿದ.

"ಹಲೋ....ನಾನು ರೂಂ ಖಾಲಿ ಮಾಡುತ್ತಿದ್ದೇನೆ. ಬಿಲ್ ಕಳಿಸಿ ಕೊಡಿ" ಪೀಟರ್ ಧ್ವನಿ ಅನುಕರಿಸುತ್ತಾ ಹೇಳಿದ.

"ಎಸ್ ಸರ್!" ನೈಟ್ ರಿಸೆಪ್ಷನಿಸ್ಟ್ ಧ್ವನಿಯಲ್ಲಿ ಯಾವುದೇ ಆಶ್ಚರ್ಯ ತೋರಿಬರಲಿಲ್ಲ. ಬಹುಶಃ ಅವನೂ ಪೀಟರ್ ಮಂಚದಲ್ಲಿ ಬಿದ್ದಿರಬಹುದು.

ರಿಸೀವರ್ ಕೆಳಗಿಟ್ಟು ಕರ್ಚೀಫ್‌ನಿಂದ ಫಿಂಗರ್ ಪ್ರಿಂಟ್ಸ್ ಕಾಣಿಸದಂತೆ ನೀಟಾಗಿ ಒರೆಸಿದ ಮಹೇಶ.

# 2

ಹಿಂದೂ ಮಹಾ ಸಮುದ್ರದಲ್ಲೊಂದು ದ್ವೀಪ ಡರ್ಟಿ ಐಲೆಂಡ್. ಭಾರತಕ್ಕೆ ಸುಮಾರು ಎರಡು ಸಾವಿರ ಮೈಲಿಗಳಷ್ಟು ದೂರವಿದೆ ಅದು.

ಅದರ ಸಮೀಪದಲ್ಲಿ ಹಲವಾರು ದ್ವೀಪಗಳಿವೆ. ಪ್ರತಿಯೊಂದೂ ಸ್ವತಂತ್ರ ದೇಶವೇ. ಸಿಂಗಪುರ್‌ನಿಂದ ಡರ್ಟಿಗೆ ಬಂದು ಹೋಟೆಲ್‌ನಲ್ಲಿ ರೂಂ ಮಾಡಿದೊಡನೆ ಅವನ ಕವರ್ ಬ್ಲೋ ಆಗಿಬಿಟ್ಟಿತ್ತು. ಆದ್ದರಿಂದ ರಾತ್ರೋರಾತ್ರಿಯೇ ಅಲ್ಲಿಂದ ಟೆಂಟ್ ಎತ್ತಿಬಿಟ್ಟಿದ್ದ ಅವನು.

ಬೆಳಗ್ಗೆ ಹನ್ನೊಂದು ಗಂಟೆ ಸೂರ್ಯ ಧಗಧಗ ಉರಿಯುತ್ತಿದ್ದ. ಸೀಷೋರ್‌ನಲ್ಲಿ ಒಂದೆಡೆ ನಿಂತು ಲಂಗರು ಹಾಕಿರುವ ಹಡಗುಗಳನ್ನು ದೋಣಿಗಳನ್ನು ಗಮನಿಸುತ್ತಿದ್ದ ಮಹೇಶ.

ರಾತ್ರಿ ಅವನನ್ನು ನೋಡಿದ್ದವರು ಈಗ ಗುರುತಿಸುವುದು ಕಷ್ಟ. ಲುಂಗಿಯೊಂದನ್ನುಟ್ಟಿದ್ದ ಅವನು. ತಲೆಗೆ ಸುಮಾರು ಹದಿನೈದಡಿ ಉದ್ದದ ನೀಲಿಬಣ್ಣದ ಬಟ್ಟೆಯನ್ನು ರುಮಾಲಿನಂತೆ ಸುತ್ತಿಕೊಂಡಿದ್ದ. ಅವು ಬಿಟ್ಟು ಮೈಮೇಲೆ ಇನ್ನಾವುದೇ ಆಚ್ಛಾದನೆಯಿಲ್ಲ. ಕುತ್ತಿಗೆಯಲ್ಲಿ ಮಣಿ ಸರಗಳು, ಕೈಗಳಿಗೆ ಕಬ್ಬಿಣದ ಕಡಗಗಳು, ಕೆಳಕ್ಕೆ ಬಾಗಿರುವ ಮೀಸೆ....ಏಕ್‌ದಂ ಡರ್ಟಿ ಪೌರನೋಪಾದಿಯಲ್ಲೇ ತೋರಿಬರುತ್ತಿದ್ದ ಅವನು! ಒಂದು ದೊಡ್ಡ ಬುಟ್ಟಿಯಲ್ಲಿ ನಾನಾ ರೀತಿಯ ಶಂಖಗಳು, ಮಣಿಗಳು, ದಂತದ ಬೊಂಬೆಗಳನ್ನಿರಿಸಿಕೊಂಡು ತೀರಕ್ಕೆ ಬರುವ ಹಡಗುಗಳಲ್ಲಿ ಮಾರಲು-ರೆಡಿಯಾಗಿ ಬಂದಿದ್ದ ಅವನೀಗ!

ಲಂಗರು ಹಾಕಿರುವ ಹಡಗುಗಳಿಂದ ದೂರವಾಗಿ ತೀರದಿಂದ ಮೈಲಿ ದೂರದಲ್ಲಿ ನಿಂತಿತ್ತು 'ಮಾರ್ಕಂಡೇಯ'-ಇಂಡಿಯನ್ ಮರ್ಚೆಂಟ್ ಶಿಪ್.

ದಡದಲ್ಲಿ ನಿಂತಿದ್ದ ಮೀನು ಹಿಡಿಯುವವರೊಡನೆ ಬಹಳ ಹೊತ್ತು

ಮಾತಾಡಿದ ಮಹೇಶ ಎಲ್ಲಿ ತನ್ನ ವ್ಯಾಪಾರ ಸಾಗುತ್ತದೆಂಬುದನ್ನು ವಿಚಾರಿಸಿ ತಿಳಿದುಕೊಂಡ. ಒಂದು ತೆಪ್ಪ ಬಾಡಿಗೆಗೆ ಕುದುರಿಸಿಕೊಂಡು ಅದರ ಮೇಲೆ ಮಾರ್ಕಂಡೇಯ ಷಿಪ್ .ಲುಪಿದ.

ನೀರಿನ ಮೇಲೆ ತೇಲಾಡುತ್ತಿದ್ದ ನೂಲೇಣಿಯ ಮೂಲಕ ಡೆಕ್ ಮೇಲೆ ಕಾಲಿರಿಸಿದ. ತಕ್ಷಣ ಒಬ್ಬ ನಾವಿಕ ಅವನನ್ನು ಗಮನಿಸಿ ಅಡ್ಡ ಬಂದ.

ತನ್ನ ಸಾಮಾನುಗಳನ್ನು ತೋರಿಸಿ ಮಾರಲು ಬಂದಿದ್ದೇನೆಂದು ವಿನಂತಿಸಿಕೊಂಡ ಮಹೇಶ. ಒಪ್ಪಲಿಲ್ಲ ನಾವಿಕ. ಜಾಗ ಖಾಲಿ ಮಾಡೆಂದು ಹೂಂಕರಿಸಿದ. ಆ ಗಲಾಟೆಗೆ ಇನ್ನಷ್ಟು ನಾವಿಕರಲ್ಲಿಗೆ ಧಾವಿಸಿ ಬಂದರು.

ಕೇರ್‌ಫುಲ್ಲಾಗಿ ತನ್ನ ಬುಟ್ಟಿಯನ್ನು ಕೆಳಗಿರಿಸಿ ಅವರೊಡನೆ ಆರ್ಗ್ಯುಮೆಂಟ್‌ಗಿಳಿದ ಮಹೇಶ. ತಾನು ಬಡವನೆಂದು, ತನ್ನ ವಸ್ತುಗಳಲ್ಲೊಂದನ್ನಾದರೂ ಕೊಳ್ಳುವಂತೆ ಗುಂಪುಗೂಡಿದ್ದ ಪ್ರಯಾಣಿಕರನ್ನು ಪ್ರಾರ್ಥಿಸಿಕೊಂಡ. ಆ ದಿನ ಕನಿಷ್ಠ ಹತ್ತು ರೂಪಾಯಿಗಳನ್ನಾದರೂ ಸಂಪಾದಿಸದಿದ್ದರೆ ತಾನೂ, ತನ್ನ ಹೆಂಡತಿ ಮಕ್ಕಳು ಉಪವಾಸವಿರಬೇಕಾಗುತ್ತದೆಂದು ಗೋಗರೆದ.

ಅವನ ಪ್ರಾರ್ಥನೆ ಹೆಚ್ಚಾದಷ್ಟೂ-ಹಡಗಿನ ಸಿಂಬದಿ ಇನ್ನಷ್ಟು ಮೊಂಡಾಗತೊಡಗಿದರು. ಅವರ ನಿರ್ಬಂಧ ಜೋರಾಯಿತು. ಅವರ ಗಂಟಲು ಜೋರಾದಷ್ಟೂ ಮಹೇಶನ ವಾಯ್ಸ್ ಹೆಚ್ಚಾಗ ತೊಡಗಿತ. ಮಾತುಗಳಿಂದೇನೂ ಪ್ರಯೋಜನವಿಲ್ಲವೆಂದು ಗ್ರಹಿಸಿ ಅವರೆಲ್ಲಾ ಸೇರಿಕೊಂಡು ಮಹೇಶನನ್ನು ಬಲವಂತವಾಗಿ ಕೆಳಗೆ ನೀರಿನ ಮೇಲೆ ತೇಲುತ್ತಿದ್ದ ತೆಪ್ಪಕ್ಕೆ ಎತ್ತಿಸೆಯಲು ಪ್ರಯತ್ನಿಸಿದರು.

ಆ ಕಾರಣದಿಂದ ಡೆಕ್ ಮೇಲೆ ಸಣ್ಣದೊಂದು ದೊಂಬಿಯೇ ಶುರುವಾಯಿತು.

ಆ ಗಲಾಟೆ ತನ್ನಷ್ಟಕ್ಕೆ ಅಣಗೀತೆಂದು ತನ್ನ ಕೆಲಸದಲ್ಲಿ ಮಗ್ನನಾಗಿದ್ದ ನೌಕೆಯ ಕ್ಯಾಪ್ಟನ್ ಇನ್ನು ತಡೆಯಲಾಗದೆ ಮುಖ ಗಂಟಿಕ್ಕಿ ಹೊರಕ್ಕೆ ಬಂದ.

"ಸರ್....ಯಾರೋ ಅಚ್ಚೇಪಾರಿ ಸಾಮಾನು ಮಾರುತ್ತೇನೆಂದು

ಮೇಲೆ ಬಂದುಬಿಟ್ಟಿದ್ದಾನೆ. ಎಷ್ಟು ಹೇಳಿದರೂ ಕೇಳುತ್ತಿಲ್ಲ. ಬಲವಂತವಾಗಿ ಕೊಂದಬ್ಬಲು ಪ್ರಯತ್ನಿಸಿದರೂ ಸಾಧ್ಯವಾಗುತ್ತಿಲ್ಲ. ಮಾಸ್ಟ್ ಬುಟ್ಟಿಯಂತೆ ಕಚ್ಚಿಕೊಂಡು ಬಿಟ್ಟಿದ್ದಾನೆ. ಅಲ್ಲಾಡಿಸಲೂ ಆಗುತ್ತಿಲ್ಲ...." ಕಂಪ್ಲೇಂಟ್ ಮಾಡಿದ ಒಬ್ಬ ನಾವಿಕ.

ಕ್ಯಾಪ್ಟನ್ ಕಂಡೊಡನೆ ಎಲ್ಲರೂ ಶಿಸ್ತಿನೊಡನೆ ನಿಂತರು. ಜಾರಿ ಹೋದ ಲುಂಗಿಯನ್ನು ಎತ್ತಿ ಕಟ್ಟಿ ಮಹೇಶ ಸಹ ಮಾಸ್ಟ್ ಮೇಲಿನ ಉಡದ ಪಟ್ಟು ಸಡಲಿಸಿ ನಿಂತ. ತನ್ನದೇ ಸ್ಟೈಲ್‌ನಲ್ಲಿ ಸೆಲ್ಯೂಟ್ ಮಾಡಿ ತುಂಬಿದ ಬುಟ್ಟಿಯ ಕಡೆಗೆ ತೋರಿದ.

"ಸಾರ್....ಬೊಂಬೆಗಳು....ಪೇಂಟಿಂಗ್ಸ್.... ಪಿಂಗಾಣಿಗಳು....ಎಲ್ಲಾ ಇವೆ ಐ ಸೇಲ್....ಯೂ ಬೈ....ಏನು ಬೇಕಾದರೂ ಕೊಡುತ್ತೇನೆ. ಬಹಳ ಚೀಪ್ ರೇಟ್ಸ್ ಸಾರ್....ಪ್ಲೀಸ್ ಬೈ....ಸಿಲ್ವರ್ ಗೊಂಬೆಗಳು....ರಾಜ....ರಾಣಿ....ದಂತದ ಬೊಂಬೆಗಳು....ಸಿಲ್ವರ್ ರಿಂಗ್‌ಗಳು...." ಎಂದು ಒಂದೇ ಸಮ ಉಗುಳು ನುಂಗದೆ ಹೇಳಿದ.

ಕೈನಲ್ಲಿದ್ದ ಸಿಗಾರ್ ತುಟಿಗಳ ನಡುವೆ ಕ್ಲಾಂಪ್ ಮಾಡಿದ ಕ್ಯಾಪ್ಟನ್. ತನ್ನ ಸಿಬ್ಬಂದಿಗೆ ಹೋಗಿ ಕೆಲಸ ನೋಡುವಂತೆ ಆದೇಶಿಸಿದ. ಪ್ರಯಾಣಿಕರನ್ನೂ ಕಳಿಸಿಬಿಟ್ಟ.

"ನಿನ್ನ ಸರಂಜಾಮೊಡನೆ ನನ್ನ ಕ್ಯಾಬಿನ್‌ಗೆ ಬಾ...." ಎಂದು ಮಹೇಶನಿಗೇಳಿ ಹಿಂದೆ ತಿರುಗಿದ.

ಕ್ಯಾಬಿನ್ ಡೋರ್ ಮುಚ್ಚಿ ಲಾಕ್ ಮಾಡಿ ಗಹಗಹಿಸಿ ನಕ್ಕ ಮಾರ್ಕಂಡೇಯ ಕ್ಯಾಪ್ಟನ್. "ವೆಲ್‌ಡನ್ ಮಿಸ್ಟರ್ ಮಹೇಶ್! ವೆರಿ ವೆಲ್ ಡನ್. ಕೋಡ್‌ವರ್ಡ್ ಹೇಳದಿದ್ದಲ್ಲಿ ನಾನೂ ಸಹ ಖಂಡಿತಾ ಗುರುತಿಸುತ್ತಿರಲಿಲ್ಲ." ಅನ್ನುತ್ತಾ ಕುರ್ಚಿ ತೋರಿಸಿದ.

"ಕುಮಾರ್ ಎಂಬ ಸೇಲ್ಸ್ ರಿಪ್ರೆಸೆಂಟೆಟಿವ್ ಬರುತ್ತಾನೆಂದೂ ಅವನ ಬಳಿ ಡಿಸ್ಕಸ್ ಮಾಡುವಂತೆಯೂ ನನಗೆ ಸಂದೇಶ ಬಂದಿದೆ. ಹೀಗೆ ಹರ್ಬರ್ ಹಾಕರನ ವೇಷದಲ್ಲಿ ಬಂದೀಯೆಂದು ನಾನು ಖಂಡಿತಾ ನಿರೀಕ್ಷಿಸಿರಲಿಲ್ಲ." ಗ್ಲಾಸ್‌ಗೆ ವಿಸ್ಕಿ ಹಾಕಿ ಐಸ್ ಮಿಕ್ಸ್ ಮಾಡಿ ಅಂಟಿಸುತ್ತಾ ಹೇಳಿದ.

ಎರಡು ಗುಟುಕು ಹೀರಿ ಗ್ಲಾಸ್ ಟೇಬಲ್ ಮೇಲಿಟ್ಟುಬಿಟ್ಟ ಮಹೇಶ.

ಹೆಚ್ಚು ಕುಡಿದರೆ ವಾಸನೆ ಬರುತ್ತದೆ. ಅಷ್ಟೊಂದು ಹೈಕ್ಲಾಸ್ ಡ್ರಿಂಕ್ಸ್ ತೆಗೆದುಕೊಳ್ಳುವಷ್ಟು ಸ್ಥಿತಿವಂತರಲ್ಲ ಡರ್ಟಿ ಜನ.

"ಈ ದಿನ ಬೆಳಗಿನ ಜಾವ ಮೂರು ಗಂಟೆಯವರೆಗೆ ನೀವು ನಿರೀಕ್ಷಿಸ್ತಿದ್ದ ವೇಷದೊಡನೆಯೇ ಇದ್ದೆ. ದುರದೃಷ್ಟವಶಾತ್ ನನ್ನ ಕವರ್ ಬಯಲಿಗೆ ಬಂತು. ಸೋ....ತಕ್ಷಣ ವೇಷ ಬದಲಾಯಿಸಬೇಕಾಯಿತು." ಅನ್ನುತ್ತಾ ನಡೆದುದ್ದನ್ನೆಲ್ಲಾ ವಿವರಿಸಿದ.

"ಇದೆಲ್ಲಾ ಏನೆಂಬುದೇ ದೊಡ್ಡ ಸಸ್ಪೆನ್ಸ್ ನನಗೆ. ಲೀವ್‌ನಿಂದ ಬಂದು ಡ್ಯೂಟಿ ರಿಪೋರ್ಟ್ ಮಾಡಿಕೊಂಡೊಡನೆ ತಕ್ಷಣ ಸಿಂಗಪುರ್‌ಗೆ ಹೋಗಿ ಅಲ್ಲಿಂದ ಡರ್ಟಿಗೆ ಬಂದು ಇಲ್ಲಿ ನಿನ್ನ ಭೇಟಿಯಾಗುವಂತೆ ಆರ್ಡರ್ಸ್ ಕೊಟ್ಟರು. ಸಿಲ್ವರ್ ಕಿಂಗ್‌ಗೆ ಸಂಬಂಧಿಸಿದಂತೆ ನೇವಿ ಇಂಟೆಲಿಜೆನ್ಸ್ ನಮ್ಮ ಸಹಾಯ ಕೋರಿದೆಯೆಂದಷ್ಟೇ ಗೊತ್ತು ನನಗೆ. ಮಿಕ್ಕ ವಿವರಗಳನ್ನೆಲ್ಲಾ ನಿನ್ನ ಬಳಿಯೇ ಪಡೆಯುವಂತೆ ತಿಳಿಸಲಾಯಿತು." ಸಿಗಾರ್ ಹೊಗೆ ಹೊರ ಚೆಲ್ಲುತ್ತಾ ಕ್ಷಣ ತಡೆದ ಕ್ಯಾಪ್ಟನ್.

ಕಾತರದೊಡನೆ ಅವನ ಮುಂದಿನ ಮಾತುಗಳಿಗಾಗಿ ಕಾಯ್ದ ಮಹೇಶ.

"ವೆಲ್ ಡಿಯರ್ ಕೆ7....ಇಟೀಸ್ ಲೈಕ್ ದಿಸ್...." ಅನ್ನುತ್ತಾ ಸಿಗಾರ್ ಆಷ್‌ಟ್ರೇಯಲ್ಲದುಮಿ ಟೇಬಲ್ ಮೇಲೆ ಬಗ್ಗಿದ ಕ್ಯಾಪ್ಟನ್, "ಬಹುಶಃ ಸಿಲ್ವರ್ ಕಿಂಗ್ ವಿಷಯ ನಿನಗೆ ತಿಳಿದೇ ಇರುತ್ತದೆ. ಪ್ರಪ್ರಥಮ ಬಾರಿಗೆ ಭಾರತದಲ್ಲೇ ಸಂಪೂರ್ಣವಾಗಿ ತಯಾರಾದ ಏಕೈಕ ಸಬ್ ಮೆರೀನ್ ಅದು. ಕಳೆದ ಯುದ್ಧಗಳಲ್ಲಿ ನೇವಿ ನಿರ್ವಹಿಸಿದ ಪಾತ್ರ ಗಮನಿಸಿ, ಸರ್ಕಾರ ನೌಕಾ ಪಡೆಯನ್ನು ಮತ್ತಷ್ಟು ಬಲಯುತಗೊಳಿಸುವ ನಿರ್ಧಾರ ಕೈಗೊಂಡದ್ದರ ಫಲಿತಾಂಶವೇ ಸಿಲ್ವರ್ ಕಿಂಗ್. ಸೋವಿಯೆಟ್ ಸರ್ಕಾರದ ಸಾಂಕೇತಿಕ ಸಹಕಾರದೊಡನೆ ಅತ್ಯಾಧುನಿಕ ಮೆಷಿನರೀಸ್‌ನೊಡನೆ ಮ್ಯಾನ್ಯುಫಾಕ್ಚರ್ ಮಾಡಲಾಗಿದೆ ಅದನ್ನ. ಆದರ ಪ್ಲಾನ್ ಆಟಾಮಿಕ್ ಸಬ್ ಮೆರೀನ್ಸ್ ಸಹ ತಡೆಯಲಾಗದೆಂಬ ವದಂತಿ ಹರಡಿತು. ಎಷ್ಟು ಸೀಕ್ರೆಟ್ಟಾಗಿಡಲು ಪ್ರಯತ್ನಿಸಿದರೂ ವಿವರಗಳು ಪಬ್ಲಿಕ್ಕಾಗಿ ಬಿಟ್ಟವು. ನಮ್ಮ ಶತ್ರುಗಳು ಸಿಲ್ವರ್‌ಕಿಂಗ್ ಮೇಲೊಂದು ಕಣ್ಣಿರಿಸಿದ್ದರು. ಸಾಧ್ಯವಾದರೆ ಅದು

ನಿರ್ಮಾಣಾವಸ್ಥೆಯಲ್ಲಿರುವಾಗಲೇ ಹಾಳುಗೆಡವಲು ಪ್ಲಾನ್ ಹಾಕಿದರು. ಆದರೆ ನಮ್ಮ ಇಂಟೆಲಿಜೆನ್ಸ್ ವಿಭಾಗದವರು ಅದನ್ನು ತಡೆದರು.

"ಎರಡು ತಿಂಗಳ ಹಿಂದೆ ಸಿಲ್ವರ್‌ಕಿಂಗ್ ನೀರಿನೊಳಕ್ಕೆ ಪ್ರವೇಶಿಸಿತು. ಅದರ ಮ್ಯಾಕ್ಸಿಮಮ್ ಕೆಪಾಸಿಟಿ ಪರೀಕ್ಷಿಸಲೋಸುಗ ಇಂಟರ್ ನ್ಯಾಷನಲ್ ವಾಟರ್ಸ್‌ನಲ್ಲಿ ಪರ್ಯಟನೆಗೆಂದು ಕಳಿಸಲಾಯಿತು. ಸರಿಯಾಗಿ ತಿಂಗಳ ಹಿಂದೆ ಇಂಡಿಯನ್ ಓಷನ್‌ನಲ್ಲಿ ಅನಿರೀಕ್ಷಿತ ಸಂಘಟನೆಯೊಂದು ಜರುಗಿ ಹೋಯಿತು...." ಎಂದು ಹೇಳಿ ಇನ್ನೊಂದು ಸಿಗಾರ್ ಹಚ್ಚಲು ಕ್ಷಣ ತಡೆದ ಕ್ಯಾಪ್ಟನ್. "ಸಿಲ್ವರ್ ಕಿಂಗ್‌ನಲ್ಲಿ ಪ್ರತಿಯೊಂದು ಯಂತ್ರವೂ ಆಟೊಮ್ಯಾಟಿಕ್ ಆಗಿ ಕೆಲಸ ಮಾಡುತ್ತದೆ. ಅದರ ಪ್ರತಿಯೊಂದು ಮೂವ್‌ಮೆಂಟ್ ಒಂದು ಕಂಪ್ಯೂಟರ್ ನಿಯಂತ್ರಣದಲ್ಲಿರುತ್ತದೆ. ಇದ್ದಕ್ಕಿದ್ದಂತೆ ಒಂದು ದಿನ ಕಂಪ್ಯೂಟರ್‌ನ ಒಂದು ಪಾರ್ಟ್ ಕೆಟ್ಟುಹೋಯಿತು. ಅದು ಬಹು ಮುಖ್ಯವಾದ ಕಂಟ್ರೋಲಿಂಗ್ ಪ್ಲೇಸ್. ಅದರಿಂದ ಸಿಲ್ವರ್ ಕಿಂಗ್ ಮೂವ್‌ಮೆಂಟ್‌ಗೆ ಅಪಾಯವುಂಟಾಯಿತು. ತಕ್ಷಣ ಚಲನೆ ನಿಲ್ಲಿಸಿ ಒಂದೆಡೆ ಅಡಗಿಕೊಂಡಿತು ಸಿಲ್ವರ್ ಕಿಂಗ್ ಕಂಪ್ಯೂಟರ್ ನಿರ್ದೇಶನದಂತೆ. ಆ ವಿಷಯು ನಮ್ಮ ಶತ್ರು ರಾಷ್ಟ್ರಗಳಿಗೂ ತಿಳಿದುಹೋಯಿತು."

"ದಟ್ ಮೀನ್ಸ್....ಸಿಲ್ವರ್ ಕಿಂಗ್ ತೀವ್ರ ಅಪಾಯಕ್ಕೆ ಸಿಲುಕಿದೆಯೆಂದಾಯಿತು. ಅದು ಎಲ್ಲಿದೆಯೆಂದು ತಿಳಿದುಬಿಟ್ಟರೆ ಟಾರ್ಪೆಡೋಸ್ ಅಥವಾ ಬಾಂಬ್‌ಗಳನ್ನು ಹಾಕಿ ನಾಶ ಮಾಡಲೂ ಹಿಂದೆಗೆಯರು ಶತ್ರುಗಳು." ತನ್ನ ಮನದಭಿಪ್ರಾಯು ತಿಳಿಸಿದ ಮಹೇಶ.

"ಎಕ್ಸಾಕ್ಟ್ಲೀ!" ಅಂದ ಕ್ಯಾಪ್ಟನ್.

"ಎಲ್ಲಿದೆ ಈಗ ಸಿಲ್ವರ್ ಕಿಂಗ್?" ಕೇಳಿದ ಮಹೇಶ.

ತಲೆ ಅಡ್ಡಡ್ಡ ತಿರುಗಿಸಿದ 'ಮಾರ್ಕಂಡೇಯು' ಕ್ಯಾಪ್ಟನ್. "ಕೆಟ್ಟು ಹೋದೊಡನೆ ನೀರಿನಲ್ಲಿ ಮುಳುಗಿ ಅಲ್ಲೊಂದೆಡೆ ಸ್ಥಗಿತಗೊಂಡಿತು. ಮೇಲೆ ಬಂದರೆ ಶತ್ರುಗಳ ಅರಿವಿಗೆ ಬಂದೀತೆಂಬ ಭಯ. ರೇಡಿಯೋ ಸಿಗ್ನಲ್ಸ್ ಕಳಿಸಲೂ ಅವಕಾಶವಿಲ್ಲದಂತಾಗಿದೆ. ಶತ್ರುಗಳು ಎಲ್ಲೆಡೆ ಹದ್ದಿನ ಕಣ್ಣುಗಳೊಡನೆ ಕಾದು ಕುಳಿತಿದ್ದಾರೆ. ಅದ್ದರಿಂದಲೇ ಸಿಲ್ವರ್‌ಕಿಂಗ್ ಕ್ಯಾಪ್ಟನ್ ಒಬ್ಬ ಲೆಫ್ಟಿನೆಂಟ್‌ನನ್ನು ತೀರಕ್ಕೆ ಕಳಿಸಿದ. ಸಿಲ್ವರ್ ಕಿಂಗ್‌ನಲ್ಲಿ ಇಬ್ಬರೂ ಮಾತ್ರ ಪ್ರಯಾಣಿಸಲು ಸಾಧ್ಯವಾಗುವ ಮಿನಿ ಸಬ್ ಮೆರೀ

ನೊಂದು ಎಮರ್ಜೆನ್ಸಿಗೆಂದೇ ಇರಿಸಲ್ಪಟ್ಟಿದೆ. ಅದರ ಮೂಲಕ ಅವನು ಬಾಲಿ ದ್ವೀಪ ತಲುಪಿದ. ಮಿನಿಸಬ್ ಮೆರೀನ್ ತೀರದಲ್ಲಡಗಿಸಿ ಅಲ್ಲಿಂದ ನಮ್ಮ ಎಂಟೀಸಿ ಕಾಂಟ್ಯಾಕ್ಟ್ ಮಾಡಿ ವಿಷಯ ತಿಳಿಸಿದ." ಅನ್ನುತ್ತಾ ಒಂದು ಕಪೋರ್ಡ್ ತೆಗೆದು ಎರಡಂಗುಲ ಅಗಲವಿದ್ದ ನಾಲ್ಕಂಗುಲ ಉದ್ದದ ರೂಪಾಯಿ ನಾಣ್ಯದ ಥಿಕ್‌ನೆಸ್‌ನ ಮೆಟಲ್ ಕಾರ್ಡೊಂದನ್ನು ಮಹೇಶನ ಕೈಗಂಟಿಸಿದ ಕ್ಯಾಪ್ಟನ್.

"ಸಿಲ್ವರ್ ಕಿಂಗ್‌ನಲ್ಲಿನ ಕಟ್ಟು ಹೋದ ಪಾರ್ಟ್ ಇದು. ಎಲೆಕ್ಟ್ರಾನಿಕ್ ಸರ್ಕ್ಯೂಟ್ ಕಾರ್ಡ್. ಕಟ್ಟು ಹೋಗಿರುವ ಕಾರ್ಡ್ ಜಾಗದಲ್ಲೀಗ ಇದನ್ನಿರಿಸಬೇಕು" ಅಂದ.

"ಇರಿಸೋಣ. ದಟೀಸ್ ನೋ ಪ್ರಾಬ್ಲಂ! ಆದರೆ ಸಿಲ್ವರ್‌ಕಿಂಗ್ ಈಗ ಎಲ್ಲಿದೆಯೆಂಬುದು ನಿಮಗೂ ಗೊತ್ತಿಲ್ಲವಲ್ಲ!" ಕಾರ್ಡನ್ನು ಪರಿಶೀಲಿಸುತ್ತಾ ಹೇಳಿದ ಮಹೇಶ.

"ಕರೆಕ್ಟ್! ಆದರದು ಲೆಫ್ಟಿನೆಂಟ್ ಸ್ವರೂಪ್‌ಗೆ ಗೊತ್ತು."

"ಸ್ವರೂಪ್ ಅಂದರೆ....ಬಾಲಿದ್ವೀಪಕ್ಕೆ ಬಂದು ಎಲ್ಲ ಡೀಟೈಲ್ಸ್ ಎಂಟೀಸಿಗೆ ತಿಳಿಸಿದ. ಲೆಫ್ಟಿನೆಂಟ್ ತಾನೇ?" ಕೇಳಿದ ಮಹೇಶ.

ಹೌದೆನ್ನುವಂತೆ ತಲೆಯಾಡಿಸಿದ ಮಾರ್ಕಂಡೇಯ ಕ್ಯಾಪ್ಟನ್.

"ಎಲ್ಲಿದ್ದಾನೆ ಅವನೀಗ?" ಕೇಳಿದ ಮಹೇಶ.

"ಗೊತ್ತಿಲ್ಲ!" ನಿರ್ಲಕ್ಷ್ಯ ಧ್ವನಿಯಲ್ಲಿ ಹೇಳಿದ ಕ್ಯಾಪ್ಟನ್.

"ವೆರಿಗಾಡ್!" ಫ್ಲೇರಪ್ ಆದ ಕ್ಯಾಪ್ಟನ್, "ಹೀಗಾದರೆ ಹೇಗೆ? ನಾನು ಮುಂದುವರಿಯಲು ಆಧಾರಗಳೇನಿವೆ? ಸಿಲ್ವರ್‌ಕಿಂಗ್ ಎಲ್ಲಿದೆಯೆಂದು ಗೊತ್ತಿಲ್ಲ. ಅದೆಲ್ಲಿದೆಯೆಂದು ಗೊತ್ತಿರುವುದು ಲೆಫ್ಟಿನೆಂಟ್ ಸ್ವರೂಪ್‌ಗೆ ಮಾತ್ರ. ಆದರೆ ಅವನೆಲ್ಲಿದ್ದಾನೆಂಬುದೇ ದೊಡ್ಡ ಸಸ್ಪೆನ್ಸ್! ಆಲ್‌ರೈಟ್! ಈ ಕಾರ್ಡ್ ಲೆಫ್ಟಿನೆಂಟ್ ಸ್ವರೂಪ್‌ಗೆ ಡೈರೆಕ್ಟಾಗಿ ಎಂಟೀಸಿಯಿಂದ ಹಾಗೆಯೇ ಕೈ ಸೇರಿಸಬಹುದಿತ್ತಲ್ಲ!" ಕೇಳಿದ.

"ಖಂಡಿತಾ ಹಾಗೇ ಮಾಡಬಹುದಿತ್ತು. ಆದರೆ ಏಕೆ ಮಾಡಲಿಲ್ಲವೆಂದು ನನಗಂತೂ ಗೊತ್ತಿಲ್ಲ. ನನಗೆ ಬಂದ ಆರ್ಡರ್ಸ್ ಬಹಳ ಕ್ಲಿಯರ್ ಕಟ್ ಆಗಿದೆ. ಈ ಕಾರ್ಡ್ ನಿನಗೆ ಕೊಟ್ಟು ಎಂಟೀಸಿಯನ್ನು ಕಾಂಟ್ಯಾಕ್ಟ್

ಮಾಡುವಂತೆ ಡೈರೆಕ್ಟ್ ಮಾಡಲು ಸೂಚಿಸಿದ್ದಾರೆ. ದಟ್ಸಾಲ್ !" ಅಂದ ಕ್ಯಾಪ್ಟನ್.

ಕಾರ್ಡ್ ಸೊಂಟಕ್ಕೆ ಸಿಗಿಸಿಕೊಂಡು ಬಾಗಿಲ ಬಳಿಗೆ ನಡೆದು ನಿಂತ ಮಹೇಶ, "ಹಾಗಾದರೆ....ಮಾರ್ಕಂಡೇಯ....?" ಕೇಳಿದ.

"ಇನ್ನೂ ಕೆಲದಿನಗಳ ಕಾಲ ಇಲ್ಲೇ ಇರುತ್ತದೆ. ಬಾಯ್ಲರ್ ಕೆಟ್ಟು ಹೋಗಿದೆ. ದಟೀಸ್ ದ ರೀಸನ್ !" ಅಂದ ಮುಗುಳ್ನಗೆಯೊಡನೆ ಕ್ಯಾಪ್ಟನ್.

"ರೈಟ್ ದೆನ್ ! ನಾನು ಮತ್ತೆ ಭೇಟಿಯಾಗಬೇಕೆಂದರೆ ಹೇಗೆ ?"

"ಫೋರ್ ಅಂಡ್ ಟೆನ್ ಎ.ಎಂ. ಪಿ.ಎಂ ವಾಟರ್ ಅಂಡ್ ಫೈರ್ !" ಅಂದ ಕ್ಯಾಪ್ಟನ್.

ತಲೆಯಾಡಿಸಿ ಹೊರಕ್ಕೆ ಬಂದ ಮಹೇಶ. ಬುಟ್ಟಿಯನ್ನೆತ್ತಿಕೊಂಡು ಸಕ್ರ್ಯೂಟ್ ಕಾರ್ಡ್ ಸಾಮಾನುಗಳ ನಡುವೆ ಅಡಗಿಸಿದ ಒಂದು ಸಣ್ಣ ಬಾಕ್ಸಿನಿಂದ ಅಷ್ಟು ಚಿಲ್ಲರೆ ತೆಗೆದು ಹಿಂಬಾಲಿಸಿ ಬಂದು ಕ್ಯಾಪ್ಟನ್ ಕೈಗೆ ಕೊಟ್ಟು ನೂಲೇಣಿಯ ಮೂಲಕ ತೆಪ್ಪದ ಮೇಲಕ್ಕೆ ಬಂದ.

"ಏನಾಯಿತು ? ಏನಾದರೂ ಕೊಂಡರೇ ?" ಕೇಳಿಸಿದ ತೆಪ್ಪದ ಓನರ್.

"ಕತ್ತೆಗಳು....ಹಂದಿಗಳು....ನಾಯಿಗಳು ಇಷ್ಟೊತ್ತು ಕಾಯಿಸಿ ಹತ್ತು ರೂಪಾಯಿಗಳಷ್ಟು ವ್ಯಾಪಾರ ಮಾಡಿದರು." ಎಂದು ಗೊಣಗುತ್ತಾ ಐದು ರೂಪಾಯಿ ತೆಪ್ಪದ ಓನರ್ ಕೈನಲ್ಲಿ ತುರುಕಿದ

# 3

ಇಂಡಿಯನ್ ಎಂಟಿಸಿಯ ಮುಂದೆ ನಿಂತು ಸುತ್ತಲೂ ನೋಡಿದ ಮಹೇಶ. ತನ್ನನ್ಯಾರೂ ಫಾಲೋ ಮಾಡುತ್ತಿಲ್ಲವೆಂದು ಗ್ಯಾರಂಟಿಯಾಗಿ ಸಿಗರೇಟ್ ಹತ್ತಿಸಿ ನಿಧಾನವಾಗಿ ಎಲೆಕ್ಟ್ರಿಕ್ ಪೋಲ್‌ಗೊರಗಿ ನಿಂತ. ಒಂದು ಪಬ್ಲಿಕ್ ಹಮಾಮ್‌ನಲ್ಲಿ ಡರ್ಟಿ ಪಾರ್ಕ್‌ನ ವೇಷಕ್ಕೆ ಬೈ ಬೈ ಹೇಳಿದ್ದ ಅವನೀಗ ಜೀನ್ಸ್ ಪ್ಯಾಂಟ್ ಮತ್ತು ಟೀ ಷರ್ಟ್ ಧರಿಸಿ ಒಬ್ಬ ಆಧುನಿಕ ಯುವಕನ ವೇಷದಲ್ಲಿದ್ದ. ಬುಟ್ಟಿ ಮತ್ತು ಅದರಲ್ಲಿದ್ದ ಸಾಮಾನುಗಳು ಡ್ರೈನೇಜ್ ಒಂದರಲ್ಲಿದ್ದವೀಗ. ಸಕ್ಯೂರಿಟಿ ಕಾರ್ಡ್, ಪೀಟರ್ ಐಡೆಂಟಿಫಿಕೇಷನ್ ಪೇಪರ್ಸ್, ಟ್ರಾವೆಲರ್ಸ್ ಚೆಕ್ಸ್....ಸೆಕೆಂಡ್ ಹ್ಯಾಂಡ್ ಜೀನ್ಸ್ ಪ್ಯಾಂಟಿನ ಜೇಬಿನಲ್ಲಿದ್ದವು. ರಿಕ್ಷಾವೊಂದನ್ನಿಡಿದು ಎಂಟಿಸಿಯ ಸಮೀಪ ಬಂದಿಳಿದಿದ್ದ ಮಹೇಶ.

ಸಿಗರೇಟ್ ಕೊನೆಯ ದಂ ಎಳೆದು ಕೆಳಗೆ ಹಾಕಿ ಬೂಟುಗಾಲಿಂದ ಹೊಸಕಿದ. ಕೆದರಿದ್ದ ಕೂದಲು ಸರಿ ಮಾಡಿಕೊಳ್ಳುತ್ತಾ ಗೇಟು ದಾಟಿ ಎಂಟಿಸಿಯೊಳಕ್ಕೆ ಪ್ರವೇಶಿಸಿದ. ವೈಸ್ ಹಾಲ್‌ನಲ್ಲೀ ರಿಸೆಪ್ಷನಿಸ್ಟ್ ಅವನನ್ನು ಮಾತಾಡಿಸಿದಳು.

"ಎಸ್ ಸಾರ್....ವಾಟ್ ಕೆನ್ ಐ ಡೂ ಫಾರ್ ಯು?" ಕೇಳಿದಳು.

ಏನೋ ಆಗಬಾರದ್ದು ಆಗಿ ಹೋಗಿದೆಯೆಂಬಂತೆ ನಟಿಸುತ್ತಾ ಅವಳು ನೋಡಿದೊಡನೆ ಎಂಟಿಸಿ ಅಧಿಕಾರಿಯನ್ನು ಭೇಟಿಯಾಗಬೇಕೆಂದ. ಬಹಳ ಅರ್ಜೆಂಟ್ ಕೆಲಸ, ತಕ್ಷಣ ನೋಡದಿದ್ದರೆ ಬಹಳ ತೊಂದರೆಯಾಗುತ್ತದೆ ಎಂದು ಅವಸರಿಸಿದ.

ಕ್ಷಣ ಕಟಪಟಾಯಿಸಿ ಇಂಟರ್ ಕಾಮ್‌ನಲ್ಲಿ ಯಾರೊಡನೆಯೋ ಮಾತಾಡಿದಳವಳು.

"ಅಂಬಾಸಡರ್ ಇಲ್ಲ....ಸೆಕ್ಷನ್ ಹೆಡ್ ಜೊತೆಗೆ ಮಾತಾಡುವಿರಾ?" ಕೇಳಿದಳು.

ಈ ಸಲ ಕಟಿಪಿಟಾಯಿಸುವುದು ಮಹೇಶನ ಸರದಿ! ತನ್ನ ಆಗಮನ ಎಷ್ಟು ರಹಸ್ಯವಾಗಿದ್ದರೆ ಅಷ್ಟು ಒಳ್ಳೆಯದು. ಎಂಬೆಸಿಯಿಂದ ಸೀಕ್ರೆಟ್ಸ್ ಹೊರಬೀಳುವ ಸಾಧ್ಯತೆಯಿಲ್ಲದಿದ್ದರೂ ತನ್ನ ಹುಷಾರಲ್ಲಿ ತಾನಿರುವುದು ಒಳ್ಳೆಯದು. ಹಾಗೆಂದು ವಾಪಸ್ಸಾಗುವಂತೆಯೂ ಇಲ್ಲ. ಅಂಬಾಸಡರ್ ಯಾವಾಗ ಬರುತ್ತಾರೋ ಗೊತ್ತಿಲ್ಲ. ಮತ್ತೊಮ್ಮೆ ಇಲ್ಲಿಗೆ ಬಂದು ಅವರ ಭೇಟಿಯಾಗುವುದು ಮಹಾ ರಿಸ್ಕ್. ತಾನು ಎಂಬೆಸಿಯ ಬಳಿಯೇ ನಾಲ್ಕೈದು ಸಲ ಕಾಣಿಸಿಕೊಳ್ಳುವುದು ಶತ್ರುಗಳಿಗೆ ಅನುಮಾನ ತರಬಹುದು.

64-248a

ಸೆಕ್ಷನ್ ಚೀಫ್ ಜೊತೆಗೇ ಮಾತಾಡಲು ನಿರ್ಧರಿಸಿ ಅವಳ ಹಿಂದೆ ನಡೆದ ಮಹೇಶ. ಎರಡು ಕೊಠಡಿ ದಾಟಿ ಮೂರನೇ ಕೊಠಡಿಯ ಮುಂದೆ ಮಹೇಶನನ್ನು ನಿಲ್ಲಿಸಿ ಒಳಕ್ಕೆ ಹೋಗಿ ನಿಮಿಷದ ನಂತರ ವಾಪಸ್ಸಾದಳಾಕೆ. ಒಳಕ್ಕೆ ಹೋಗುವಂತೆ ಮಹೇಶನಿಗೆ ಸೂಚಿಸಿದಳು.

ಅವಳಿಗೆ ಧನ್ಯವಾದಗಳನ್ನರ್ಪಿಸಿ ಒಳಕ್ಕೆ ಪ್ರವೇಶಿಸಿದ ಮಹೇಶ. ಏರ್‌ಕಂಡೀಷನ್ಡ್ ಕೊಠಡಿಯಲ್ಲಿ ದೊಡ್ಡ ಟೇಬಲ್ ಹಿಂದೆ ಕುಳಿತಿದ್ದನೊಬ್ಬ ಅಧಿಕಾರಿ. ಮಹೇಶನ ಕೈಕುಲುಕಿ ಚೇರೊಂದರಲ್ಲಿ ಕೂರುವಂತೆ ಸನ್ನೆ ಮಾಡಿದ.

"ಜೆಂಟಲ್‌ಮನ್....ವಾಟ್ ಕೆನ್ ಐ ಡೂ ಫಾರ್ ಯು ?" ಕೇಳಿದ.

"ಸಾರ್....ಹದಿನಾರನೇ ಶತಮಾನದಲ್ಲಿ ಡರ್ಬಿ ದ್ವೀಪದಲ್ಲೊಂದು ಪ್ರಮುಖ ಘಟನೆ ನಡೆಯಿತು. ಅದು ನಿಮಗೆ ಗೊತ್ತೇ ?" ಪ್ರಶ್ನಿಸಿದ ಮಹೇಶ.

ಗೊತ್ತಿಲ್ಲವೆಂದ ಆಫೀಸರ್.

"ಗೊತ್ತಿಲ್ಲವೇ ? ಎಸ್ಸಾರ್ ನೀವು! ಕೆಲ ವಿದೇಶಿಯರ್ ಡರ್ಬಿಗೆ ಆಗಮಿಸಿದರು. ಅವರನ್ನು ಅಟ್ಟಿಸಿಕೊಂಡು ಬಂದ ಕಡಲ್ಗಳ್ಳರ ಡರ್ಬಿಯನ್ನು ಸುತ್ತುವರಿದರು. ಘೋರ ಯುದ್ಧವೇ ನಡೆಯಿತು ಆಗ" ಹೇಳಿದ ಮಹೇಶ.

ಅದು ಯಾವ ಪುಸ್ತಕದಲ್ಲಿರಬಹುದು ಎಂಬ ಯೋಚನೆಯೊಡನೆ ಸುಮ್ಮನಿದ್ದುಬಿಟ್ಟ ಆಫೀಸರ್.

"ಹೋಗಲಿ....ಬೀಚ್ ಬಳಿ ಇರುವ ಬುದ್ಧ ದೇವಾಲಯದ ಬಗ್ಗೆ ಗೊತ್ತೇ? ಸಂಜೆಯ ವೇಳೆಯಲ್ಲಿ ಎಷ್ಟು ಪ್ರಶಾಂತವಾಗಿ ನಿರ್ಮಾನುಷ್ಯ ವಾಗಿರುತ್ತದೆಂದು ಗಮನಿಸಿರುವಿರಾ?" ಎಂದು ಕಂಟಿನ್ಯೂ ಮಾಡಿದ ಮಹೇಶ.

ತನ್ನ ಭೇಟಿಯಾಗಲು ಬಂದ ವ್ಯಕ್ತಿ ಮೆಂಟಲ್ ಕೇಸ್ ಎಂಬ ತೀರ್ಮಾನಕ್ಕೆ ಬಂದುಬಿಟ್ಟ ಆಫೀಸರ್. ಗಲಾಟೆಯಿಲ್ಲದೆ ಅವನಿಂದ ಪಾರಾ ಗುವುದು ಹೇಗೆಂಬ ಯೋಚನೆಗೆ ಬಿದ್ದ.

"ಏನ್ಸಾರ್....ಏನು ಕೇಳಿದರೂ ಗೊತ್ತಿಲ್ಲವೆಂದೇ ಹೇಳುತ್ತಿರುವಿರಿ! ಉತ್ತರ ದಿಕ್ಕಿನಿಂದ ಕಪ್ಪು ನೆರಳಾವರಿಸಿ ಬರುತ್ತಿದೆ. ಸದ್ಯಕ್ಕೊಂದು ನೆರಳು ಡರ್ಬಿಯಲ್ಲೇ ಇದೆ. ಅದನ್ನು ನೋಡಬೇಕೆಂದರೆ ಈ ದಿನ ಆರು ಗಂಟೆಗೆ ಬೌದ್ಧಾಲಯದ ಬಳಿಗೆ ಹೋಗುವುದು ಒಳ್ಳೆಯದು. ಸೀಯು!" ಅನ್ನುತ್ತಾ ಉತ್ತರಕ್ಕಾಗಿ ಕಾಯದೆ ಮೇಲೆದ್ದು ಹೊರಕ್ಕೆ ನಡೆದುಬಿಟ್ಟ ಮಹೇಶ.

ಆಫೀಸರ್‌ಗೆ ತನ್ನ ಮಾತುಗಳು ಅರ್ಥವಾಗಿರಲಾರವು. ಎಂಬೆಸಿ ರೂಲ್ಸ್ ಪ್ರಕಾರ ಈ ವಿಷಯ ಸಂಜೆಗೆ ಅಂಬಾಸಡರ್‌ಗೆ ರಿಪೋರ್ಟ್ ಮಾಡಲೇಬೇಕು.. ಅವರು ಖಂಡಿತಾ ಅರ್ಥಮಾಡಿಕೊಳ್ಳುತ್ತಾರೆಂಬ ನಂಬಿಕೆ ಮಹೇಶನಿಗೆ.

ಐದುಗಂಟೆಗಳವರೆಗೆ ಡರ್ಬಿಯ ರಸ್ತೆಗಳನ್ನೆಲ್ಲಾ ಸರ್ವೆ ಮಾಡಿದ ನಂತರ ಒಂದು ಟ್ಯಾಕ್ಸಿ ಹತ್ತಿ ಸರಿಯಾಗಿ ಆರುಗಂಟೆಯ ವೇಳೆಗೆ ಬೌದ್ಧಾಲ ಯದ ಬಳಿಗೆ ಬಂದಿಳಿದ.

ದೇವಾಲಯದ ಸುತ್ತಲೂ ದಟ್ಟ ನೆರಳಾವರಿಸಿತ್ತು. ಕಡು ಕೆಂಪು ಫೈರ್ ವಾಲ್‌ನಂತೆ ತೋರುತ್ತಿರುವ ಸೂರ್ಯ ಪಶ್ಚಿಮ ಸಮುದ್ರದೊಳಕ್ಕಿ ಳಿಯುತ್ತಿದ್ದ.

ಆಲ್ ಮೋಸ್ಟ್ ನಿರ್ಮಾನುಷ್ಯವಾಗಿತ್ತು ಆ ಪ್ರದೇಶ.

ಸಿಗರೇಟೊಂದನ್ನು ಹತ್ತಿಸಿಕೊಂಡು ಒಂದು ಪಿಲ್ಲರ್ ಒರಗಿ ಕುಳಿತ ಮಹೇಶ. ಆಗೂ ಹತ್ತೊಂದು ಸೂಚಿಸುತ್ತಿತ್ತು ರಿಸ್ಟ್‌ವಾಚ್.

ಇನ್ನು ಹತ್ತು ಹದಿನೈದು ನಿಮಿಷಗಳಲ್ಲಿ ದೂರದಿಂದ ಯಾರೋ ಒಬ್ಬರು ಬರಲೇಬೇಕು.

ಅರೂವರೆಯಾಯಿತು ದೂರದಲ್ಲಿ ಕಾಣ ಬಂದ ಒಂದಿಬ್ಬರು ವ್ಯಕ್ತಿಗಳು ಹೊರಟು ಹೋದರು. ಸಿಗರೇಟ್ ಚೈನ್‌ಸ್ಮೋಕ್ ಮಾಡುತ್ತಾ ಸಹನೆಯೊಡನೆ ಕಾದು ಕುಳಿತೇ ಇದ್ದ ಮಹೇಶ. ಆರೂ ಐವತ್ತಕ್ಕೆ ಯಾರೋ ಒಬ್ಬ ಸರಸರನೆ ಅತ್ತ ಕಡೆಗೆ ನಡೆದು ಬರುತ್ತಿರುವುದು ಕಾಣಿಸಿತು.

ಹತ್ತಿರವಾದಾಗ ಎದ್ದು ನಿಂತ ಮಹೇಶ.

"ಯಾರನ್ನಾದರೂ ಭೇಟಿಯಾಗುವ ಸಲುವಾಗೀ ಬಂದಿರಾ?" ಕೇಳಿದ.

"ನೋ!" ಅಂದ ಬಂದಾತ.

"ಕತ್ತಲು ದಟ್ಟವಾಗಿ ಆವರಿಸಿದೆ. ಬೆಳದಿಂಗಳಿಲ್ಲದಿದ್ದರೆ ನೆರಳುಗಳು ಕಾಣಿಸವು."

"ನೆರಳು ನೋಡಬೇಕೆಂದರೆ ಇಲ್ಲಿ ಬರುವಂತೆ ತಿಳಿಸಿದವರಲ್ಲ ಯಾರೋ"

ಮುಗುಳ್ನಕ್ಕ ಮಹೇಶ. ತೋರು ಬೆರಳು ಹಣೆಗೆ ಸೋಕಿಸಿ ಸೆಲ್ಯೂಟ್ ಮಾಡಿ ತನ್ನ ಐಡೆಂಟಿಟಿ ಪ್ರದರ್ಶಿಸಿದ ನಗುತ್ತಾ ಅವನ ಕೈ ಹಿಡಿದು ಕುಲುಕಿದ ಇಂಡಿಯನ್ ಅಂಬಾಸಡರ್.

"ನಿನಗಾಗಿ ಎರಡು ದಿನಗಳಿಂದ ಹದ್ದಿನ ಕಣ್ಣುಗಳೊಡನೆ ಕಾದು ಕುಳಿತಿದ್ದೇನೆ ಡಿಯರ್ 'ಚಂಕ್' ಈ ದಿನ ತುರ್ತು ಕೆಲಸವೊಂದರ ಮೇಲೆ ಹೋಗಲೇಬೇಕಾಗಿ ಬಂತು. ವಾಪಸ್ಸಾದೊಡನೆ ಹುಚ್ಚನೊಬ್ಬನಿಂದ ಹುಚ್ಚುಚ್ಚಾಗಿ ಏನೋ ಮಾತಾಡಿ ಹೋದನೆಂದು ತಿಳಿಯಿತು. ಅರ್ಧ ಗಂಟೆ ತಲೆ ಕೆಡಿಸಿಕೊಂಡ ನಂತರ ವಿಷಯವೇನೆಂದು ಅರ್ಥವಾಯಿತು. ತಕ್ಷಣ ಹೊರಟು ಬಂದೆ" ಅಂದ ಅಂಬಾಸಡರ್.

"ನೀವು ಇಲ್ಲಿ ಬಹಳ ಹೊತ್ತು ನಿಂತಿರುವುದು ಒಳ್ಳೆಯದಲ್ಲ ಸಾರ್" ಮೆಲುದನಿಯುಲ್ಲಿ ಎಚ್ಚರಿಸಿದ ಮಹೇಶ.

"ನನ್ನ ಕಾರು ರಸ್ತೆಯಲ್ಲಿ ನಿಲ್ಲಿಸಿ ಬಂದಿದ್ದೇನೆ. ಅದರಲ್ಲಿ ಹೋಗುತ್ತಾ ಮಾತಾಡಬಹುದು" ಅಂದ ಅಂಬಾಸಡರ್.

ತಲೆ ನಕಾರಾತ್ಮಕವಾಗಿ ಅಡಿಸಿದ ಮಹೇಶ ಡರ್ಬಿಯಲ್ಲಿ ಇಳಿದ ಕೆಲವೇ ಗಂಟೆಗಳಲ್ಲಿ ನನ್ನ ಕವರ್ ಶತ್ರುಗಳಿಗೆ ತಿಳಿದುಹೋಯಿತು. ನಿಮ್ಮ ಕಾರನ್ನು ಯಾರಾದರೂ ಫಾಲೋ ಮಾಡುತ್ತಿದ್ದಲ್ಲಿ ನಾನು ತೊಂದರೆಗೆ ಸಿಕ್ಕಿ ಕೊಳ್ಳುತ್ತೇನೆ. ಈ ಸಲ ಪಾರಾಗುವುದು ಕಷ್ಟ" ಅಂದ.

ಐದು ಕ್ಷಣ ಯೋಚಿಸಿ ಆ ಕತ್ತಲಲ್ಲೇ ಒಂದು ಕಾರ್ಡ್ ಮೇಲೆ ಏನೋ ಬರೆದುಕೊಟ್ಟ ಅಂಬಾಸಡರ್. "ನೀನು ನೇರ ಅಲ್ಲಿಗೆ ಹೋಗಿ ವೈಟ್ ಮಾಡು ಅರ್ಧಗಂಟೆಯಲ್ಲಿ ಬಂದು ಭೇಟಿಯಾಗುತ್ತೇನೆ" ಎಂದು ಹೇಳಿದ.

ತಲೆಯಾಡಿಸಿ ಕಾರ್ಡ್ ಜೇಬಿಗೆ ತುರುಕಿಕೊಂಡು ಕತ್ತಲೆಯಲ್ಲಿ ಕಣ್ಮರೆಯಾದ ಮಹೇಶ.

# 4

ಅಂಬಾಸಡರ್ ಬರೆದುಕೊಟ್ಟಿದ್ದ ವಿಳಾಸ ಒಂದು ಕ್ಲಾತ್ ಸ್ಟೋರ್‌ದು. ಆ ಷಾಪ್ ಎಲ್ಲಿದೆಯೆಂದು ತಿಳಿಯಲೇನೂ ಕಷ್ಟವಾಗಲಿಲ್ಲ.

ಅಂಗಡಿಯ ಯಜಮಾನ ಒಬ್ಬ ಸಿಖ್. ಮಹೇಶ ಒಂದು ಕೇಳಿದರೆ ಹತ್ತು ಥಾನುಗಳನ್ನು ತೆಗೆದು ಅವನ ಮುಂದೆ ಪ್ರದರ್ಶನಕ್ಕಿಡತೊಡಗಿದ್ದ. ತನ್ನ ಅಂಗಡಿ ಪೂರ್ತಿ ಮುಂದೆ ಬಿಚ್ಚಿಡುತ್ತಾನೇನೋ ಎಂಬ ಭೀತಿ ಮಹೇಶ ನಲ್ಲುದಯಿಸುತ್ತಿರುವಾಗಲೇ ಹಿಂಬಾಗಿಲ ಮೂಲಕ ಒಳಬಂದ ಅಂಬಾಸಡರ್ ಕಾಣಿಸಿಕೊಂಡ. ಅವನನ್ನು ಕಂಡೊಡನೆ ನಮಸ್ಕರಿಸಿ ಕೌಂಟರ್ ಹಿಂದೆ ಇದ್ದ ಬಾಗಿಲು ತೆರೆದ ಷಾಪ್ ಓನರ್. ಇಬ್ಬರೂ ಒಳಹೋದೊಡನೆ ಬಾಗಿಲನ್ನು ಲಾಕ್ ಮಾಡಿ ತನ್ನ ವ್ಯಾಪಾರದತ್ತ ಗಮನ ಹರಿಸಿದ.

ಬಟ್ಟೆಗಳ ಗಂಟೊಂದರ ಕೆಳಗಿರಿಸಿದ್ದ ರೇಡಿಯೋ ಟ್ರಾನ್ಸ್‌ಮೀಟರ್ ಮಹೇಶನಿಗೆ ತೋರಿಸಿದ ಅಂಬಾಸಡರ್. ಅವಶ್ಯಕತೆಯೊದಗಿದಾಗ ಉಪಯೋಗಿಸಬಹುದೆಂದು ತಿಳಿಸಿದ

"ನಿನ್ನ ಬಳಿ ಸರ್ಕ್ಯೂಟ್ ಕಾರ್ಡ್ ಇದೆಯೇ ?" ಪ್ರಶ್ನಿಸಿದ.

"ಇದೆ. ಆದರೆ ಅದನ್ನೇನು ಮಾಡುವುದೆಂದೇ ಅರ್ಥವಾಗುತ್ತಿಲ್ಲ !" ತನ್ನ ಕಷ್ಟ ಹೇಳಿಕೊಂಡ ಮಹೇಶ.

ಸಿಗರೇಟ್ ಹತ್ತಿಸಿಕೊಂಡು ಒಂದು ಬಟ್ಟೆಗಳ ಬೇಲ್ ಮೇಲೆ ಆಸೀನನಾದ ಅಂಬಾಸಡರ್. "ಸರ್ಕ್ಯೂಟ್ ಕಾರ್ಡ್ ಸಿಲ್ವರ್ ಕಿಂಗ್‌ನೊಳಕ್ಕೆ ಸೇರಿಸುವುದು ಒಂದು ಹಂತ. ಅದನ್ನು ಕಂಪ್ಯೂಟರ್‌ನಲ್ಲಿ ಇನ್‌ಸರ್ಟ್ ಮಾಡುವುದು ಎರಡನೇ ಹಂತ." ಅಂದ ಅಂಬಾಸಡರ್.

"ಅದೇಕೆ ? ಸಿಲ್ವರ್ ಕಿಂಗ್‌ನಲ್ಲಿರುವ ತಂತ್ರಜ್ಞರು...."

"ಅದೇ ಹೇಳುತ್ತಿದ್ದೇನೆ. ಕೇರ್‌ಫುಲ್ಲಾಗಿ ಕೇಳಿಸಿಕೋ...." ಎಂದವನನ್ನು ಮಧ್ಯದಲ್ಲೇ ತಡೆದು ವಿವರಣೆ ನೀಡಲು ಶುರು ಮಾಡಿದ

ಅಂಬಾಸಡರ್, "ಸರ್ಕ್ಯೂಟ್ ಕಾರ್ಡ್ ಇನ್‌ಸರ್ಟ್ ಮಾಡುವುದು ಮೆಕಾನಿಕಲ್ ಪ್ರಾಬ್ಲಂ ಅಲ್ಲ. ಯಾವ ಯಾವ ಸರ್ಕ್ಯೂಟ್ಸ್ ಕಟ್ಟ್ ಕಾರಣದಿಂದ ಮೊದಲ ಕಾರ್ಡ್ ಹಾಳಾಯಿತು ಎಂಬ ವಿವರಗಳನ್ನು ಮನನ ಮಾಡಿಕೊಂಡು ಮತ್ತೆ ಅದೇ ಸಮಸ್ಯೆ ಎದುರಾಗದಂತೆ ಅನಲೈಸ್ ಮಾಡಿ ಅರೇಂಜ್ ಮಾಡಬೇಕು. ಅದಕ್ಕೆ ಕಂಪ್ಯೂಟರ್ ಮೈನ್‌ಟೆನೆನ್ಸ್ ಚೆನ್ನಾಗಿ ಅರಿತ ಮ್ಯಾಥಮೇಟೀಷಿಯನ್ ಬೇಕು. ಆ ಸಬ್ಜೆಕ್ಟ್‌ಗೆ ಸಂಬಂಧಿಸಿದ ಸ್ಪೆಷಲಿಸ್ಟ್‌ಗಳು ನಮ್ಮ ದೇಶದಲ್ಲಿಲ್ಲ. ಆದ್ದರಿಂದಲೇ ಈ ವಿಷಯ ಅರಿತೊಡನೆ ಸೋವಿಯತ್ ರಷ್ಯಾದಿಂದ ಒಬ್ಬ ಸ್ಪೆಷಲಿಸ್ಟ್ ಅನ್ನು ರಿಕ್ವೆಸ್ಟ್ ಮಾಡಿ ಕರೆಸಿದೆವು. ಲೆಫ್ಟಿನೆಂಟ್ ಸ್ವರೂಪ್ ಬಾಲಿ ದ್ವೀಪದಲ್ಲಿದ್ದಾನೆ. ಅವನ ಭೇಟಿಯಾಗಲು ಇವನಿಂದಾಗದು. ಸೋ....ಡೈರೆಕ್ಟಾಗಿ ಬಾಲಿಗೆ ಹೋಗದೆ ಡರ್ಬಿ ಐಲೆಂಡ್‌ನಲ್ಲೇ ಉಳಿದುಕೊಂಡಿದ್ದಾನೆ ಮ್ಯಾಥಮೆಟೀಷಿಯನ್ ಡಾಕ್ಟರ್ ಇವಾನ್."

"ಡಾಕ್ಟರ್ ಇವಾನ್‌ನನ್ನು ನೀವು ಭೇಟಿಯಾದಿರಾ ?" ಪ್ರಶ್ನಿಸಿದ ಮಹೇಶ.

"ನೋ ! ಅವನನ್ನು ನೋಡಿಯೂ ಇಲ್ಲ ನಾನು. ಅವನೊಡನೆ ಯಾವುದೇ ಸಂಪರ್ಕವಿರಿಸಿಕೊಳ್ಳಬಾರದೆಂದು ಸ್ಟ್ರಿಕ್ಟ್ ಆರ್ಡರ್ಸ್ ಇದೆ ನನಗೆ. ರೊಟಿವ್ ಆಗಿ ಆಗಮನವಾಯಿತೋ ಇಲ್ಲವೋ ಎಂಬುದಷ್ಟನ್ನು ಮಾತ್ರ ತಿಳಿದುಕೊಂಡೆ ಅಷ್ಟೇ. ಹೋಟೆಲ್ ಸೀ ಷೋರ್‌ನ ನಲವತ್ನಾಲ್ಕನೇ ಸಂಖ್ಯೆಯ ಕೊಠಡಿಯಲ್ಲಿ ಆವನಿದ್ದಾನೆಂದು ತಿಳಿಯಿತು." ಅಂದ ಅಂಬಾಸಡರ್.

"ನಾನೀಗ ಅಲ್ಲಿಗೆ ಹೋಗಬೇಕೆ ?" ಕೇಳಿದ ಮಹೇಶ.

"ಕುಮಾರ್ ಎಂಬ ಸೇಲ್ಸ್ ರಿಪ್ರೆಸೆಂಟೆಟಿವ್‌ಗಾಗಿ ಕಾಯುತ್ತಿರುತ್ತಾನಾತ !"

"ಆಮೇಲೆ ?"

"ಡಾಕ್ಟರ್ ಇವಾನ್ ಜೊತೆಗೂಡಿ ಭಾಲಿ ಐಲೆಂಡ್‌ಗೆ ಹೋಗಿ ಲೆಫ್ಟಿನೆಂಟ್ ಸ್ವರೂಪ್‌ನ ಭೇಟಿಯಾಗಬೇಕು. ಡಾಕ್ಟರ್ ಇವಾನ್ ಸರ್ಕ್ಯೂಟ್ ಕಾರ್ಡ್ ಪರಿಶೀಲಿಸಿ ಅವನ ಕೈಗೆ ಕೊಡಬೇಕು. ಸಿಲ್ವರ್‌ಕಿಂಗ್ ಎಲ್ಲಿದೆ

ಯೆಂದು ಸ್ವರೂಪ್‌ಗೆ ಗೊತ್ತು. ಮಿಕ್ಕ ವಿಷಯಗಳನ್ನೆಲ್ಲಾ ಅವನೇ ನೋಡಿಕೊಳ್ಳುತ್ತಾನೆ" ವಿವರಿಸಿದ ಅಂಬಾಸಡರ್.

"ಲೆಫ್ಟಿನೆಂಟ್ ಸ್ವರೂಪ್ ಎಲ್ಲಿದ್ದಾನೆ? ಅವನ ವಿಳಾಸ?"

ಅದಕ್ಕುತ್ತರವಾಗಿ ಒಂದು ಮ್ಯಾಪ್ ತೋರಿಸಿದ ಅಂಬಾಸಡರ್. ಅದರಲ್ಲಿ ಆ ಜೂಬಾಜಿನ ದ್ವೀಪಗಳನ್ನೆಲ್ಲಾ ಗುರುತಿಸಲಾಗಿತ್ತು. ಬಾಲಿ ಐಲೆಂಡ್ ಡರ್ಬಿಯಿಂದ ಆರುನೂರು ಮೈಲಿಗಳಷ್ಟು ದೂರದಲ್ಲಿತ್ತು. ಮಧ್ಯ ದಲ್ಲಿ ಹಲವಾರು ದ್ವೀಪಗಳಿದ್ದವು. ಕೆಲವು ವಾಸ ಯೋಗ್ಯವಾದರೆ ಇನ್ನೂ ಕೆಲವು ನಿರ್ಮಾನುಷ್ಯವಾಗಿದ್ದವು. ಬಾಲಿ ಐಲೆಂಡ್ ಒಬ್ಬ ರಾಜನ ಆಳ್ವಿಕೆ ಯಲ್ಲಿತ್ತು. ಅವನ ಪೂರ್ವಿಕರು ಭಾರತದಿಂದ ಅಲ್ಲಿಗೆ ವಲಸೆ ಹೋಗಿ ಕೊನೆಗೆ ಅಧಿಕಾರದ ಚುಕ್ಕಾಣಿ ಹಿಡಿದಿದ್ದರು. ಆದ್ದರಿಂದ ಭಾರತವೆಂದರೆ, ಭಾರತೀಯರೆಂದರೆ ಆ ರಾಜನಿಗೆ ಅಪಾರ ಅಭಿಮಾನ. ಆ ಕಾರಣದಿಂದಲೇ ಲೆಫ್ಟಿನೆಂಟ್ ಸ್ವರೂಪ್‌ಗೆ ಅಲ್ಲಿ ಆದರದ ಸ್ವಾಗತ ಸಿಕ್ಕಿತ್ತು. ಆ ರಾಜನ ಸಹಾಯದೊಡನೆಯೇ ಡರ್ಬಿ ಎಂಬೆಸಿಗೆ ಸಂದೇಶವನ್ನು ಕಳಿಸಲು ಸಾಧ್ಯ ವಾಗಿತ್ತು ಸ್ವರೂಪ್‌ಗೆ

"ಸ್ವರೂಪ್ ಇಲ್ಲಿಗೆ ಬಂದರೆ ಶತ್ರುಗಳ ಕಣ್ಣಿಗೆ ಬೀಳುವ ಅಪಾಯವಿದೆ ಯೆಂದು ಅವನನ್ನು ಬಾಲಿ ಐಲೆಂಡ್‌ನಲ್ಲೇ ಇರುವಂತೆ ಸಜೆಸ್ಟ್ ಮಾಡಿ ದೆವು. ನೀನು ಶತ್ರುಗಳ ಕಣ್ಣಿಗೆ ಬೀಳದಂತೆ ಅಲ್ಲಿಗೆ ಸೇರಿಕೊಳ್ಳಬೇಕು. ನಿನ್ನ ಚಾಕಚಕ್ಯತೆಯು ಮೇಲೆ ಸಿಲ್ವರ್‌ಕಿಂಗ್‌ನ ಸೇಫ್ಟಿ ನಿಂತಿದೆಯೆಂಬುದ ರಲ್ಲಿ ಎರಡು ಮಾತಿಲ್ಲ" ಅಂದ ಅಂಬಾಸಡರ್.

ಅಂಗೈನಿಂದ ಕೆನ್ನೆಯುಜ್ಜಿಕೊಂಡ ಮಹೇಶ. 'ಶತ್ರುಗಳ ಕಣ್ಣಿಗೆ ಬೀಳದಂತೆ' ಎಂಬುದೀಗ ಅಪ್ರಕೃತ. ಈಗಾಗಲೇ ತಾನು ರಂಗಕ್ಕಿಳಿದಿರು ವುದು ಅವರಿಗೆ ತಿಳಿದುಹೋಗಿದೆ. ಇನ್ನು ಮುಚ್ಚಾಟದಿಂದೇನು ಪ್ರಯೋಜನ?

# 5

ಹೋಟೆಲ್ ಶೀರ್‌ವೋರ್‌ನ ನಲವತ್ತಾಲ್ಕನೆ ನಂಬರ್ ಕೊಠಡಿಯ ಮುಂದೆ ನಿಂತು ಒಳಗಿನಿಂದ ಕೇಳಿ ಬರುತ್ತಿರುವ ಮ್ಯೂಸಿಕ್ ಕೇಳ ತೊಡಗಿದ ಮಹೇಶ.

ಟ್ರಾನ್ಸಿಸ್ಟರ್ ಫುಲ್ ವಾಲ್ಯೂಮ್‌ನಲ್ಲಿ ಇಡಲಾಗಿತ್ತು. ಬಾಗಿಲು ತಟ್ಟಿ ಒಂದೆಜ್ಜೆ ಹಿಂದೆ ಸರಿದು ನಿಂತ ಮಹೇಶ.

"ಯಾರದು ?" ಡರ್ಬಿ ಭಾಷೆಯಲ್ಲೊಂದು ಹೆಣ್ಣು ಧ್ವನಿ ಒಳಗಿಂದ ಕೇಳಿತು.

ಮಹೇಶನ ಮನದಲ್ಲೊಂದು ಸಣ್ಣ ಅನುಮಾನ ಸುಳಿದು ಮರೆಯಾಯಿತು. ದಿಢೀರನೆ ಮಾತಾಡಿಸಿದರೆ ಯಾರೇ ಆಗಲಿ ತಮ್ಮ ಮಾತೃ ಭಾಷೆಯಲ್ಲೇ ಮಾತಾಡುತ್ತಾರೆ.

ಡಾಕ್ಟರ್ ಇವಾನ್ ರಷ್ಯನ್ ಭಾಷೆಯಲ್ಲಿ ಮಾತಾಡದೆ ಡರ್ಬಿ ಭಾಷೆಯಲ್ಲೇಕೆ ಮಾತಾಡುತ್ತಿದ್ದಾನೆ ? ಬೈಚಾನ್ಸ್ ಅವನು ಪರಿಸ್ಥಿತಿಯ ಗ್ರಹಿಕೆಯಿಂದ ಮುಂಜಾಗ್ರತೆಗಾಗಿ ಈ ರೀತಿ ಮಾಡುತ್ತಿರಬಹುದೇ ? ಅಥವಾ ಅವನೊಡನೆ ಹೆಣ್ಣೇನಾದರೂ ಇರಬಹುದೇ ? ಹೆಣ್ಣು ಧ್ವನಿ ಕೇಳಲೇನು ಕಾರಣ ? ಶಂಕೆಗಳು ಸಾಲಾಗಿ ಉದ್ಭವಿಸುತ್ತಿರುವಂತೆಯೇ ಬಾಗಿಲು ತೆರೆಯಿತು.

"ನನ್ನನ್ನು ಡಿಸ್ಟರ್ಬ್ ಮಾಡಬೇಡವೆಂದು ಹೇಳಲಿಲ್ಲವೇ ?" ಸುಮಾರು ಮೂವತ್ತರ ಹರೆಯದ ಯುವತಿಯೊಬ್ಬಳು ಕೋಪದೊಡನೆ ಕೇಳಿದಳು.

ಅವಳು ಏನಾಯಿತೆಂದು ಅರಿಯುವ ವೇಳೆಗೆ ಅವಳನ್ನು ತಳ್ಳಿಕೊಂಡು ಒಳಕ್ಕೆ ಪ್ರವೇಶಿಸಿ ಬಾಗಿಲು ಹಾಕಿಬಿಟ್ಟ ಮಹೇಶ.

"ಎಕ್ಸ್‌ಕ್ಯೂಸ್ ಮಿ. ನಾನು ಡಾಕ್ಟರ್ ಇವಾನ್‌ರ ಭೇಟಿಯಾಗ ಲೆಂದು ಬಂದೆ!" ಅಂದ.

ಎರಡು ಕ್ಷಣ ಮಹೇಶನನ್ನು ತೀಕ್ಷ್ಣವಾಗಿ ನೋಡಿ ಉತ್ತರಿಸಿದ ಳವಳು. "ನಾನೇ ಡಾಕ್ಟರ್ ಇವಾನ್!"

ಮಹೇಶನ ಮಿದುಳಲ್ಲಿ ಅನುಮಾನದ ಬಿಸಿಲೊಡೆದದ್ದು....ಪ್ರಬಲ ವಾಯಿತು. ತನಗೆ ಡಾಕ್ಟರ್ ಇವಾನ್ ಗಂಡಸೆಂದು ತಿಳಿಸಿದ್ದರು. ಇಲ್ಲಿ ಹೆಣ್ಣು ಎದುರಾಗಿದ್ದಾಳೆ. ಜೊತೆಗೆ ರಷ್ಯನ್ ಭಾಷೆಯಲ್ಲಿ ಮಾತಾಡುವ ವಿಫಲ ಪ್ರಯತ್ನವೆಸಗುತ್ತಿದ್ದಾಳೆ.

ಆದರೂ ಇದ್ಯಾವುದನ್ನೂ ಗಮನಿಸದವನಂತೆ ನಟಿಸಿ ಅವಳೊಡನೆ ತನ್ನ ಪರಿಚಯ ಮಾಡಿಕೊಂಡ ಮಹೇಶ.

"ವಾಟ್? ನೀನು....ನೀನು ಕುಮಾರ್?" ಆಶ್ಚರ್ಯದೊಡನೆ ಉದ್ಗರಿಸಿದಳವಳು.

"ನನಗಾಗಿ ಕಾಯುತ್ತಿರುವಿರೆಂದು ತಿಳಿಸಿದರು. ಈಸಿಟ್ ಎ ಫ್ಯಾಕ್ಟ್?" ಕೇಳಿದ ಮಹೇಶ.

ಕ್ಷಣದಲ್ಲಿ ಚೇತರಿಸಿಕೊಂಡಳವಳು. "ಎಸ್ಸೆಸ್....ಕುಮಾರ್ ಎಂಬ ಸೇಲ್ಸ್‌ಮನ್ ಬರುತ್ತಾನೆಂದು ತಿಳಿಸಿದ್ದರು. ಆದರೆ....ಆದರೆ....ನಿಮ್ಮ ಅವತಾರ....ಸೇಲ್ಸ್‌ಮನ್‌ನಂತಿಲ್ಲ ಅದಕ್ಕೇ ಅನುಮಾನ ಬಂತು" ಅಂದ ಳದಳು.

ಅದಕ್ಕೆ ಮೊದಲು ಧರಿಸಿದ್ದ ಜೀನ್ಸ್ ಪ್ಯಾಂಟ್ ಟೀ ಷರ್ಟ್ ಜಾಗ ದಲ್ಲೀಗ ಖಾಕಿ ಬಟ್ಟೆಗಳು ಕಂಗೊಳಿಸುತ್ತಿದ್ದವು ಮಹೇಶನ ಮೈಮೇಲೆ. ಅಂಬಾಸಡರ್ ಸಹಾಯದಿಂದ ಹಳೆಯ ಟ್ಯಾಕ್ಸಿಯೊಂದನ್ನು ಪಡೆದು ಟ್ಯಾಕ್ಸಿ ಡ್ರೈವರ್ ಆಗಿ ತನ್ನ ವೇಷ, ಕಸುಬು ಬದಲಾವಣೆ ಮಾಡಿಕೊಂಡಿದ್ದ ಮಹೇಶ. ಆ ಮಾರ್ಪಾಡಿಗೆ ಅವಳು ಆಶ್ಚರ್ಯಗೊಂಡದ್ದನ್ನು ಕಂಡು ಮನಸ್ಸಲ್ಲೇ ನಕ್ಕು ಸಿಗರೇಟ್ ಹತ್ತಿಸಿ ಸೋಫಾ ಮೇಲೆ ಆಸೀನನಾದ ಮಹೇಶ.

ಟ್ರಾನ್ಸಿಸ್ಟರ್ ಇನ್ನೂ ಹೈ ವಾಲ್ಯೂಮ್‌ನಲ್ಲೇ ಇತ್ತು. ಮಿಸ್ ಇವಾನ್ ಅದನ್ನು ತಗ್ಗಿಸಹೋದಾಗ ಬೇಡವೆನ್ನುವಂತೆ ಸನ್ನೆ ಮಾಡಿದ.

ರೂಂನಲ್ಲೇನಾದರೂ ಹಿಯರಿಂಗ್ ಬಗ್ಸ್ ಇದ್ದರೆ ಆ ಸೌಂಡ್ ತನ್ನ ಮಾತುಗಳಿಗೆ ಕವರ್ ನೀಡುತ್ತದೆಂಬ ಆಶಯ.

ಅವಳ ಐಡೆಂಟಿಟಿ ಕಾರ್ಡ್ ಕೇಳಿ ಪಡೆದು ಪರಿಶೀಲಿಸಿದ. ಅನುಮಾನಿಸುವ ಆಧಾರಗಳೇನೂ ಕಾಣಲಿಲ್ಲ ಅವಳ ವಿವರಗಳನ್ನು ಮೇಲಿಂದ ಮೇಲೆ ಪ್ರಶ್ನಿಸಿದ. ಎಲ್ಲಾ ಪ್ರಶ್ನೆಗಳಿಗೂ ಸರಿಯಾದ ಉತ್ತರಗಳನ್ನೇ ಕೊಟ್ಟಳು. ಪ್ರಶ್ನೆಗಳನ್ನು ರಿಪೀಟ್ ಮಾಡಿದಾಗಲೂ ಅದೇ ಉತ್ತರಗಳು ಬಂದವು. ಕೊನೆಗೊಂದು ನಿರ್ಣಯಕ್ಕೆ ಬಂದು ಸಿಗರೇಟ್ ಕೆಳಗೆ ಬಿಸಾಡಿ ಎದ್ದು ನಿಂತ.

"ನಮ್ಮ ಶತ್ರುಗಳು ಸುತ್ತಲೂ ಬಲೆ ಹರಡಿ ಕಾದು ಕುಳಿತಿದ್ದಾರೆ ಡಾಕ್ಟರ್. ಇನ್ನು ನೀವು ಒಂಟಿಯಾಗಿರುವುದು ಅಪಾಯ. ನಾಳೆ ಬೆಳಗ್ಗೆ ಇಲ್ಲಿಂದ ಹೊರಟುಬಿಡೋಣ. ಎಲ್ಲಿಗೆ ಹೋಗುವುದೆಂದು ಆಮೇಲೆ ಹೇಳುತ್ತೇನೆ. ಯಾವುದಕ್ಕೂ ಒಳ್ಳೆಯದು....ಯಾರಿಗೂ ಫೋನ್ ಮಾಡಬೇಡಿ. ಈ ಹೋಟೆಲ್ ಸುತ್ತಲೂ ನಮ್ಮವರು ಇಪ್ಪತ್ನಾಲ್ಕು ಗಂಟೆ ಕಾವಲಿರುತ್ತಾರೆ. ನೀವು ರೂಮ್ ಬಿಟ್ಟು ಹೊರಗೆ ಬರದಿದ್ದರೆ ಮಾತ್ರ ಏನೂ ಹಾನಿಯಾಗದೆಂದು ಗ್ಯಾರಂಟಿಯಾಗಿ ಹೇಳಬಲ್ಲೆ." ಎಂದು ಎಚ್ಚರಿಸಿ ವಿದಾಯ ಕೋರಿ ಹೊರಬಂದುಬಿಟ್ಟ ಮಹೇಶ.

ಟ್ಯಾಕ್ಸಿಯನ್ನು ಒಂದು ಪಬ್ಲಿಕ್ ಟೆಲಿಫೋನ್ ಬೂತ್ ಪಕ್ಕದಲ್ಲಿ ನಿಲ್ಲಿಸಿ ಅಂಬಾಸಡರ್‌ಗೆ ಒಂದು ಮೆಸ್ಸೇಜ್ ಕಳಿಸಿ ನೇರ ರಾತ್ರಿ ಭೇಟಿಯಾದ ಸರ್ದಾರ್‌ಜೀ ಕ್ಲಾತ್ ಷಾಪ್ ಬಳಿಗೆ ಹೋಗಿ ವೈಟ್ ಮಾಡತೊಡಗಿದ. ಅರ್ಧ ಗಂಟೆಯ ನಂತರ ಅಂಬಾಸಡರ್ ಆಗಮನವಾದ ಮೇಲೆ ಇಬ್ಬರೂ ಒಳಕೊಠಡಿಯಲ್ಲಿ ಸೇರಿದರು.

ತಾನು ಮಾಡಿದ ಕೆಲಸವನ್ನೆಲ್ಲಾ ವಿವರಿಸಿ ತನ್ನ ಪ್ಲಾನ್‌ಗೆ ಸಂಬಂಧಿಸಿದಂತೆ ಎಲ್ಲಾ ಏರ್ಪಾಡುಗಳನ್ನೂ ಮಾಡುವಂತೆ ವಿನಂತಿಸಿಕೊಂಡ ಮಹೇಶ. ಅಂಬಾಸಡರ್ ಒಪ್ಪಿಗೆ ಪಡೆದ ನಂತರ ಅಲ್ಲಿಂದ ಹೊರಬಿದ್ದು ಎರಡು ಗಂಟೆಗಳ ಕಾಲ ಸಿಟಿ ರೌಂಡ್ ಹೊಡೆದು ಎರಡೂವರೆಗೆ ಹೋಟೆಲ್‌ಗೆ ಹೋಗಿ ಡಾಕ್ಟರ್ ಇವಾನ್ ಕೊಠಡಿಯ ಬಾಗಿಲು ತಟ್ಟಿದ. ನಾಳೆ ಭೇಟಿಯಾಗೋಣವೆಂದು ಹೇಳಿದವ ಇಷ್ಟು ಬೇಗ ವಾಪಸ್ಸಾದುದಕ್ಕೆ ಆಶ್ಚರ್ಯಗೊಂಡಳಾಕೆ.

"ಡಾಕ್ಟರ್...ಅನಿರೀಕ್ಷಿತ ಘಟನೆಗಳು ಸಂಭವಿಸಿಬಿಟ್ಟಿವೆ. ನಾವಂದ್ಕೊಂಡಿದ್ದಂತೆ ನಾಳೆಯು ಬದಲು ಈ ದಿನವೇ....ಅದೂ ಈಗಲೇ ಪ್ರಯಾಣ ಮಾಡಬೇಕಾಗಿದೆ. ಸ್ವಲ್ಪ ತಡ ಮಾಡಿದರೂ ಇದುವರೆಗಿನ ಶ್ರಮವೆಲ್ಲಾ ಸರ್ವನಾಶವಾಗಿಬಿಡುತ್ತದೆ. ಪ್ಲೀಸ್....ಗೆಟ್ ರೆಡಿ ?" ಎಂದು ಅವಸರ ಪಡಿಸಿ ಅವಳಿಗೆ ಮಾತಾಡುವ ಯೋಚಿಸುವಷ್ಟು ಕಾಲಾವಕಾಶವನ್ನೂ ಕೊಡದೆ ಐದೇ ನಿಮಿಷಗಳಲ್ಲಿ ಪ್ರಯಾಣಕ್ಕೆ ರೆಡಿ ಮಾಡಿಸಿ ಕರೆತಂದು ಟ್ಯಾಕ್ಸಿಯಲ್ಲಿ ಕೂರಿಸಿದ ಮಹೇಶ.

ಪ್ರೊಟೆಸ್ಟ್ ಮಾಡಲು ಸಾಕಷ್ಟು ಪ್ರಯತ್ನಿಸಿದಳಾಕೆ. ಅಷ್ಟು ಸಡನ್ನಾಗಿ ಹೋಗುವುದೆಂದರೆ ಹೇಗೆ ಎಂದು ಪ್ರಶ್ನಿಸಿದ್ದಳು. ತಾನು ರೆಫರ್ ಮಾಡಬೇಕಾದ ಪುಸ್ತಕಗಳು ರೂಂನಲ್ಲೇ ಉಳಿದುಹೋಗಿದೆ ಎಂದು ವಾದಿಸಿದಳು. ಅವಿಲ್ಲದೆ ಸಿಲ್ವರ್‌ಕಿಂಗ್ ಸಮಸ್ಯೆ ಸಾಲ್ವ್ ಮಾಡುವುದು ಬಹಳ ಕಷ್ಟ. ತನಗೆ ಇನ್ನು ನಾಲ್ಕು ಗಂಟೆಯಾದರೂ ವ್ಯವಧಿ ಬೇಕೆಂದು ಅವಳು ಗೋಳಾಡುತ್ತಿದ್ದರೂ ಕೇಳಿಸಿಕೊಳ್ಳದೆ ಗಾಡಿ ಸ್ಟಾರ್ಟ್ ಮಾಡಿದ ಮಹೇಶ.

"ನಮ್ಮ ಪ್ರೊಫೆಷನ್‌ನಲ್ಲಿ ಇಂತಹ ತೊಂದರೆಗಳು ಬರುವುದು ಸಾಮಾನ್ಯ ಡಾಕ್ಟರ್. ಅಡ್ಜಸ್ಟ್ ಆಗಬೇಕು ನಾವು. ಈಗ ವೇಸ್ಟ್ ಮಾಡುವಷ್ಟು ಟೈಂ ಇಲ್ಲ!" ಎಂದವನು ಹೇಳುತ್ತಿದ್ದಂತೆ ಟ್ಯಾಕ್ಸಿ ವೇಗವಾಗಿ ಮುನ್ನುಗ್ಗಿ ಮೈನ್‌ರೋಡ್ ಪ್ರವೇಶಿಸಿತು.

ಮುಕ್ಕಾಲು ಗಂಟೆಯ ನಂತರ ಡೆರ್ಬಿ ಸಿಟಿ ದಾಟಿ ಒಂದು ಮಣ್ಣಿನ ರಸ್ತೆ ಹಿಡಿಯಿತು. ಎರಡು ಮೈಲಿ ಆ ಹಾದಿಯಲ್ಲೇ ಪ್ರಯಾಣಿಸಿದ ಮೇಲೆ ಸಮುದ್ರದ ಬದಿಗೇ ಹರಿಯುತ್ತಿರುವ ಸಣ್ಣದೊಂದು ನದಿ ಎದುರಾಯಿತು. ಅದರ ತೀರದ ಪಕ್ಕದಲ್ಲಿನ ಮರದ ತೋಪಿನಲ್ಲಿ ಕಾರು ನಿಲ್ಲಿಸಿ ಕೆಳಗಿಳಿದ ಮಹೇಶ.

ಜನ ಸಂಚಾರವೇ ಇರಲಿಲ್ಲ ಅಲ್ಲಿ. ಎತ್ತ ನೋಡಿದರೂ ಮರ, ಗಿಡಗಳ ಸಮೂಹ, ಬಂಡೆಗಲ್ಲುಗಳ ವಿನಹ ಇನ್ನೇನೂ ಕಾಣಿಸುತ್ತಿರಲಿಲ್ಲ. ಜುಳು ಜುಳು ಶಬ್ದದೊಡನೆ ತನ್ನ ಪಾಡಿಗೆ ತಾನು ಹರಿಯುತ್ತಿರುವ ನದಿ. ಒಂದೆಡೆ ನದಿಯಲ್ಲಿ ತೇಲುತ್ತಿತ್ತು ಸಣ್ಣದೊಂದು ದೋಣಿ. ಅರ್ಧ ಕೆಸರಲ್ಲಿಳಿದಿದ್ದ ಅದು ಅಲೆಗಳು ಗಟ್ಟಿಯಾಗಿ ತಾಕಿದಾಗೆಲ್ಲಾ ತೂಗುಯ್ಯಾಲೆ

ಯಾಡುತ್ತಿತ್ತು. ಅದರಲ್ಲೊಂದು ವುಡನ್ ಕ್ಯಾಬಿನ್ ಕಟ್ಟಲ್ಪಟ್ಟಿದ್ದು ಬಹಳ ಕಾಲದಿಂದ ಅಲ್ಲೇ ಇದ್ದ ಕಾರಣದಿಂದ ಬಿಸಿಲಿಗೆ ಬೆಂದು ಮಳೆಯಲ್ಲಿ ನೆಂದು ವಿಚಿತ್ರ ರಂಗಿಗೆ ತಿರುಗಿತ್ತು.

ಡಾಕ್ಟರ್ ಇವಾನ್ ಕೆಳಕ್ಕಿಳಿದೊಡನೆ ಟ್ಯಾಕ್ಸಿ ಪೊದೆಗಳ ನಡುವೆ ನಿಲ್ಲಿಸಿ ಬಂದ ಮಹೇಶ. ಅವಳ ಬ್ರೀಫ್‌ಕೇಸ್ ಎತ್ತಿಕೊಂಡು ದೋಣಿಯ ಕಡೆಗೆ ಹೆಜ್ಜೆ ಹಾಕಿದ.

"ವಾಟೀಸ್ ದಿಸ್ ? ನಾವು ಈಗ ಇಲ್ಲಿರಬೇಕೆ ?" ಮುಖ ಕಿವುಚಿ ಕೇಳಿದಳು ಇವಾನ್. ಆ ಪರಿಸರ ಅವಳಿಗೆ ಅಸಹ್ಯ ತಂದಂತಿತ್ತು.

"ವಾಟ್ ಟು ಡೂ ಮೇಡಂ ? ಎರಡು ದಿನ ಇಲ್ಲಿರಲೇ ಬೇಕಾದ ಅನಿವಾರ್ಯತೆ. ಬೇರೆ ದಾರಿಯೇ ಇಲ್ಲ." ಅನ್ನುತ್ತಾ ಸಣ್ಣ ಹಲಗೆಯ ಮೇಲೆ ನಡೆದು ಹೋಗಿ ಕ್ಯಾಬಿನ್ ಬಾಗಿಲು ತೆರೆದ ಮಹೇಶ.

ಹೊರಗಡೆಯಿಂದ ಶಿಥಿಲಗೊಂಡಂತೆ ತೋರುತ್ತಿದ್ದರೂ ಒಳಗೆ ನೀಟಾಗಿತ್ತು ಕ್ಯಾಬಿನ್. ಒಂದು ಮೂಲೆಯಲ್ಲೊಂದು ಕ್ಯಾಂಪ್ ಕಾಟ್ ಇತ್ತು. ಅಡಿಗೆ ಮಾಡಿಕೊಳ್ಳಲೊಂದು ಚಿಕ್ಕ ಸ್ಟವ್. ಒಂದು ಪೋರ್ಟೆಬಲ್, ರೆಫ್ರಿಜಿರೇಟರ್. ಹಲವಾರು ಕ್ಯಾನ್ಡ್ ಫುಡ್ ಟಿನ್‌ಗಳನ್ನೊಳಗೊಂಡು ಎರಡು ದಿನ ನೆಮ್ಮದಿಯೊಡನಿರಲು ಯಾವುದೇ ಅಡ್ಡಿಯಿರಲಿಲ್ಲ.

ಕ್ಯಾಬಿನ್ ಸೀಲಿಂಗ್‌ನ ಸಂದಿಗಳಿಂದ ಸೂರ್ಯಕಿರಣಗಳು ಒಳಕ್ಕೆ ಪಸರಿಸಿದ್ದವು. ಆ ಬೆಳಕಿಂದ ಬಾಗಿಲು ಮುಚ್ಚಿದರೂ ಕ್ಯಾಬಿನ್‌ನೊಳಗೆ ಹಗಲಿನ ವಾತಾವರಣ.

ಉಸ್ಸೋ ಎಂದು ಕ್ಯಾಂಪ್ ಕಾಟ್ ಮೇಲೆ ಕುಕ್ಕರಿಸಿದಳು ಇವಾನ್. ಒಂದು ಕಿಟಕಿಯನ್ನು ಗಮನಿಸಿ ಅದನ್ನು ತೆರೆಯಲು ಪ್ರಯತ್ನಿಸಿದಳು. ತಕ್ಷಣ ಅಡ್ಡ ಬಂದ ಮಹೇಶ.

"ನಾವಿಲ್ಲಿಗೆ ರಹಸ್ಯವಾಗಿ ಬಂದಿದ್ದೇವೆ. ಈ ಜಾಗವನ್ನು ಯಾರೂ ಉಪಯೋಗಿಸುತ್ತಿಲ್ಲ. ನಮ್ಮ ಕೆಲಸ ಆಗುವವರೆಗೆ ಇಲ್ಯಾರ ಗಮನವೂ ಬೀಳದಂತೆ ವರ್ತಿಸುವುದೊಳ್ಳೆಯದು" ಅಂದ.

"ನಿಡುಸುಯ್ಯು, ನನಗೆ ಬಹಳ ಬಾಯಾರಿಕೆಯಾಗುತ್ತಿದೆ" ಅಂದಳು ಇವಾನ್.

ಸ್ಟೋವ್ ಪಕ್ಕದಲ್ಲಿದ್ದ ಹೂಜಾದಿಂದ ನೀರು ಬಗ್ಗಿಸಿ ಅವಳಿಗೆ ಕೊಡ ಲೋದ ಮಹೇಶ.

"ನೀರು ಬೇಡ....ಐ ವಾಂಟ್ ಎ ಡ್ರಿಂಕ್ !" ಅಂದಳು.

ಏನೂ ಮಾಡಲಾಗದೆ ಕಿರಿಕ್ ಮಾಡುವ ಇರಾದೆಯೊಡನೆಯೇ ಏನೇನೋ ಕೇಳಿ ತನ್ನನ್ನೇ ಇಬ್ಬಂದಿಗೆ ಸಿಗಿಸುವ ಆಶಯು ಅವಳದು ಎಂಬು ದರ್ಥವಾಗಿ ಮನಸ್ಸಲ್ಲೇ ನಕ್ಕ ಮಹೇಶ ತನಗೆ ಬೇಕಾದದ್ದೂ ಅದೇ !

ಪೋರ್ಟಬಲ್ ಫ್ರಿಡ್ಜ್ ಬಾಗಿಲು ತೆಗೆದು ವಿಸ್ಕಿ ಬಾಟಲ್ ಹೊರ ತೆಗೆದು ಒಂದು ಗ್ಲಾಸ್‌ಗೆ ತುಂಬಿ ಆವಳಿಗಂದಿಸಿದ. ತಾನೊಂದು ಪೇಪರ್ ಗ್ಲಾಸ್‌ಗೆ ಹಾಕಿಕೊಂಡು ಸಿಪ್ ಮಾಡತೊಡಗಿದ.

ಕತ್ತಲಾಯಿತು ಕ್ಯಾಬಿನ್ ಕತ್ತಲಲ್ಲಿ ಮುಳುಗಿದೊಡನೆ ಸಣ್ಣ ಚಿಮಣಿ ದೀಪವೊಂದನ್ನು ಹತ್ತಿಸಿದ ಮಹೇಶ. ಆ ಮಸಕು ಬೆಳಕಲ್ಲಿ ಇವಾನ್‌ಳನ್ನೊಮ್ಮೆ ನಿಟ್ಟಿಸಿದ.

ಮಾದಕವಾಗಿ ನೋಡುತ್ತಾ ಕ್ಯಾಂಪ್ ಕಾಟ್ ಮೇಲೆ ಅಸ್ತವ್ಯಸ್ತ ವಾಗಿ ಬಿದ್ದಿದ್ದಳವಳು. ಉಸಿರಾಡುವಾಗೆಲ್ಲಾ ಸ್ತನಯುಗ್ಮ ಮೇಲೆ ಕೆಳಗೆ ಕದಲುತ್ತಾ ಬಯಕೆಗೆ ಇಂಬು ಕೊಡುತ್ತಿದ್ದವು.

ಮಹೇಶ ತನ್ನ ಕಡೆಗೆ ನೋಡುತ್ತಿರುವುದ ಗಮನಿಸಿ ಮೈ ಬಿಸಿಯೇರು ವಂತೆ ಕಳತುಟಿ ಕಚ್ಚಿ ಜೋರಾಗಿ ಮೈ ಮುರಿದಳು ಇವಾನ್.

"ಕಮ್ ಹಿಯರ್ !" ಮೋಹಕವಾಗಿ ಕರೆದಳು.

ಅವನ ಕೆನ್ನೆಯ ಮೇಲೆ ತೋರು ಬೆರಳಿಂದ ಗೀಟುಗಳನ್ನೆಳೆದಳು. "ನನಗೆ ಮತ್ತೇರಿದೆ....ಕದಲಲೇ ಆಗುತ್ತಿಲ್ಲ !" ಅಂದಳು.

"ಅದು ಹಾಗೇನೇ ! ಮಧ್ಯಾಹ್ನದಿಂದ ಕುಡಿಯುತ್ತಲೇ ಇದ್ದರೆ ಇನ್ನೇನಾಗುತ್ತದೆ !" ಕೇಳಿದ ಮಹೇಶ

"ಆಫ್‌ಕೋರ್ಸ್....ಆದರೆ ಯಾವಾಗಲೂ ಹೀಗಾಗಿಲ್ಲ. ಒಂದು ಬಾಟಲ್ ವಿಸ್ಕಿಗೆಲ್ಲಾ ಎಂದೂ ತೂರಾಡಿಲ್ಲ ನಾನು ! ಮಾತುಗಳೇನೋ ತಿಳಿಯುತ್ತಿವೆ. ಕಾಲುಗಳನ್ನು ಮಾತ್ರ ಕದಲಿಸಲೇ ಆಗುತ್ತಿಲ್ಲ !" ಅನ್ನುತ್ತಾ ಮೆಲ್ಲನೆ ನಕ್ಕಳು.

"ವೆರಿಗುಡ್ !" ಅನ್ನುತ್ತಾ ತಲೆಯಾಡಿಸಿದ ಮಹೇಶ.

ಮಹೇಶನ ಕೈ ತನ್ನ ಕೆನ್ನೆಯ ಮೇಲಿರಿಸಿಕೊಂಡು ಮುಗುಳ್ನಕ್ಕಳು ಇವಾನ್. "ಹೀಗೆ ಅಸಹಾಯಕ ಸ್ಥಿತಿಯಲ್ಲಿದ್ದರೇನೇ ಅನುಕೂಲವೆಂದೇನು ನಿನ್ನ ಭಾವನೆ! ನೀನೇನೇ ಮಾಡಿದರೂ ಯಾರೂ ಕೇಳುವುದಿಲ್ಲವೆಂದಲ್ಲವೇ ನಿನ್ನ ಮಾತಿನರ್ಥ?" ತುಂಟ ಧ್ವನಿಯಲ್ಲಿ ಕೇಳಿದಳು.

"ಅದಲ್ಲ!" ಅಂದ ಮಹೇಶ.

"ಮತ್ತೇನು?" ಮಹೇಶನ ಕೈ ಕುತ್ತಿಗೆಯ ಮೇಲೆ ಕೊಂಡೊಯ್ಯುತ್ತಾ ರೊಚ್ಚಿಗೆಬ್ಬಿಸುವಂತೆ ಹುಬ್ಬುಗಳನ್ನು ಕುಣಿಸಿದಳು.

ಕೈ ಬಿಡಿಸಿಕೊಂಡು ಮೇಲೆದ್ದು ನಿಂತ ಮಹೇಶ. ಸಿಗರೇಟ್ ಹತ್ತಿಸಿಕೊಂಡು ಕ್ಯಾಬಿನ್ ಮೂಲೆಗೆ ಹೋದ. ಒಂದು ಸಣ್ಣ ರಂಧ್ರದಿಂದ ಕಬ್ಬಿಣದ ಚೈನೊಂದು ಹೊರಗಡೆಗೆ ಕಾಣಿಸುತ್ತಿತ್ತು. ಅದನ್ನಿಡಿದು ಗಟ್ಟಿಯಾಗೆಳೆದ.

ಜೋರು ಶಬ್ದದೊಡನೆ ಒಮ್ಮೆಂದೊಮ್ಮೆಲೇ ನದೀ ನೀರು ಕ್ಯಾಬಿನ್ನೊಳಗೆ ನುಗ್ಗತೊಡಗಿತು!

ಮುಂಗೈಗಳನ್ನು ಕಾಟ್‌ಗಾನಿಸಿ ವಿಚಿತ್ರವಾಗಿ ನೋಡಿದಳು ಇವಾನ್. "ಏನು ಮಾಡುತ್ತಿರುವೆ?" ಭೀತಿಯೊಡನೆ ಕೇಳಿದಳು.

"ಕ್ಯಾಬಿನ್ ಮುಳುಗಿಸುತ್ತಿದ್ದೇನೆ!" ಗಂಭೀರವಾಗಿ ಬಂತು ಉತ್ತರ. ಆಗಲೇ ನಾಲ್ಕಿಂಚು ಲೆವೆಲ್‌ಗೆ ಬಂದಿತ್ತು ನೀರು ಒಳಗೆ

ಏಳಲು ಪ್ರಯತ್ನಿಸಿ ಶಕ್ತಿ ಸಾಲದೆ ಮಂಚದ ಮೇಲೇ ಬಿದ್ದುಬಿಟ್ಟಳು ಇವಾನ್.

"ಏಕೆ? ನಾವು ಈಕ್ಷಣ ಹೊರಗೆ ಹೋಗದಿದ್ದರೆ ಮುಳುಗಿ ಹೋಗುತ್ತೇವೆ." ಕ್ಷಣದಿಂದ ಕ್ಷಣಕ್ಕೆ ಮೇಲೇರುತ್ತಿರುವ ನೀರನ್ನು ಗಮನಿಸಿ ಕಂಗಾಲಾಗಿ ಚೀರಿದಳು ಇವಾನ್.

ಸಿಗರೇಟ್ ಸ್ಮೋಕ್ ಮೂಗು, ಬಾಯಿಂದ ಧಾರಾಳವಾಗಿ ಹೊರಚೆಲ್ಲುತ್ತಾ ಅವಳೆದುರಿಗೆ ನಿಂತ ಮಹೇಶ

"ಇನ್ನರ್ಧ ಗಂಟೆಯಲ್ಲಿ ಕ್ಯಾಬಿನ್ ಮುಳುಗಿ ಹೋಗುತ್ತದೆ. ಹತ್ತು ನಿಮಿಷಗಳಲ್ಲಿ ನೀನು ಸ್ಮೃತಿ ಕಳೆದು ಕೊಳ್ಳಲಿರುವೆ." ರಿಸ್ಟ್ ವಾಚ್ ನೋಡಿಕೊಂಡು ಅನೌನ್ಸ್ ಮಾಡಿದ ಮಹೇಶ.

ಬೆಚ್ಚಿಬಿದ್ದಳು ಇವಾನ್. ತಾನು ಕುಡಿದ ಔಷಧಿಯಲ್ಲಿ ಅವನೇನೋ ಬೆರೆಸಿದ್ದಾನೆಂದು ಅರಿವಾದಾಗಂತೂ ಭೀತಿಯಿಂದ ಕಂಪಿಸ ತೊಡಗಿಬಿಟ್ಟಳು. ಮನಸ್ಸಿನ ತವಕಕ್ಕೆ ಸರಿಯಾಗಿ ಅವಯವಗಳು ಸ್ಪಂದಿಸದೆ ಇನ್ನಷ್ಟು ಕಂಗೆಟ್ಟಳು. ಸಂಪೂರ್ಣ ಶಕ್ತಿ ಉಡುಗಿ ಹೋದಂತೆನಿಸಿ ಅಸಹಾಯಕ ಮುಖದೊಡನೆ ಮಹೇಶನನ್ನೇ ನೋಡಿದಳು.

"ಹಾಗೆ ಕನಿಕರ ಬರುವಂತೆ ನೋಟ ಬೀರಿದ ಮಾತ್ರಕ್ಕೇ ಕರಗಿ ಹೋಗುವವನನಲ್ಲ ನಾನು. ನನ್ನ ಪ್ರಶ್ನೆಗಳಿಗೆ ಉತ್ತರಿಸು. ಇಲ್ಲದಿದ್ದರೆ ನೀನೂ ಕ್ಯಾಬಿನ್‌ನೊಡನೆ ನದೀ ತಳ ಸೇರುವೆ. ಇಲ್ಲಿ ನದೀ ಆಳ ಗರಿಷ್ಠ ಪ್ರಮಾಣದಲ್ಲಿದೆ" ಗಡಿಯಾರದತ್ತಲೇ ಕಣ್ಣುಗಳನ್ನು ಕಿಲಿಸಿ ಎಚ್ಚರಿಸಿದ ಮಹೇಶ.

"ನನ್ನ ನೀರಲ್ಲಿ ಮುಳುಗಿಸಿ ಕೊಲ್ಲುವೆಯಾ ?" ಅಂತಹ ಕಟುಕ ಕೆಲಸ ಹೇಗೆ ಮಾಡುವೆಯೆಂಬಂತೆ ದೀನ ಧ್ವನಿಯಲ್ಲಿ ಕೇಳಿದಳು ಇವಾನ್.

"ಎಸ್ ! ನಮ್ಮ ಶತ್ರುಗಳು ಸಿಲ್ವರ್ ಕಿಂಗ್‌ನ ಟ್ರಿಪ್ ಮಾಡಲು ಸಾಧ್ಯವಾದೊಡನೆ ಮಾಡುವ ಕೆಲಸವನ್ನೇ ನಾನೂ ಮಾಡುತ್ತಿದ್ದೇನೆ. ಅವಂಗೂ ಸಹ ತಪ್ಪಿಸಿಕೊಳ್ಳುವ ಅವಕಾಶ ಸಿಗದು. ಹೀಗೆಯೇ ಸಮುದ್ರ ಗರ್ಭದಲ್ಲಿ ಮುಳುಗಿ ಹೋಗುತ್ತಾರೆ" ಅಂದ ಮಹೇಶ.

ಅವಳ ಪಕ್ಕದಲ್ಲಿ ಬಂದು ಕುಳಿತರೂ ನೋಟ ಗಡಿಯಾರದಿಂದ ಕದಲಿಸಲಿಲ್ಲ.

"ನೋಡು ಲೇಡಿ....ಈ ರಗಳೆ ಏಕೆ ? ನೀನು ಡಾಕ್ಟರ್ ಇವಾನ್ ಅಲ್ಲವೆಂದು ನನಗೆ ಚೆನ್ನಾಗಿ ಗೊತ್ತು. ನಮ್ಮವರು ಇಷ್ಟೊಂದು ರಿಸ್ಕಿ ಅಸೈನ್‌ಮೆಂಟ್‌ಗೆ ತರಬೇತಿ ಪಡೆಯದ ಹೆಣ್ಣನ್ನು ಕಳಿಸರು. ಅದೂ ಅಲ್ಲದೆ ನಿನ್ನ ಮಾತೃಭಾಷೆ ರಷ್ಯನ್ ಅಲ್ಲ !" ಎಂದು ತನಗೆ ಬಂದ ಅನುಮಾನಗಳನ್ನೆಲ್ಲಾ ಹೊರಗಿಟ್ಟ ಮಹೇಶ, "ನನ್ನನ್ನು ಕಂಡೊಡನೆ ಆಶ್ಚರ್ಯಗೊಂಡೆ. ಅದಕ್ಕೆ ಕಾರಣವಿಲ್ಲದಿಲ್ಲ. ನಿಮ್ಮ ಏಜೆಂಟರು ನಾನು ಸತ್ತು ಹೋದೆ ಎಂಬ ಸಂದೇಶ ಕಳಿಸಿದರು. ಆ ಸಮಾಚಾರ ಪೇಪರ್‌ಗಳಲ್ಲಿ ಬರಲಿಲ್ಲ. ಸೋ....ಆ ನ್ಯೂಸ್ ನಿಮ್ಮವರಿಂದಲೇ ಬಂದಿರಬೇಕು ನಿನಗೆ !"

"ಪ್ಲೀಸ್....ಪ್ಲೀಸ್ ಹೆಲ್ಪ್ ಮಿ !" ಅನ್ನುತ್ತಾ ಮೇಲೇಳಲು

ಪ್ರಯುಕ್ತಿಸಿದ ಅವಳ ಭುಜ ಹಿಡಿದು ಗೋಡೆಗೊರಗಿಸಿ ಕೂರಿಸಿದ ಮಹೇಶ.

"ಪೀಟರ್ ಏನಾದ ? ಅವನಿಂದ ಮೆಸ್ಸೇಜ್ ಬರುತ್ತದೆಂದು ನಾನು ಯಾವಾಗಿಂದಲೋ ಕಾಯುತ್ತಿದ್ದೆ...." ಅಂದಳು ಇವಾನ್.

"ಆಲ್‌ರೈಟ್ ! ಐ ವಾಂಟ್ ಟು ನೋ ಎವ್ವೆರಿಥಿಂಗ್. ಔಟ್ ವಿತ್ ಇಟ್ !" ಗಂಭೀರ ಧ್ವನಿಯಲ್ಲಿ ಕೇಳಿದ ಮಹೇಶ.

ಕ್ಯಾಬಿನ್‌ನಲ್ಲಿ ನೀರು ಮೊಣ ಕಾಲೆತ್ತರಕ್ಕೆ ಬಂದಿತ್ತು. ಬೋಟು ಕೆಳಗಿನ ನೆಲಕ್ಕೆ ತುಸು ತಾಕಿ ಪಕ್ಕಕ್ಕೆ ಸರಿಯಿತು. ನೀರಿನ ವೇಗ ತಗ್ಗಿತು. ಇವಾನ್ ಅದನ್ನು ಗಮನಿಸದಂತೆ ಅತ್ತ ಜರುಗಿ ಕುಳಿತ ಮಹೇಶ.

"ಡಾಕ್ಟರ್ ಇವಾನ್‌ನ ಡೂಪ್ಲಿಕೇಟ್ ಆಗಲು ಸರಿಯಾದವ ಸಿಗಲಿಲ್ಲ. ಇಲ್ಲಿರುವ ನಮ್ಮವರಿಗೆ ರಷ್ಯನ್ ಭಾಷೆ ಸರಿಯಾಗಿ ಬರದು. ಕುಮಾರ್ ಸತ್ತನೆಂದು ತಿಳಿದೊಡನೆ ನಾನೇ ಧೈರ್ಯ ಮಾಡಿ ಇವಾನ್ ಪ್ಲೇಸ್‌ಗೆ ಹೋಗುವ ತಯಾರಿ ನಡೆಸಿದೆ. ಇವಾನ್ ಎನ್ನುವುದು ಸರ್ನೇಮ್ ಆದ." ಕಾರಣ ವಿವರಣೆ ನೀಡಲೇನೂ ತೊಂದರೆಯಾಗದೆಂಬ ನಂಬಿಕೆ ನನಗೆ. ವಿವರಿಸಿದಳವಳು.

"ಅದಕ್ಕೆ ಅವಕಾಶ ಸಿಗಲಿಲ್ಲವೆಂದು ನೋವು ತಿನ್ನುತ್ತಿರುವೆಯಾ ? ಫ್ರೀ ಪ್ಲಾನ್ಸ್ ಏನು ?" ಪ್ರಶ್ನಿಸಿದ ಮಹೇಶ.

"ರಷ್ಯಾದಿಂದ ಇವಾನ್‌ನನ್ನು ಹಿಂಬಾಲಿಸಿಕೊಂಡೇ ಬಂದೆವು. ಅವನಿಗೆ ಸಿಲ್ವರ್ ಕಿಂಗ್ ಎಲ್ಲಿದೆಯೆಂದು ಗೊತ್ತಿಲ್ಲ. ಕುಮಾರ್ ಎಂಬ ಸೇಲ್ಸ್ ಮನ್ ಭೇಟಿ ಮಾಡಿ ತಿಳಿಸುತ್ತಾನೆಂದು ಮಾತ್ರ ಗೊತ್ತು. ಅದ್ದರಿಂದಲೇ ನಿನ್ನ ಕೊಠಡಿಯ ಬಳಿ ಕಾದು ಕುಳಿತ. ನಾನು ಇವಾನ್‌ನಂತೆ ನಟಿಸಿ ಸಿಲ್ವರ್ ಕಿಂಗ್ ಜಾಡು ತಿಳಿದುಕೊಳ್ಳೋಣವೆಂದಿದ್ದೆ" ಅಂದಳವಳು.

"ಡಾಕ್ಟರ್ ಇವಾನ್ ಎಲ್ಲಿದ್ದಾನೆ ?"

"ನನಗೆ ಗೊತ್ತಿಲ್ಲ !"

ಫಳೀರನೆ ಕೆನ್ನೆಗೊಡೆದ ಮಹೇಶ. ಐದು ಬೆರಳುಗಳೂ ಕೆಂಪು ಕೆನ್ನೆಯ ಮೇಲೆ ಹಾಗೆಯೇ ಮೂಡಿದವು.

"ಸುಳ್ಳು ಹೇಳಬೇಡ !" ಅಬ್ಬರಿಸಿದ.

"ನನಗೆ ಗೊತ್ತಿಲ್ಲ" ಅದೇ ಉತ್ತರ ಅವಳದು

"ನಿನ್ನ ಗ್ಯಾಂಗ್ ಬಂದು ರಕ್ಷಿಸುತ್ತದೆಂಬ ಭ್ರಮೆ ಬಿಟ್ಟು ಬಿಡು. ಅವರಿಗೆ ಗೊತ್ತೇ ಆಗದಂತೆ ಎಲ್ಲಾ ಪ್ರಿಕಾಷನ್ಸ್ ತೆಗೆದುಕೊಂಡಿದ್ದೇನೆ. ಆದ್ದರಿಂದಲೇ ನಾಳೆ ಹೋಗೋಣವೆಂದು ತಿಳಿಸಿ ದಿಢೀರನೆ ಪ್ರಯಾಣ ಬೆಳೆಸಿದ್ದು. ಹೋಟೆಲ್ ಸುತ್ತಲೂ ನಮ್ಮವರಿದ್ದಾರೆಂದು ಫೋನ್ ಮಾಡಿದರೆ ಸಿಕ್ಕಿ ಬೀಳುವೆಯೆಂದೆ ತಿಳಿದು ಬೆದರಿಬಿಟ್ಟೆ. ರಾತ್ರಿಯ ವೇಳೆಯಲ್ಲಿ ಪಾರಾಗಲು ಪ್ರಯತ್ನಿಸುವೆಯೆಂದು ನನಗೆ ಗೊತ್ತಿತ್ತು. ಆ ಅವಕಾಶ ನಿನಗೆ ಕೊಡಬಾರದೆಂದೇ ನಾನು ಕರೆತಂದುಬಿಟ್ಟೆ. ನೋ!....ನಿನಗೆ ಸಹಾಯ ಒದಗಿ ಬರುತ್ತದೆಂಬುದು ಕನಸಷ್ಟೇ !" ಹೇಳಿದ ಮಹೇಶ.

"ಹಾಗೆಂದು....ಒಬ್ಬ ಅಸಹಾಯಕ ಹೆಣ್ಣನ್ನು ಹೀಗೆ ದಾರುಣವಾಗಿ ಕೊಲ್ಲುವೆಯಾ ?" ಬಿಕ್ಕುತ್ತಾ ಕೇಳಿದಳವಳು.

"ಖಂಡಿತಾ ಕೊಲ್ಲುತ್ತೇನೆ ಅದೂ ಮಾಮೂಲಾಗಲ್ಲ. ಚಿತ್ರವಧೆ ಮಾಡಿ ಕೊಲ್ಲುತ್ತೇನೆ. ನನ್ನಂತಹವರು ನನ್ನನ್ನು ಬ್ಲಡ್ ಹಂಟರ್ ಎಂದು ಕರೆಯುತ್ತಾರೆ ಗೊತ್ತೇನು ? ಮರ್ಯಾದೆಯಾಗಿ ನಿಜ ಹೇಳಿ ಪ್ರಾಣ ಉಳಿಸಿಕೋ !" ತಣ್ಣನೆಯ ಸ್ವರದಲ್ಲೇಳಿದ ಮಹೇಶ.

ನೀರು ಕ್ರಮೇಣ ಕ್ಯಾಂಪ್ ಕಾಟ್ ಲೆವೆಲ್‌ಗೆ ಬರತೊಡಗಿತ್ತು. ತಣ್ಣಗೆ ಮೈಗೆ ಸೋಕಿದಾಗ ಚಟ್ಟನೆ ಚೀರಿ ಮೇಲೇಳಲೋದಳು ಅವಳು. ಸಾಧ್ಯವಾಗಲಿಲ್ಲ.

"ಹೇಳಿದರೆ....ನನ್ನನ್ನು ಇಲ್ಲಿಂದ ಕರೆದೊಯ್ಯುವೆಯಾ ?"

"ಡೆಫನೆಟ್ಲಿ !" ಅಶ್ಯೂರ್ ಮಾಡಿದ ಮಹೇಶ.

"ಕರೆದೊಯ್ಯುವೆಯೆಂಬ ನಂಬಿಕೆಯೇನು ? ಹೇಳಿದ ಮೇಲೆ ನನ್ನನ್ನಿಲ್ಲೇ ಬಿಟ್ಟು ಹೋದರೆ ?"

"ಅದು ನಿನ್ನ ಕರ್ಮ. ನೀನೀಗ ನನ್ನ ನಂಬಬೇಕಷ್ಟೇ ! ಡಾಕ್ಟರ್ ಇವಾನ್ ಎಲ್ಲಿದ್ದಾನೆ ?" ಕೇಳಿದ ಮಹೇಶ.

ಐದು ಕ್ಷಣ ಕಾಯ್ದು ಅವಳಿಂದ ಯಾವುದೇ ಉತ್ತರ ಬರದಿದ್ದಾಗ ಮೇಲೆದ್ದು ಬಾಗಿಲ ಬಳಿಗೆ ನಡೆದ ಮಹೇಶ. ಚಿಲಕ ತೆಗೆಯಲೋದಾಗ ನಿಲ್ಲುವಂತೆ ಕೂಗಿಕೊಂಡಳು ಆ ಹೆಣ್ಣು.

"ಬೀಚ್‌ನಿಂದ....ಎರಡು ಮೈಲಿಗಳಷ್ಟು ದೂರದಲ್ಲಿ ಒಂದು ಸಣ್ಣ ಕಣಿವೆಯಿದೆ. ಅಲ್ಲಿ ಬಡವರಿಗಾಗಿ ಕಟ್ಟಿರುವ ಕಾಲೋನಿಯೊಂದಿದೆ. ಅದಕ್ಕೆ ಸ್ವಲ್ಪ ದೂರದಲ್ಲಿ ಟ್ರೈಫ್ಲೂನ್ ಕ್ಲಬ್ಬಿದೆ. ಈಗದನ್ನು ಲೀಸ್ ಆದ ಕಾರಣ ಮುಚ್ಚಿದ್ದಾರೆ ಆ ಕ್ಲಬ್‌ನಲ್ಲಿ ಬಂಧಿಸಲ್ಪಟ್ಟಿದ್ದಾನೆ ಡಾಕ್ಟರ್ ಇವಾನ್!" ತುಟಿಗಳನ್ನು ಕೀವ ಮಾಡಿಕೊಳ್ಳುತ್ತಾ ಹೇಳಿದಳವಳು.

ಅವಳನ್ನು ಅಲಕ್ಕಾಗಿ ಎತ್ತಿಕೊಂಡು ಎಚ್ಚರಿಕೆಯೊಡನೆ ಹೊರ ನಡೆದ ಮಹೇಶ. ದಡದಲ್ಲಿ ನೆಲದ ಮೇಲೆ ಮಲಗಿಸಿ ಮತ್ತೆ ಬೋಟ್‌ನೊಳಕ್ಕೆ ಬಂದ. ಆದಾಗ ತಾನೇ ಎಳೆದಿದ್ದ ಟೈಸ್ ನೀರಿನಲ್ಲಿ ಹುಡುಕಿ ಮತ್ತೊಮ್ಮೆ ಎಳೆದೊಡನೆ ನೆಲಕ್ಕೊರಗಿ ನಿಂತಿದ್ದ ಬೋಟ್ ಒಂದು ಜರ್ಕ್‌ನೊಡನೆ ಜಾರಿ ಆಳವಾದ ನೀರಿನಲ್ಲಿಳಿಯಿತು. ಜೋರು ಶಬ್ದದೊಡನೆ ನೀರು ಕ್ಯಾಬಿನ್‌ನೊಳಕ್ಕೆ ಪ್ರವೇಶಿಸಿತು. ಆತುರಾತುರವಾಗಿ ಒಟ್ಟೆ ಮೈ ನೀರಿನಲ್ಲಿ ನೆನೆಯುತ್ತಿದ್ದರೂ ದಡದತ್ತ ಧಾವಿಸಿದ ಮಹೇಶ.

ಒಂದೂವರೆ ನಿಮಿಷದಲ್ಲಿ ಸಂಪೂರ್ಣವಾಗಿ ಮುಳುಗಿಹೋಯಿತು ಬೋಟ್.

ಮತ್ತೊಮ್ಮೆ ಆ ಹೆಣ್ಣನ್ನು ಎತ್ತಿಕೊಂಡು ಹೋಗಿ ಕಾರಿನ ಹಿಂದಿನ ಸೀಟಿನಲ್ಲಿ ಮಲಗಿಸಿದ ಮಹೇಶ. ಅಷ್ಟೊತ್ತಿಗೆ ಸಂಪೂರ್ಣವಾಗಿ ಮತ್ತಿನಿಂದಾಗಿ ಮೈಮರೆತಿದ್ದಳವಳು.

ಕಾರು ಸ್ಟಾರ್ಟ್ ಮಾಡಿ ವೇಗವಾಗಿ ಮುನ್ನಡೆಸಿ ನೇರ ಸರ್ದಾರ್‌ಜೀ ಕ್ಲಾತ್ ಸ್ಟೋರ್ಸ್‌ನ ಹಿಂಭಾಗದ ಗಲ್ಲಿಯೊಳಕ್ಕೆ ನುಗ್ಗಿಸಿದ. ಕಿಟಕಿ ಸಂದಿಯೊಳಗಿಂದ ಮಸುಕು ಬೆಳಕು ಕಾಣಿಸುತ್ತಿತ್ತು.

ತೋರು ಬೆರಳಿಂದ ಕಿಟಕಿಯ ಮೇಲೆ ಮೆಲುವಾಗಿ ತಟ್ಟಿದ. ಕಿಟಕಿ ಬಾಗಿಲು ತೆರೆದುಕೊಂಡಿತು. ನೆರೆಗೂದಲ ಸರ್ದಾರ್‌ಜೀ ಮುಖ ಕಂಬಿಗಳ ಹಿಂದಿನಿಂದ ಬಗ್ಗಿ ನೋಡಿತು. ಮಹೇಶನನ್ನು ಗುರುತಿಸಿ ಬಾಗಿಲು ತೆರೆದ ಸರ್ದಾರ್‌ಜೀ. ಅವನಿಗೆ ಕಾರಲ್ಲಿ ಕೂರುವಂತೆ ತಿಳಿಸಿ ತನಗೆ ಅಂಬಾಸಡರ್ ತೋರಿದ್ದ ಟ್ರಾನ್ಸ್‌ಮೀಟರ್ ಇದ್ದ ಕೋಣೆಯೊಳಕ್ಕೆ ನಡೆದ ಮಹೇಶ

ವೇಳೆ ಹನ್ನೊಂದಾದೊಡನೆ ಮಾರ್ಕಂಡೇಯ ಶಿಪ್‌ಗೆ ಮೆಸ್ಸೇಜ್ ಕಳಿಸಲು ಶುರು ಮಾಡಿದ. 'ಫೈರ್ ಅಂಡ್ ವಾಟರ್' ಕೋಡ್‌ನ ಕಾಲ್

ಎರಡೇ ನಿಮಿಷಗಳಲ್ಲಿ ಮುಗಿಯಿತು. ಮೊದಲೇ ಸಿದ್ಧ ಮಾಡಿಕೊಂಡಿದ್ದ ಬ್ರೀಫ್ ಮೆಸ್ಸೇಜ್ ಟ್ರಾನ್ಸ್‌ಮಿಟ್ ಮಾಡಿ ಲೈಟ್ ಕಟ್ ಮಾಡಿದ.

ಸಂದಿಗೆ ವಾಪಸ್ಸಾಗಿ ಸರ್ದಾರ್‌ಜೀಗೆ ರಿಲೀವ್ ಮಾಡಿ ಸ್ಟೀರಿಂಗ್ ಮುಂದೆ ಆಸೀನನಾದ. ಅರ್ಧ ರಾತ್ರಿಯ ವೇಳೆಗೆ ಟ್ಯಾಕ್ಸಿ ಬೀಚ್ ಮೇಲೆ ಸಮುದ್ರದ ಬದಿಗೇ ನಿಂತಿತು. ಜೋರು ಅಲೆಗಳ ಘೋರ್ಗರೆತದೊಡನೆ ಭಯಂಕರವಾಗಿ ಕೋರುತ್ತಿತ್ತು ಸಮುದ್ರ. ನಿಂತಿರುವ ಹಡಗುಗಳಲ್ಲಿನ ದೀಪಗಳು ದೂರಕ್ಕೆ ಮಿಣುಕ್ ಮಿಣುಕ್ ಎನ್ನುತ್ತಿದ್ದವು. ಹರ್ಬರ್ ಸಿಟಿ ಗಾಢ ಮೌನದಲ್ಲಿ ಮುಳುಗಿತ್ತು. ಅಲೆಗಳ ಶಬ್ದದ ವಿನಹ ಬೇರೊಂದು ಶಬ್ದವಿಲ್ಲ.

ಸರಿಯಾಗಿ ಹನ್ನೆರಡು ಹತ್ತಕ್ಕೆ ಸಮುದ್ರವನ್ನು ಸೀಳಿಕೊಂಡು ಮೋಟರ್ ಬೋಟೊಂದು ದಡಕ್ಕೆ ಬಂದಿತು ಬಂದವರು ತಮ್ಮವರೇ ಎಂದು ಗ್ಯಾರಂಟಿಯಾಗುವವರೆಗೆ ಕಾರಿಳಿಯಲಿಲ್ಲ ಮಹೇಶ! 'ರಾಣಿ'ಯನ್ನೂ ಹೋಲ್‌ಸ್ಟರ್ ಮಾಡಲಿಲ್ಲ!

ಬೋಟ್ ನಿಂತೊಡನೆ ಇಬ್ಬರು ವ್ಯಕ್ತಿಗಳು ಕೆಳಗಿಳಿದು ಬಂದರು. ಅವರ ಐಡೆಂಟಿಟಿ ಪರಿಶೀಲಿಸಿದ ಮೇಲೆ ಹಿಂದಿನ ಸೀಟಿನಲ್ಲಿದ್ದ ಹೆಣ್ಣನ್ನು ಅವರಿಗೊಪ್ಪಿಸಿ ಹಿಂಬಾಲಿಸಿದ ಮಹೇಶ

"ವಾಟೀಸ್ ದಿಸ್ ಮಿಸ್ಟರ್ ಮಹೇಶ್! ಓ! ದಾರಿಹೋಕರನ್ನೆಲ್ಲಾ ನಮ್ಮ ಕಡೆಗೆ ತೋರಿದರೆ ಹೇಗೆ?" ಕೇಳಿದ ಸಿಡುಕಿನೊಡನೆ ಮಾರ್ಕಂಡೇಯ ಕ್ಯಾಪ್ಟನ್.

"ಅವಳನ್ನು ಪ್ರಶ್ನಿಸಿ ಎಲ್ಲ ವಿಷಯಗಳನ್ನು ಅರಿಯಲು ಸಾಧ್ಯವಾಗಲಿಲ್ಲ. ನೀವು ಇಂಟರಾಗೇಟ್ ಮಾಡಲು ಅವಕಾಶವಿದೆ ಆದ್ದರಿಂದಲೇ ಇಲ್ಲಿಗೆ ಕರೆತಂದೆ. ಇನ್ನೆಲ್ಲೋ ಬಿಟ್ಟು ಅವಳು ತಪ್ಪಿಸಿಕೊಂಡರೆ ಅಸೈನ್‌ಮೆಂಟ್‌ಗೆ ಡೇಂಜರ್!" ಎಂದು ತನ್ನ ಸಮಸ್ಯೆ ವಿವರಿಸಿದ ಮಹೇಶ ಅವನ ಮನ ಒಲಿಸುವ ಧೋರಣೆಯೊಡನೆ.

"ಏನು ಕಥೆ?" ಕೇಳಿದ ಕ್ಯಾಪ್ಟನ್.

"ಇಲ್ಲಿಯವರೆಗೆ ಶತ್ರುಗಳು ಕುಮಾರ್ ಸತ್ತು ಹೋದನೆಂದೇ ಭಾವಿಸುತ್ತಿದ್ದಾರೆ. ಕುಮಾರ್‌ನನ್ನು ಕೊಂದು ಪೀಟರ್ ಅಂತರ್ಧಾನವಾದದ್ದೇಕೆಂದು ಇನ್ನೂ ಅವರಿಗೆ ಅರ್ಥವಾಗಿಲ್ಲ. ಹಾಗೆಂದು ಇವಳೇ ತಿಳಿಸಿದಳು.

ಬಹುಶಃ ಅವರ ಅಭಿಪ್ರಾಯವೂ ಅದೇ ಆಗಿರುವ ಸಾಧ್ಯತೆಯಿದೆ. ಇವರೂ ಸಹ ಮಾಯವಾದರೆ ಅವರ ಆರ್ಗನೈಸೇಷನ್‌ನಲ್ಲಿ ಗಲಭೆ ಶುರುವಾಗುತ್ತದೆ. ಏನು ಮಾಡುವುದೋ ತಿಳಿಯದೆ ಗೊಂದಲಕ್ಕೆ ಬೀಳುತ್ತಾರೆ. ಈ ಗಡಿಬಿಡಿಯಲ್ಲಿ ನನ್ನ ಕೆಲಸ ಮುಗಿಸಿಕೊಳ್ಳಲು ಒಳ್ಳೆಯ ಚಾನ್ಸ್ ಸಿಗುತ್ತದೆ. ನನ್ನನ್ಯಾರೂ ಗುರುತಿಸಲಾರರು.” ವಿವರಿಸಿದ ಮಹೇಶ.

“ದೂತಾವಾಸದಲ್ಲಿ ಬಂಧನದಲ್ಲಿರಿಸಿದರೆ ?”

“ಪ್ಚ್....ಅಲ್ಲಿರಲಾಗದು. ಈ ವಿಷಯದಲ್ಲಿ ಎಂಬೆಸಿಯನ್ನು ಉಪಯೋಗಿಸಿಕೊಳ್ಳಬಾರದೆಂದು ಸ್ಟ್ರಿಕ್ಟ್ ಆರ್ಡರ್ಸ್ !” ಹೇಳಿದ ಮಹೇಶ.

“ಸ್ಕಿಟ್ ದಿಸ್ ! ಮುಂದಿನ ಅಜೆಂಡಾ ಏನು ?” ಕೇಳಿದ ಕ್ಯಾಪ್ಟನ್.

“ಮಾರ್ಕಂಡೇಯದಲ್ಲಿ ನನಗೆ ಲಿಫ್ಟ್ ಕೊಡಬೇಕು” ಅಂದ ಮಹೇಶ.

ಸಿಗಾರ್ ದಂ ಎಳೆಯುತ್ತಾ ಎರಡು ನಿಮಿಷ ಮೌನವಾಗಿದ್ದ ಕ್ಯಾಪ್ಟನ್. ಕೊನೆಗೆ ಅಗಲೆನ್ನುವಂತೆ ತಲೆಯಾಡಿಸಿದ.

ಒರಿಜಿನಲ್ ಆರ್ಡರ್ಸ್ ಪ್ರಕಾರ ಮಹೇಶ ತನ್ನ ಏರ್ಪಾಟುಗಳನ್ನು ತಾನೇ ಮಾಡಿಕೊಳ್ಳಬೇಕು. ಆದರೆ ಅನೂಹ್ಯ ಅವಾಂತರಗಳ ಕಾರಣ ಈಗ ಪ್ಲಾನ್ ಬದಲಾಯಿಸಬೇಕಾದ ಪರಿಸ್ಥಿತಿ.

ಡಾಕ್ಟರ್ ಬದುಕಿದ್ದಾನೆಯೋ ಇಲ್ಲವೋ ಗೊತ್ತಿಲ್ಲ ಬದುಕಿದ್ದರೆ ಯಾವ ಸ್ಥಿತಿಯಲ್ಲಿರುವನೋ ? ಮಾಹಿತಿ ಸಂಗ್ರಹಿಸುವುದರಲ್ಲಿ ನಾನಾ ಮೆಥಡ್‌ಗಳ ಉಪಯೋಗಿಸುವುದರಲ್ಲಿ ಪರಿಣಿತರು ಶತ್ರುಗಳು. ಅವನೊಡನೆ ಪ್ರಯಾಣ ಸ್ವಲ್ಪ ಕಷ್ಟವಾಗಬಹುದು. ಅನವಸರ ತೊಂದರೆಗೊಳಗಾಗದೆ ಮಾರ್ಕಂಡೇಯದಲ್ಲಿ ಹೋದರೆ ಮೂರೇ ದಿನಗಳಲ್ಲಿ ಬಾಲಿ ಐಲೆಂಡ್ ಸೇರಿಕೊಳ್ಳಬಹುದು.

ಮೋಟರ್ ಬೋಟ್ ಸಮುದ್ರದಲ್ಲಿ ಪ್ರಯಾಣ ಬೆಳೆಸಿತು. ತಕ್ಷಣ ಹಿಂದೆ ತಿರುಗಿ ಟ್ಯಾಕ್ಸಿ ಹತ್ತಿದ ಮಹೇಶ. ಬೌದ್ಧಾಲಯದ ಸುತ್ತಲೂ ಇರುವ ಮರದ ತೋಪನ್ನು ತಲುಪಿ ಒಂದು ಮರದ ಕೆಳಗೆ ನಿಲ್ಲಿಸಿದ. ಹಿಂದಿನ ಸೀಟಿನ ಕುಷನ್ ಬೇರ್ಪಡಿಸಿ ತಂದು ನೆಲದ ಮೇಲೆ ಹಾಸಿಕೊಂಡು

ನಿಮಿಷದಲ್ಲಿ ಬಂದಿತ್ತು ಗಾಢ ನಿದ್ರೆ

# 6

ಫರ್ಲಾಂಗ್ ದೂರದಲ್ಲಿ ರಸ್ತೆಗೆ ದೂರವಾಗಿರುವ ಕ್ಲಬ್ ಬಿಲ್ಡಿಂಗ್ ನೋಡಿ ಒಂದು ಪೊದೆಯ ಮರೆಯಲ್ಲಿ ಟ್ಯಾಕ್ಸಿ ನಿಲ್ಲಿಸಿದ ಮಹೇಶ. ರಸ್ತೆಗೆ ಕಾರು ಕಾಣಿಸದಂತೆ ಎಚ್ಚರಿಕೆ ವಹಿಸಿ ಕಾಲ್ನಡಿಗೆಯಲ್ಲೇ ಬಿಲ್ಡಿಂಗ್ ಸಮೀಪಿಸಿದ.

ಕ್ರೀಂ ಕಲರ್ ಪ್ಯಾಂಟ್ ಹಾಗೂ ವೈಟ್ ಷರ್ಟ್ ಮೇಲೆ ಲೈಟ್ ಗ್ರೀನ್ ಕಲರ್ ಬ್ಲೇಸರ್ ಧರಿಸಿದ್ದ ಮಹೇಶ. ಕಣ್ಣುಗಳ ಭಾವ ಕಾಣದಂತೆ ಅಗಲವಾದ ಗಾಗಲ್ಸ್.

ತುಕ್ಕು ಹಿಡಿದಿದ್ದ ಗೇಟ್ ತಳ್ಳಿಕೊಂಡು ಕಾಂಪೌಂಡ್‌ನೊಳಗೆ ಕಾಲಿಟ್ಟ. ಬಿಲ್ಡಿಂಗ್ ಬಾಗಿಲು ಕ್ಲೋಸಾಗಿತ್ತು. ಕಿಟಕಿಗಳು ಭದ್ರವಾಗಿ ಮುಚ್ಚಲ್ಪಟ್ಟಿದ್ದವು.

ನೇರ ತಲೆ ಬಾಗಿಲ ಕಡೆ ನಡೆದು ಬಾಗಿಲು ತಟ್ಟಿದ. ಒಳಗಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಕಿಟಕಿ ಬಾಗಿಲುಗಳ ಬಿರುಕುಗಳಿಂದ ತನ್ನನ್ನು ಗಮನಿಸುತ್ತಿರುವ ಕಣ್ಣುಗಳನ್ನು ನೋಡದವನಂತೆಯೇ ನಟಿಸುತ್ತಾ ಐದು ಕ್ಷಣ ತಡೆದು ಮತ್ತೊಮ್ಮೆ ಬಾಗಿಲ ಮೇಲೆ ಅಂಗೈನಿಂದ ಜೋರಾಗಿ ತಟ್ಟಿದ.

ಸಡನ್ನಾಗಿ ಬಾಗಿಲು ತೆರೆದುಕೊಂಡಿತು. ಕಪ್ಪನೆಯ ಭಾರೀ ಆಕಾರವೊಂದು ಕಣ್ಣೆದುರಿಗೆ ಕಾಣಿಸಿಕೊಂಡಿತು. ಬಹುಶಃ ಅಲ್ಲಿನ ಗಾರ್ಡ್ ಇರಬೇಕು.

"ಎಸ್ ?" ಮಹೇಶ ಒಳಗೆ ಬರದಂತೆ ಅಡ್ಡನಾಗಿ ನಿಂತು ಗೊಗ್ಗರು ಧ್ವನಿಯಲ್ಲಿ ಕೇಳಿದ ಆ ಭೀಕರಾಕಾರ.

ಮಹೇಶ ತನಗೆ ಬರುವಷ್ಟು ಮಟ್ಟಿಗೆ ಅರ್ಬಿ ಭಾಷೆಯಲ್ಲಿ ಧಾಸ್ಟಾಗಿ ಮಾತಾಡಿದ.

ಯಾವುದೇ ಭಾವನೆ ಪ್ರದರ್ಶಿಸದೆ ಮಹೇಶ ಹೇಳುವುದನ್ನೆಲ್ಲಾ ಸಾವಧಾನವಾಗಿ ಕೇಳಿದ ಆ ವ್ಯಕ್ತಿ.

"ಗೋ ಬ್ಯಾಕ್....ಯಾರೂ ಇಲ್ಲ ಇಲ್ಲಿ!" ಅರ್ಬಿ ಭಾಷೆಯಲ್ಲೇ ಜವಾಬಿತ್ತ.

ಜೇಬಿನಿಂದ ಪೀಟರ್ ಪಾಸ್‌ಪೋರ್ಟ್ ತೆಗೆದು ಅವನಿಗೆ ತೋರಿಸಿದ ಮಹೇಶ. "ಇವನ ನೋಡಲೆಂದು ಬಂದೆ. ಎಲ್ಲಿದ್ದಾನೆ?" ತೀವ್ರ ಧ್ವನಿಯಲ್ಲಿ ಪ್ರಶ್ನಿಸಿದ.

ಧ್ವನಿಯ ತೀವ್ರತೆಗೆ ದಂಗಾದ ಆ ವ್ಯಕ್ತಿ. ಮತ್ತೊಮ್ಮೆ ಪಾಸ್‌ಪೋರ್ಟ್ ಕಡೆ ನೋಡಿ ತಲೆ ಅಡ್ಡಡ್ಡ ಆಡಿಸಿದ. "ನನಗೆ ಗೊತ್ತಿಲ್ಲ.... ಇಲ್ಲಂತೂ ಇಲ್ಲ!" ಅಂದ.

"ಹೋಗಿ ನಿನ್ನ ಬಾಸ್‌ಗೆ ಕೇಳು. ಗರುಡ ಗಂಬದಂತೆ ನಿಂತಿದ್ದರೇನು ಪ್ರಯೋಜನ?" ಗರ್ಜಿಸಿದ ಮಹೇಶ.

ಸ್ವಲ್ಪ ತಟಪಟಾಯಿಸಿ ಬಾಗಿಲು ಮುಚ್ಚಲೋದ ಆ ವ್ಯಕ್ತಿ. ತಕ್ಷಣ ಒಂದೆಜ್ಜೆ ಮುಂದಿಟ್ಟು ಬಾಗಿಲನ್ನು ಜೋರಾಗಿ ತಳ್ಳಿದ ಮಹೇಶ. ಆ ವ್ಯಕ್ತಿ ದಿಗ್ಭ್ರಾಂತಿಯಿಂದ ಚೇತರಿಸಿಕೊಳ್ಳುವಷ್ಟರಲ್ಲೇ ಒಳ ನುಸುಳಿ ಗೋಡೆಗೊರಗಿ ನಿಂತುಬಿಟ್ಟ.

"ನಾನಿಲ್ಲೇ ಇರುತ್ತೇನೆ. ಹೋಗಿ ತಿಳಿದುಕೊಂಡು ಬಾ!" ಸಿಗರೇಟ್ ಪ್ಯಾಕ್ ಹೊರ ತೆಗೆದು ಕಾಮ್ ಆಗಿ ಅನೌನ್ಸ್ ಮಾಡಿದ.

ಆ ವ್ಯಕ್ತಿಯ ಕೈ ಬೆಲ್ಟ್ ಕಡೆಗೆ ಸರಿಯಿತು. ಒಂದು ಹೆವಿ ಸ್ಟೈರ್ವ್ ಪಿಸ್ತೂಲೊಂದು ಬೆಲ್ಟ್ ಹೋಲ್‌ಸ್ಟರ್‌ನಲ್ಲಿ ತೂಗಾಡುತ್ತಿತ್ತು. ಅದರ ಹಿಡಿಯ ಮೇಲವನ ಕೈ ಸ್ಟಿಡಿಯಾಗುತ್ತಿದ್ದಂತೆ ಠೊಣಪನಂತಿದ್ದ ಇನ್ನೊಬ್ಬ ವ್ಯಕ್ತಿ ರಂಗಪ್ರವೇಶ ಮಾಡಿದ.

ಅವನನ್ನು ನೋಡಿ ಹಿಂದಕ್ಕೆ ಸರಿದ ಕರಿಯ ವ್ಯಕ್ತಿ. ಮಹೇಶನನ್ನು ತೋರಿಸಿ ಸಣ್ಣ ದನಿಯಲ್ಲಿ ಏನೋ ಹೇಳತೊಡಗಿದ.

ಸುತ್ತಲೂ ಪರಿಶೀಲಿಸಿ ನೋಡಿದ ಮಹೇಶ ನಿಂತಲ್ಲಿಂದಲೇ. ವಿಶಾಲ

ವಾದ ಹಾಲ್ ಅದು. ಇಡೀ ಗ್ರೌಂಡ್ ಫ್ಲೋರ್ ಆವರಿಸಿತ್ತು ಹಾಲ್. ದೂರದಲ್ಲಿರುವ ಗೋಡೆಗೆ ಎರಡು ಬಾಗಿಲುಗಳಿದ್ದವು. ಒಂದು ರೀತಿಯ ಕಮಟು ವಾಸನೆ ಆವರಿಸಿತ್ತು ಹಾಲೆಲ್ಲಾ. ನೆಲದ ತುಂಬಾ ಧೂಳು, ಕಸ ಹರಡಿಕೊಂಡಿತ್ತು.

ಮಹೇಶನ ಬಳಿ ಪಾಸ್‌ಪೋರ್ಟ್ ತೆಗೆದುಕೊಂಡು ನೋಡಿದ ಹೊಸಬ. ಬಹುಶಃ ಆ ಗ್ಯಾಂಗ್ ಬಾಸ್ ಇರಬಹುದೇನೋ!

"ಈ ಪಾಸ್‌ಪೋರ್ಟ್ ನಿನ್ನ ಬಳಿ ಹೇಗೆ ಬಂತು?" ಅನುಮಾನದೊಡನೆ ಕೇಳಿದ.

"ಅದು ಪೀಟರ್‌ನ ಡೂಪ್ಲಿಕೇಟ್ ಪಾಸ್‌ಪೋರ್ಟ್. ಇಂಥಹುದೇ ಅವನ ಬಳಿ ಇನ್ನೊಂದಿದೆ. ಇದನ್ನು ಐಡೆಂಟಿಫಿಕೇಷನ್ ಪರ್ಪಸ್‌ಗೆ ಉಪಯೋಗಿಸುತ್ತೇನೆ. ಅವನ ಭೇಟಿಯಾಗಲೆಂದೇ ನಾನು ಡರ್ಬಿಗೆ ಬಂದೆ" ಅಂದ ಮಹೇಶ.

ತನ್ನ ಪ್ಲಾನೆಲ್ಲಾ ಕೆಲವು ಊಹೆಗಳನ್ನೊಳಗೊಂಡ ಸಂಘಟನೆಗಳ ಆಧಾರದ ಮೇಲೆ ಸ್ಟ್ಯಾಂಡ್ ಮಾಡಿದ ಮಹೇಶ. ಪೀಟರ್ ಮಾಸ್ಕೋನಿಂದ ಡಾಕ್ಟರ್ ಇವಾನ್‌ನ ಫಾಲೋ ಮಾಡಿಕೊಂಡು ಬಂದನೆಂದು ಆ ಹೆಣ್ಣು ತಿಳಿಸಿದ್ದಳು. ಅವನಿಗೆ ಕವರ್ ಆಗಿ ಅವಳು ಕೆಲಸ ನಿರ್ವಹಿಸಿದ್ದಳು. ಬಟ್ ಮಿಸೆಸ್ ಪೀಟರ್‌ಗೂ ಡಗ್ಸ್ ಶತ್ರುಗಳಿಗೂ ಡೈರೆಕ್ಟ್ ಕನೆಕ್ಷನ್ ಇದ್ದಂತಿಲ್ಲ. ಇವರ ನಡುವೆ ಲಿಂಕ್ ಆಗಿ ಅವಳು ಕಾರ್ಯ ನಿರ್ವಹಿಸುತ್ತಿದ್ದಳೆಂದಾಯಿತು. ಪೀಟರ್ಸ್ ಜೊತೆಗೊಂದು ಗ್ಯಾಂಗ್ ವ್ಯಕ್ತಿಯಾಗಿರಬಹುದು ಈ ಕೆಲಸಕ್ಕೋಸ್ಕರವೇ ವಿಶೇಷವಾಗಿ ಅವನನ್ನು ಬರಿಸಿಕೊಂಡಿರಬೇಕು. ಹಾಗಾಗಿದ್ದಲ್ಲಿ ತಾನು ಪೀಟರ್ ಗ್ಯಾಂಗ್‌ನಿಂದ ಬಂದವನೆಂದು ಹೇಳಿದರೆ ತಕ್ಷಣ ಇವರು ಫೈಂಡೌಟ್ ಮಾಡಲಾಗದು. ಅಟ್‌ಲೀಸ್ಟ್ ಎರಡು ಮೂರು ಗಂಟೆ ಅವರ ಸ್ಥಾವರದಲ್ಲಿರುವ ಅವಕಾಶ ಸಿಕ್ಕರೆ ತನ್ನ ಕೆಲಸ ಮುಗಿಸಿಕೊಳ್ಳಬಹುದು.

ಪಾಸ್‌ಪೋರ್ಟ್ ಮುಚ್ಚಿ ಮಹೇಶನನ್ನು ತೀಕ್ಷ್ಣವಾಗಿ ಪರಿಶೀಲಿಸಿದ ರೋಜಸ. "ಈ ಪಾಸ್‌ಪೋರ್ಟ್ ಬಗ್ಗೆ ನನಗೇನು ಗೊತ್ತಿಲ್ಲ!" ಅಂದ.

"ಅವರ ಬಗ್ಗೆ ನಿನಗೆ ಗೊತ್ತಿರಲೇ ಬಾರದು! ಹುಚ್ಚು ಪ್ರಶ್ನೆಗಳನ್ನು

ಕೇಳದೆ ಮೊದಲು ಪೀಟರ್‌ನನ್ನು ಕರೆಯಿರಿ." ಸ್ವರದಲ್ಲಿ ಕರಕಶತನ ಪ್ರದರ್ಶಿಸುತ್ತಾ ಹೇಳಿದ ಮಹೇಶ.

ಆ ಮಾತಿಗೆ ತುಸು ತಗ್ಗಿದ ಠೊಣಪ. "ಯಾರು ನೀನು ?" ಕೇಳಿದ.

"ನನ್ನ ಹೆಸರು ನಿನಗೆ ಹೇಳುವ ಅವಶ್ಯಕತೆಯಿಲ್ಲ." ಒರಟಾಗಿಯೇ ಜವಾಬಿತ್ತ ಮಹೇಶ.

"ಇಲ್ಲಿಗೇಕೆ ಬಂದೆ ?"

"ಪೀಟರ್‌ಗೆ ರಿಲೀಸ್ ಮಾಡಲು ಈ ಕಾರ್ಯಾಚರಣೆಯಲ್ಲಿ ಅವನು ಬಹಳಷ್ಟು ತಪ್ಪುಗಳನ್ನೆಸಗಿದ್ದಾನೆ. ಈಗವನ ಜಾಗದಲ್ಲಿ ನಾನು ಕೆಲಸ ಮಾಡುವವನಿದ್ದೇನೆ" ಅಂದ ಮಹೇಶ.

ಗಾರ್ಡ್ ಕಡೆಗೆ ನೋಡಿ ತಲೆಯಾಡಿಸಿದ ಠೊಣಪ. ಮಹೇಶನ ಬಟ್ಟೆಗಳನ್ನು ಪರಿಶೀಲಿಸಿದ ಠೊಣಪ. ಯಾವುದೇ ಆಯುಧಗಳು ಕಾಣಿಸ ದಿದ್ದಾಗ ತುಟಿ ಬಿರಿದು ಹಿಂದಕ್ಕೆ ಸರಿದ.

"ಕಮ್ ವಿತ್ ಮಿ !" ಅನ್ನುತ್ತಾ ಹಿಂದೆ ತಿರುಗಿ ಬಿಲ್ಡಿಂಗ್ ಹಿಂಭಾಗ ದತ್ತ ನಡೆದ ಠೊಣಪ ವ್ಯಕ್ತಿ.

ಫಾಲೋ ಮಾಡಿದ ಮಹೇಶ. ಎದುರಿಗಿದ್ದ ಬಾಗಿಲ ಬದಿಯಲ್ಲಿದ್ದ ಮೆಟ್ಟಿಲುಗಳು ಫಸ್ಟ್ ಫ್ಲೋರ್‌ಗೆ ಕರೆದೊಯ್ದವು. ಅಲ್ಲಿದ್ದ ಹಾಲ್ ದಾಟಿ ಒಂದು ಕೊಠಡಿಯೊಳಕ್ಕೆ ಪ್ರವೇಶಿಸಿದರು. ಆ ಪ್ರದೇಶದಲ್ಲಿ ಲೈಟ್ ಬೆಳಗ್ರು ತ್ತಿರುವ ಕೊಠಡಿ ಅದೊಂದೇ ಎಂದು ಗಮನಿಸಿದ ಮಹೇಶ.

ಕೊಠಡಿಯ ಮಧ್ಯದಲ್ಲೊಂದು ಟೇಬಲ್. ಅದರ ಸುತ್ತಲೂ ನಾಲ್ಕು ಮೂರು ಕಲು ಕುರ್ಚಿಗಳಿದ್ದವು.

"ತಕ್ಷಣ ಪೀಟರ್‌ನನ್ನು ಭೇಟಿಯಾಗುವಂತೆ ನನಗೆ ಆರ್ಡರ್ ಬಂತು. ಆದರೆ ಅವನು ಕುಮಾರ್‌ನ ಹಕ್ಕಿ ಮಾಡಿ ಹೋಟೆಲ್‌ನಿಂದ ಅದೃಶ್ಯನಾಗಿ ಬಿಟ್ಟಿದ್ದಾನೆ. ನಂತರ ಸೀಪೋರ್ ಹೋಟೆಲ್‌ನಲ್ಲಿದ್ದ ಅವಳನ್ನು ಭೇಟಿ ಯಾಗಲು ಪ್ರಯತ್ನಿಸಿದೆ. ಅವಳೂ ಸಹ ಮಾಯವಾಗಿದ್ದಾಳೆ" ಕುರ್ಚಿ ಯಲ್ಲಿ ಕುಳಿತುಕೊಳ್ಳುತ್ತಾ ಹೇಳಿದ ಮಹೇಶ. "ಪ್ಲೀಸ್ ಫೈಂಡ್ ದಟ್ ಫೂಲ್ ಅಂಡ್ ಗಿವ್ ಹಿಮ್ ದಟ್ ಪಾಸ್ ಪೋರ್ಟ್ ! ಏನು ಮಾಡ ಬೇಕೆಂದು ಅವನಿಗೆ ಗೊತ್ತು" ಕೋಪಗೊಂಡನೆ ಹೇಳಿದ.

"ಓ.ಕೆ. ಮಿಸ್ಟರ್....ನಾನು ಸ್ಟೆಪ್ಸ್ ತೆಗೆದುಕೊಳ್ಳುತ್ತೇನೆ. ಅಲ್ಲಿಯ ವರೆಗೆ ನೀನು...."

"ಇಲ್ಲೇ ಇರುತ್ತೇನೆ. ಎಲ್ಲ ವಿಷಯಗಳನ್ನೂ ಅರಿತೇ ನಾನಿಲ್ಲಿಂದ ಹೋಗುವುದು! ರೈಟ್! ಹೌದು....ಡಾಕ್ಟರ್ ಇವಾನ್ ಏನಾದ? ಪೀಟರ್ ಜೊತೆಗೆ ನಮ್ಮ ಲಿಂಕ್ ತಪ್ಪಿ ಬಹಳ ದಿನಗಳಾದವು. ಅವನ ಲಾಸ್ಟ್ ರಿಪೋರ್ಟ್ ಪ್ರಕಾರ ಬಂಧಿಸಿದನೆಂದು ತಿಳಿಯಿತು...." ಮೆಲ್ಲನೆ ತನಗೆ ಬೇಕಾದ ವಿಷಯದತ್ತ ಬಂದ ಮಹೇಶ.

"ಹೌದು....ಇವಾನ್ ಬಂಧಿಸಲ್ಪಟ್ಟ."

ಕೆನ್ನೆ ಉಜ್ಜಿಕೊಳ್ಳುತ್ತಾ ಸುತ್ತಲೂ ನೋಡಿದ ಮಹೇಶ. "ಏನಾದರೂ ಹೇಳಿದನೇ?" ಕೇಳಿದ.

ಸುಮ್ಮನೆ ತಲೆಯಾಡಿಸಿದನಷ್ಟೇ ರೋಣಾಪ ಏನೂ ಹೇಳಲಿಲ್ಲ.

"ಸಿಲ್ವರ್‌ಕಿಂಗ್ ಎಲ್ಲಿದ್ದಯೆಂದೇನಾದರೂ ತಿಳಿಯಿತೇ?"

"ಇಲ್ಲ!"

"ಹಾಗಾದರೆ ನಾನು ಫೈಂಡ್‌ಔಟ್ ಮಾಡುತ್ತೇನೆ. ಇನ್ನೆಷ್ಟು ದಿನ ಕಾಯುವುದು?" ಕೋಪದೊಡನೆ ಕೇಳಿದ ಮಹೇಶ.

ಸಾಲೋಚನೆಯೊಡನೆ ತಲೆಯಾಡಿಸಿದ ರೋಣಾಪ. ತಾವು ಮಾಡಿದ ಪ್ರಯತ್ನಗಳನ್ನೆಲ್ಲಾ ವಿವರಿಸಿದ. ತನ್ನನ್ನು ಭೇಟಿಯಾಗಲು ಬರುವ ವ್ಯಕ್ತಿಯ ಹೆಸರ ವಿನಹ ಇನ್ನೇನೂ ಹೇಳಲಿಲ್ಲವಂತೆ ಡಾಕ್ಟರ್ ಇವಾನ್.

"ಹಾಗಿದ್ದಲ್ಲಿ ಅವನನ್ನು ಕೊಂದು ಪೀಡೆ ಪರಿಹರಿಸಿಕೊಳ್ಳದೆ ಇನ್ನೂ ಜೀವಂತವಾಗಿ ಉಳಿಸಿರುವಿರೇಕೆ?" ಕೇಳಿದ ಮಹೇಶ.

ಅಯಾಚಿತವಾಗಿ ಪಕ್ಕದ ಕೊಠಡಿಯ ಕಡೆಗೆ ನೋಡಿದ ಆ ರೋಣಾಪ. "ನಿಧಾನವಾಗಿ ಮಾಡಬೇಕಾದ ಕೆಲಸ ಅದು" ಅನ್ನುತ್ತಾ ಎದ್ದು ನಿಂತ. "ಈ ಬಿಲ್ಡಿಂಗ್ ಅನ್ನು ಕಟ್ಟೆಚ್ಚರದೊಡನೆ ಪಹರೆ ಮಾಡಲಾಗುತ್ತಿದೆ. ಯಾರೇ ನನ್ನ ಪರ್ಮಿಷನ್ ಇಲ್ಲದೆ ಹೊರ ಹೋಗಲೂ ಪ್ರಯತ್ನಿಸಿದರೂ ಸಾವು ಗ್ಯಾರಂಟಿ!" ಎಂದು ಸೂಚ್ಯವಾಗಿ ಕಾಷನ್ ಕೊಟ್ಟು ಹೊರಕ್ಕೆ ನಡೆದ.

ಮೆಟ್ಟಿಲುಗಳ ಬಳಿಗೆ ಹೋಗಿ ನಿದ್ರೆ ಹೋಗುತ್ತಿದ್ದ ಇಬ್ಬರೂ ಗಾರ್ಡ್

ಗಳನ್ನೆಚ್ಚರಿಸಿದ. ಕಣ್ಣುಗಳನ್ನು ಉಜ್ಜಿಕೊಳ್ಳುತ್ತಾ ಎದ್ದರವರು. ಮಹೇಶನ ಬಗ್ಗೆ ತಿಳಿಸಿ ಅವನು ಅಡ್ಡಾಡದಂತೆ ನೋಡಿಕೊಳ್ಳಲು ಆಜ್ಞಾಪಿಸಿದ. ಇಬ್ಬರು ಗ್ರೌಂಡ್ ಫ್ಲೋರ್ ಡೋರ್ ಬಳಿಗೆ ಕಳಿಸಲ್ಪಟ್ಟರು. ಮಹೇಶ ಬಂದಾಗ ಬಾಗಿಲು ತೆರೆದ. ಕಪ್ಪು ಮುಖದ ಗಾರ್ಡ್ ಈಗ ಅವನೊಡನೆ ಕೊಠಡಿಯಲ್ಲೇ ಉಳಿದುಕೊಂಡ.

ಕೋಣೆಯ ಮೆಟ್ಟಿಲು ಇಳಿದೋದ ಶಬ್ದ ಕೇಳಿಸಿ, ಎರಡು ನಿಮಿಷ ಕದಲದೆ ಕುಳಿತ ಮಹೇಶ. ಬಾಗಿಲ ಬಳಿ ಪಿಸ್ತೂಲಿಡಿದು ತೂಕಡಿಸುತ್ತಿದ್ದ ಗಾರ್ಡ್.

ಇದ್ದಕ್ಕಿದ್ದಂತೆ ಮೇಲೆದ್ದ ಮಹೇಶ. ಮುರುಕಲು ಕುರ್ಚಿಯಾದ ಕಾರಣ ಕಿರ್ರೆಂದು ತನ್ನ ನೋವು ಪ್ರಕಟಿಸಿತು. ತಕ್ಷಣ ಪಿಸ್ತೂಲನ್ನು ಗುರಿ ಹಿಡಿದು ಎದ್ದು ನಿಂತ ಗಾರ್ಡ್.

ಪ್ರಶಾಂತವಾಗಿ ಬ್ಲೇಜರ್ ತೆಗೆದು ಕುರ್ಚಿಯ ಹಿಂಬದಿಗೆ ಸಿಗಿಸಿದ ಮಹೇಶ. ಷರ್ಟ್ ಬಟನ್ಸ್ ಬಿಚ್ಚಿ ಕರ್ಚೀಫ್‌ನಿಂದ ಕುತ್ತಿಗೆ ಒರೆಸಿಕೊಂಡ.

"ದೂರ ಪ್ರಯಾಣ ಮಾಡಿ ಬಳಲಿದ್ದೇನೆ. ನಿದ್ರೆ ಬರುತ್ತಿದೆ. ಎಲ್ಲಿ ಮಲಗಲಿ?" ನಿದ್ರೆ ಹೋಗುವಂತೆ ಅಂಗೈ ಮೇಲೆ ತಲೆಯಿರಿಸಿ ಕಣ್ಣು ಮುಚ್ಚಿ ಸನ್ನೆಯಿಂದಲೇ ತನ್ನ ಮಾತಿನರ್ಥ ತಿಳಿಸಿದ ಮಹೇಶ.

ಅನುಮಾನದೊಡನೆ ಎದ್ದು ನಿಂತಿದ್ದ ಗಾರ್ಡ್–ಅಸಹನೆಯೊಡನೆ ಬಂದು ಕೊಠಡಿಯ ಕಡೆ ತೋರಿಸಿ ಮತ್ತೆ ತನ್ನ ಬೆಂಚಿನ ಮೇಲೆ ಕುಸಿದು ಕುಳಿತ. ಮೊದಲು ಗಾರ್ಡ್‌ಗಳು ಮಲಗಿದ್ದ ಕೊಠಡಿಯೊಳಕ್ಕೆ ಹೋದ ಮಹೇಶ. ಎಲ್ಲರೂ ಎದ್ದು ಹೊರಟುಹೋದರು. ಖಾಲಿ ಚಾಪೆಯೊಂದರ ಮೇಲೆ ಅಡ್ಡಾಗಿ ಕಣ್ಣು ಮುಚ್ಚಿಕೊಂಡ.

ಪಿಸ್ತೂಲೊಡನೆ ಕಾವಲು ಕಾಯುತ್ತಿದ್ದ ಗಾರ್ಡ್‌ಗೆ ಮಹೇಶನ ಕಾಲುಗಳು ಮಾತ್ರ ಕಾಣಿಸುತ್ತಿದ್ದವು. ಅವು ಕಾಣಿಸುತ್ತಿವೆಯಲ್ಲಾ ಎಂಬ ತೃಪ್ತಿಯೊಡನೆ ತೂಕಡಿಕೆಯ ನಡುವೆ ಆಗಾಗ ಅತ್ತ ನೋಡುತ್ತಾ ಕಾವಲು ಕಾಯುತ್ತಿದ್ದ ಅವನು.

ನಿಧಾನವಾಗಿ ಸಾಗುತ್ತಿದ್ದ ಕಾಲ. ಕಳೆದ ಪ್ರತಿಕ್ಷಣ ಹೊರಗೆ ಹೋದ

ಕೊಣಪನ ಆಗಮನವನ್ನು ಹತ್ತಿರ ತರುತ್ತಿದೆಯೆಂಬುದು ಗೊತ್ತು ಮಹೇಶನಿಗೆ. ಅವನ ಆಗಮನವಾದೊಡನೆ ತನ್ನ ರಹಸ್ಯ ಹೊರಬಿದ್ದಂತೆಯೇ ಲೆಕ್ಕ.

ಕಾಲುಗಳನ್ನು ಕದಲಿಸದೆ ಕೈಗಳನ್ನೆತ್ತಿ ಕಾಲರ್ ಅಂಚಿನಲ್ಲಿ ಹೊರಗಿಣುಕುತ್ತಿದ್ದ ಸಣ್ಣನೆಯ ದಾರದೆಳೆಯನ್ನು ಹಿಡಿದು ಎಳೆದ ಮಹೇಶ. ದಾರ ಬಿಚ್ಚಿಕೊಂಡು ಕೈಗೆ ಬಂತು. ಅದನ್ನು ಹಾಗೆಯೇ ಎಳೆಯುತ್ತಾ ಒಂದು ಕೈನಲ್ಲಿ ಉಂಡೆಗಟ್ಟತೊಡಗಿದ. ಎಳೆಯುತ್ತಿದ್ದಷ್ಟು ಬರುತ್ತಿತ್ತು ದಾರ. ಸುಮಾರು ಇಪ್ಪತ್ತೈದಡಿಗಳಷ್ಟು ಉದ್ದ ದಾರವನ್ನೆಳೆದ.

ಅದು ತಲೆ ಕೂದಲಿಗಿಂತಲೂ ಸಣ್ಣಗಿರುವ ಪ್ಲಾಸ್ಟಿಕ್‌ನಿಂದ ತಯಾರಿಸಿರುವ ಸ್ಫೋಟಕ ದಾರ. ಉಂಡೆಗಟ್ಟುವುದು ಮುಗಿದೊಡನೆ ಮೇಲಿನ ಜೇಬಿನಲ್ಲಿದ್ದ ಪೆನ್ಸಿಲ್ ತೆಗೆದ. ಅದರ ಒಂದಂಚಿಗೆ ರಬ್ಬರ್ ಅಳವಡಿಸಿತ್ತು. ರಬ್ಬರ್ ಹಿಡಿದು ಬಗ್ಗಿಸಲು ತೆಳ್ಳನೆಯ ಒಂದು ಮೆಟಲ್ ಪ್ಲೇಟ್ ಸುತ್ತುವರೆದಿತ್ತು. ಅದನ್ನು ಜೋರಾಗೆಳೆದಾಗ ಕಿತ್ತು ಕೈಗೆ ಬಂತು. ದಾರದ ಕೊನೆಯನ್ನು ಮೆಟಲ್ ಪ್ಲೇಟ್‌ಗಿದ್ದ ರಂಧ್ರದೊಳಕ್ಕೆ ತೂರಿಸಿ ಗಂಟು ಹಾಕಿದ. ಈಗದು ರಬ್ಬರ್ ಟ್ರಿಗರ್‌ನಂತೆ ಕೆಲಸ ಮಾಡುತ್ತಿತ್ತು. ಸ್ವಲ್ಪ ಒತ್ತಡ ಬಿದ್ದರೂ ಇಡೀ ದಾರ ಎಕ್ಸ್‌ಪ್ಲೋಸಿವ್‌ನಂತೆ ಸ್ಫೋಟಿಸುತ್ತಿತ್ತು.

ದಾರದುಂಡೆಯನ್ನು ಬಲಗೈನಲ್ಲಿಡಿದು ಮೇಲೆದ್ದು ಬಾಗಿಲ ಬಳಿಗೆ ಬಂದ ಮಹೇಶ. ಅವನು ಮೇಲೆದ್ದುದನ್ನು ಕಂಡು ತಾನೂ ಮೇಲೆದ್ದ ಗಾರ್ಡ್. ಜೋರಾಗಿ ಆಕಳಿಸಿ ಮೈ ಮುರಿದ ಮಹೇಶ. ಆ ಬಿಲ್ಡಿಂಗ್ ಕಟ್ಟಿದವರನ್ನು, ಅಲ್ಲಿ ಸ್ಥಾವರವೇರ್ಪಡಿಸಿ ಕೊಂಡವರನ್ನು ಮನಸೋಇಚ್ಛೆ ಬೈಯುತ್ತಾ ಅದಕ್ಕೆ ಮೊದಲು ಕುಳಿತಿದ್ದ ಕೊಠಡಿಯೊಳಕ್ಕೆ ಬಂದ. ಬಾಗಿಲ ಬಳಿಗೆ ಬರುವ ವೇಳೆಗೆ ಷೂಲೇಸ್ ಬಿಚ್ಚಿಕೊಂಡಂತಾಗಿ ಬಗ್ಗಿ ಲೇಸ್ ಕಟ್ಟಿಕೊಂಡ.

ಆ ಕದಲಿಕೆಯಲ್ಲೇ ಆಗಬೇಕಾದ ಕೆಲಸ ಆಗಿಹೋಗಿತ್ತು !

ಇಪ್ಪತ್ತೈದಡಿ ಉದ್ದವಿದ್ದ ಪ್ಲಾಸ್ಟಿಕ್ ಬಾಂಡ್ ದಾರದುಂಡೆ ಉರುಳುತ್ತಾ ಮೆಟ್ಟಿಲುಗಳ ಮೇಲಿಂದ ಕೆಳಕ್ಕೆ ಸಾಗಿತು. ಪೆನ್ಸಿಲ್ ಮೇಲಿರುವ ರಬ್ಬರ್ ಟ್ರಿಗರ್ ಮಾತ್ರ ಮಹೇಶನ ಕೈನಲ್ಲೇ ಇತ್ತು. ದಾರ ನೀಟಾಗಿ ಮೆಟ್ಟಿಲುಗಳ ಮೇಲೆ ಹರಡಿಹೋಯಿತು. ಷೂಲೇಸ್ ಕಟ್ಟುವ ನೆಪದಲ್ಲಿ

ಗೋಡೆಯ ಪಕ್ಕದಲ್ಲೇ ಅದನ್ನಿರಿಸಿದ ನಂತರ ಕೊಠಡಿಯೊಳಕ್ಕೆ ಹೋದ ಮಹೇಶ.

ಮಹೇಶನ ಗಡಿಯಾರದಂತೆ ಕೊಣವ ಹೊರಗೋಗಿ ಹತ್ತಿರ ಹತ್ತಿರ ಒಂದು ಗಂಟೆಯಾಗಿತ್ತು. ಇನ್ನೇನು ಹಿಂದಿರುಗಬಹುದು. ಅಲ್ಲಿಯವರೆಗೆ ಗಾರ್ಡ್‌ಗಳು ಕದಲದೆ ಮೇಲೇ ಇರಬೇಕು. ಅಕಸ್ಮಾತ್ತಾಗಿ ಹೋಗಿ ದಾರ ತುಳಿದರೆ ಅಂದುಕೊಂಡಿದ್ದಕ್ಕಿಂತಾ ಮೊದಲೇ ಸ್ಫೋಟ ಸಂಭವಿಸಿ ಬಿಡ್ತಿತ್ತದೆ. ಬಟ್ ಷುಡ್ ನಾಟ್ ಹ್ಯಾಪನ್ !

ಕುರ್ಚಿಗೆ ಸಿಗಿಸಿದ್ದ ಬ್ಲೋಟ್ಯುರ್ ತೆಗೆದು ತೊಟ್ಟುಕೊಂಡ ಮಹೇಶ. ಷರ್ಟ್ ಗುಂಡಿಗಳನ್ನು ಹಾಕಿಕೊಂಡು ಕೆದರಿದ್ದ ತಲೆ ಬಾಚಿಕೊಂಡ. ಮಹೇಶ ಹಾಗೆ ಶೃಂಗಾರ ಮಾಡಿಕೊಳ್ಳುತ್ತಿರುವ ರೀತಿಗೆ ಅನುಮಾನ ಬಂದು ನಿದ್ರೆ ಮರೆತು ಎದ್ದು ನಿಂತ ಗಾರ್ಡ್ ಪಿಸ್ತೂಲನ್ನು ಸ್ಥಿರವಾಗಿ ಹಿಡಿದು ಮಹೇಶನನ್ನೇ ಗಮನಿಸತೊಡಗಿದ.

ಹತ್ತು ನಿಮಿಷಗಳ ನಂತರ ಕೆಳಗೆ ಹೆಜ್ಜೆಗಳ ಶಬ್ದ ಕೇಳಿಸಿತು. ಕೆಳಗಿದ್ದ ಗಾರ್ಡ್‌ಗಳನ್ನೆಲ್ಲಾ ತನ್ನೊಡನೆ ಬರುವಂತೆ ಆದೇಶಿಸುತ್ತಿದ್ದ ಕೊಣವ ವ್ಯಕ್ತಿ ತಕ್ಷಣ ಬಾಗಿಲ ಬಳಿಗೆ ಬಂದು ನಿಂತ ಮಹೇಶ. ಕಂಗಾಲಾಗಿ ಮಹೇಶನ ಬೆನ್ನಿಗೆ ಪಿಸ್ತೂಲ ನಳಿಗೆ ತಾಕಿಸಿ ನಿಂತ ಗಾರ್ಡ್. ಮೆಟ್ಟಿಲುಗಳ ಮೇಲೆ ಬೂಟುಗಾಲುಗಳ ಶಬ್ದ ಕೇಳಿಸಿತು ಎಲ್ಲರಿಗಿಂತಾ ಮುಂದೆ ಬರುತ್ತಿದ್ದ ಗಾರ್ಡ್ ಮುಖ ದೃಷ್ಟಿಗೆ ಬಂದೊಡನೆ ಗೋಡೆಯ ಪಕ್ಕದಲ್ಲಿರಿಸಿದ್ದ ಪೆನ್ಸಿಲ್ ಹೆಡ್ ಮೇಲೆ ಕಾಲಿರಿಸಿ ಜೋರಾಗಿ ಒತ್ತಡ ಕೊಟ್ಟ ಮಹೇಶ.

ಮೆಟ್ಟಿಲುಗಳ ಮೇಲೆ ಭಯಂಕರ ಶಬ್ದದೊಡನೆ ಬೆಂಕಿಯ ಜ್ವಾಲೆಗಳೆದ್ದವು.

ಪ್ರಚಂಡ ವೇಗದೊಡನೆ ಹಿಂದೆ ತಿರುಗಿ ಸ್ತಬ್ಧನಾಗಿ ನಿಂತಿದ್ದ ಗಾರ್ಡ್ ದವಡೆಗೆ ಮುಷ್ಟಿ ಅಪ್ಪಳಿಸಿದ ಮಹೇಶ. ಹಿಂದಕ್ಕೆ ಬಿದ್ದ ಅವನ ಕೈನಿಂದ ಜಾರಿದ ಪಿಸ್ತೂಲನ್ನೆತ್ತಿಕೊಂಡು ಹಿಡಿ ಅವನ ಕಣತಲೆಗೆ ಗಟ್ಟಿಸಿದ. ನಿಶ್ಶಬ್ದವಾಗಿ ನೆಲದ ಮೇಲೆ ಸ್ತಬ್ಧವಾಗಿ ಮಲಗಿಬಿಟ್ಟ ಗಾರ್ಡ್.

ಕಪ್ಪು ಹೊಗೆ ಕಾರಿಡಾರ್ ಪೂರ್ತಿ ವ್ಯಾಪಿಸುತ್ತಾ ಬರತೊಡಗಿತು.

ಸ್ಟೇರ್ ಕೇಸ್ ವೆಲ್‌ನಲ್ಲಿ ಮಾಡಿದ್ದ ಕಾರಣ ಬೆಂಕಿಯ ಪ್ರಭಾವ ಕ್ಷಣದಿಂದ ಕ್ಷಣಕ್ಕೆ ಜೋರಾಗತೊಡಗಿತ್ತು. ಬಾಗಿಲಿಂದ ಹೊರಬಂದು ಪಕ್ಕದ ಕೊಠಡಿ ಪರಿಶೀಲಿಸಿದ ಬಾಗಿಲಿಗೆ ಬೀಗ ಬಿದ್ದಿತ್ತು.

ಸಾಲ್ನಷ್ಟು ಹಿಂದಿಟ್ಟು ವೇಗವಾಗಿ ಮುನ್ನುಗ್ಗಿ ಬಾಗಿಲನ್ನು ಭುಜದಿಂದ ಗಟ್ಟಿಸಿದ. ಭಳ್ಳನೆ ಮುರಿದು ಒಳಕ್ಕೆ ಬಿತ್ತು ಬಾಗಿಲು. ಅದರೊಡನೆಯೇ ಹೋಗಿ ಕೊಠಡಿಯ ಮಧ್ಯದಲ್ಲಿ ಬಿದ್ದ ಮಹೇಶ.

ಗೋಡೆಯ ಬದಿಗಿದ್ದ ಮಂಚಕ್ಕೆ ಸುಮಾರು ಆರಡಿ ಎತ್ತರದ ವ್ಯಕ್ತಿಯೊಬ್ಬನನ್ನು ಬಂಧಿಸಿದ್ದರು. ಬಾಯಿಗೆ ಬಟ್ಟೆ ತುರುಕಲಾಗಿತ್ತು. ಕಣ್ಣುಗಳನ್ನು ಅಗಲವಾಗಿ ತೆರೆದು ಮಹೇಶನನ್ನೇ ಅಚ್ಚರಿಯೊಡನೆ ದಿಟ್ಟಿಸುತ್ತಿದ್ದ ಆ ವ್ಯಕ್ತಿ. ಹಿಂದೆ ತಿರುಗಿ ಹೊರಕ್ಕೋಡಿದ ಮಹೇಶ. ಮೂರ್ಛೆ ಹೋಗಿದ್ದ ಗಾರ್ಡ್‌ನ ಬಟ್ಟೆಗಳನ್ನು ತಡಕಿ ಸಣ್ಣದೊಂದು ಚೂರಿಯನ್ನು ಸಂಪಾದಿಸಿ ಮತ್ತೆ ಕೊಠಡಿಗೆ ವಾಪಸ್ಸಾಗಿ ಆ ವ್ಯಕ್ತಿಯ ಬಂಧನಗಳನ್ನು ತುಂಡರಿಸಿದ.

‘ಡಾಕ್ಟರ್ ಇವಾನ್ ?” ಕೇಳಿದ.

ತಲೆಯಾಡಿಸಿದ ಆ ವ್ಯಕ್ತಿ. ಮೇಲೇಳಲು ಪ್ರಯತ್ನಿಸಿ ವಿಫಲನಾದ. ಭುಜದ ಸುತ್ತಲೂ ಕೈ ಹಾಕಿ ಎತ್ತಿ ಕೂರಿಸಿದ ಮಹೇಶ.

“ನಡೆಯಲಾಗುವುದೇ ? ನಾವು ತಕ್ಷಣ ಇಲ್ಲಿಂದ ಹೊರಟು ಬಿಡಬೇಕು” ಅಂದ ಮಹೇಶ

ಬಾಯಾರಿಕೆಯಿಂದ ನಾಲಿಗೆ ಒಣಗಿ ಹೋಗಿತ್ತು ಇವಾನ್‌ಗೆ. “ನನ್ನ ಶರೀರ ಸ್ವಾಧೀನದಲಿಲ್ಲ ಮಿಸ್ಟರ್. ಕಾಲುಗಳಲ್ಲಿ ಸತ್ವವೇ ಇಲ್ಲ.” ಕ್ಷೀಣವಾಗಿ ಉಸುರಿದ.

ಒಂದು ಕೈ ಅವನ ಸೊಂಟದ ಸುತ್ತಲೂ ಸುತ್ತಿ ಭುಜದ ಮೇಲೆತ್ತಿಕೊಂಡು ಕಾರಿಡಾರ್‌ಗೆ ಬಂದ ಮಹೇಶ. ಬೆಂಕಿ ಸ್ಟೇರ್ ಕೇಸ್ ಮೇಲಿಂದ ಬಿಲ್ಡಿಂಗ್ ಗೋಡೆಗಳ ಮೇಲಕ್ಕೆ ಪಸರಿಸುತ್ತಿತ್ತು. ಕಾರಿಡಾರ್‌ನಲ್ಲಿದ್ದ ಕೊಠಡಿಗಳಿಗೂ ಬೆಂಕಿಯ ಕೆನ್ನಾಲಿಗೆ ಚಾಚಿತ್ತು. ತಾನು ಕುಳಿತಿದ್ದ ಕೊಠಡಿಯಿಂದ ಒಂದು ಚೇರ್ ತಂದು ಕಾರಿಡಾರ್ ಕೊನೆಯಲ್ಲಿದ್ದ ಕಿಟಕಿಯನ್ನು ಒಡೆದು ಹಾಕಿದ ಮಹೇಶ. ಅಡ್ಡವಿದ್ದ ಹಲಗೆ ಚೂರು

ಜೋರಾಗಿ ತುಕ್ಕು ಹಿಡಿದ ಕಂಬಿಗಳು ಕಾಣಿಸಿದವು. ಅವನ್ನೂ ಎರಡೂ ಕೈಗಳಿಂದ ಬಿಗಿಯಾಗಿಡಿದು ಬಲವಾಗೆಳೆದ. ನಿಮಿಷದಲ್ಲಿ ನಾಲ್ಕು ಕಂಬಿಗಳು ಕಿತ್ತು ಬಂದವು ಒಬ್ಬ ಮನುಷ್ಯ ತೂರುವಷ್ಟು ಬಿರುಕೇರ್ಪಟ್ಟಿತು.

ಮೆಟ್ಟಿಲುಗಳ ಮೇಲಿಂದ ಬೆಂಕಿಯು ಆರ್ಭಟದ ವಿನಹ ಮನುಷ್ಯರ್ಯಾರೂ ಬರುತ್ತಿರುವ ಸಪ್ಪಳವಿಲ್ಲ. ಗಾರ್ಡ್‌ಗಳನ್ನು ತನ್ನ ತೆಕ್ಕೆಗೆಳೆದುಕೊಂಡಿರುತ್ತದೆ ಬೆಂಕಿ. ಮಿಕ್ಕವರು ಎಲ್ಲಿದ್ದಾರೆಂದು ಗೊತ್ತಿಲ್ಲ.

ತಡ ಮಾಡಿದಷ್ಟೂ ರಗಳೆಯೆಂದುಕೊಂಡು ಕಿಟಕಿಯಿಂದ ಹೊರಕ್ಕೆ ಬಗ್ಗಿ ನೋಡಿದ. ನೆಲ ಹನ್ನೆರಡಡಿಗಳಷ್ಟು ಕೆಳಗಿತ್ತು.

ಮೊದಲು ಇವಾನ್‌ನನ್ನು ಕಿಟಕಿಯಿಂದ ತೂರಿಸಿ ಕೈಗಳನ್ನು ಹಿಡಿದು ಗೋಡೆಯ ಬದಿಯಿಂದ ಕೆಳಕ್ಕೆ ಜಾರಿಸಿದ. ಆದಷ್ಟು ಬಗ್ಗಿ ಕೈಗಳನ್ನು ಸಡಲಿಸಿದ. ಐದಡಿಗಳಷ್ಟು ಎತ್ತರದಿಂದ ಕೆಳಗೆ ಬಿದ್ದ ಇವಾನ್ ತಕ್ಷಣ ತಾನೂ ಕೆಳಕ್ಕೆ ಹಾರಿ ಇವಾನ್ ಪಕ್ಕ ತಲುಪಿದ ಮಹೇಶ.

ಹೊರಗೆ ಹೋಗುವ ದಾರಿ ಗೋಚರಿಸಿದ್ದರಿಂದ ಹೊಗೆಯೂ ಕಿಟಕಿಯಿಂದ ಹೊರ ನುಗ್ಗಿತು. ಇವಾನ್‌ನನ್ನು ಭುಜದ ಮೇಲೆ ಹೊತ್ತು ಗೇಟಿನ ಕಡೆ ದೌಡು ಕಿತ್ತ ಮಹೇಶ. ಗೇಟು ದಾಟಿ ರಸ್ತೆ ತಲುಪಿದರೆ ಟ್ಯಾಕ್ಸಿ ತಲುಗಬಹುದು ಒಮ್ಮೆ ಕಾರು ಸೇರಿಕೊಂಡರೆ ತಮ್ಮನ್ನಿಡಿಯುವ ಧೀರರ್ಯಾರೂ ಇರರು !

894.814

# 7

642248

"ವೆಲ್....ವೆಲ್....ಶತ್ರುಗಳು ನಮ್ಮನ್ನು ಹಿಂಬಾಲಿಸುತ್ತಿದ್ದಾರೆ ಮಿಸ್ಟರ್ ಮಹೇಶ್!" ರಾಡರ್ ಆಪರೇಟರ್ ಹೇಳಿದ ಮಾತುಗಳನ್ನು ಕೇಳಿ ಹೇಳಿದ ಮಾರ್ಕಂಡೇಯ ಕ್ಯಾಪ್ಟನ್.

ಡಾಕ್ಟರ್ ಇವಾನ್‌ನೊಡನೆ ಕ್ಲಬ್ ಬಿಲ್ಡಿಂಗ್‌ನಿಂದ ತಪ್ಪಿಸಿಕೊಂಡು ಹಡಗನ್ನು ಕಾಂಟಾಕ್ಟ್ ಮಾಡಿದ್ದ ಮಹೇಶ. ಆ ರಾತ್ರಿಯೇ ಪ್ರಯಾಣ ಶುರು ಮಾಡಿ ಬಾಲಿ ಐಲೆಂಡ್ ಕಡೆಗೆ ಹೊರಟುಬಿಟ್ಟಿತ್ತು ಮಾರ್ಕಂಡೇಯ. ಎರಡು ದಿನ ಕಂಗೆಡಿಸುವ ಘಟನೆಗಳ್ಯಾವೂ ನಡೆದಿರಲಿಲ್ಲ. ಬಾಲಿ ದ್ವೀಪ ಇನ್ನು ಎಪ್ಪತ್ತೈದು ಮೈಲಿಗಳಿದೆಯೆನ್ನುವಾಗ ತನ್ನ ಅನುಮಾನ ಖಚಿತ ಪಡಿಸಿಕೊಂಡು ರಿಪೋರ್ಟ್ ಮಾಡಿದ್ದ ರಾಡರ್ ಆಪರೇಟರ್.

ಇಪ್ಪತ್ತು ಗಂಟೆಗಳಿಂದ ಒಂದು ಹಡಗು ಅವರನ್ನು ಹಿಂಬಾಲಿಸಿ ಬರುತ್ತಿತ್ತು. ಯಾವುದೆಂದು ತಿಳಿಯಲಾಗದಷ್ಟು ದೂರದಿಂದ ಹಿಂಬಾಲಿಸುತ್ತಿತ್ತು. ಸಂಶಯ ನಿವಾರಣೆಗೆಂದು ಎರಡು ರೌಂಡ್ ಹೊಡೆದಿತ್ತು ಮಾರ್ಕಂಡೇಯ. ಅದು ಎತ್ತ ತಿರುಗಿದರೆ ಅತ್ತಲೇ ತಿರುಗುತ್ತಿತ್ತು ಹಿಂದೆ ಬರುತ್ತಿದ್ದ ಹಡಗು.

ಗ್ಲಾಸ್‌ನಲ್ಲಿದ್ದ ವಿಸ್ಕಿಯನ್ನು ಎರಡೇ ಗುಟುಕಲ್ಲಿ ಹೀರಿ ಮೇಲೆದ್ದು ನಿಂತ ಮಹೇಶ. ಕ್ಯಾಪ್ಟನ್ ಕೊಟ್ಟ ಸಿಗರೇಟ್ ಹತ್ತಿಸಿಕೊಂಡು ಗ್ಲಾಸ್ ಮೂಲಕ ಹೊರಗೆ ವಿಜೃಂಭಿಸುತ್ತಿದ್ದ ಸಮುದ್ರದಲೆಗಳನ್ನು ನೋಡುತ್ತಾ ನಿಂತ.

ಡಾಕ್ಟರ್ ಇವಾನ್ ಜೊತೆಗೆ ಮಾರ್ಕಂಡೇಯ ತಲುಪಿದ ವ್ಯವಹಾರ ಬಹಳ ಕೇರ್‌ಫುಲ್ಲಾಗಿ ಸೀಕ್ರೆಟ್ಟಾಗಿ ನಡೆದಿತ್ತು. ಆ ವಿಷಯ

ಶತ್ರುಗಳಿಗೆ ತಿಳಿದಿರುವುದು ಅಸಂಭವ. ಆದರೂ ತಿಳಿದು ಹೋಗಿದೆ. ತಿಳಿದೇ ಹಿಂಬಾಲಿಸುತ್ತಿರುವಿರೋ, ಇಲ್ಲವೋ ಎಂಬುದೂ ಅರಿಯಲಾಗದ ಅಯೋಮಯ ಪರಿಸ್ಥಿತಿ. ಅದು ಹಿಂಬಾಲಿಸುತ್ತಿರುವವರಿಗೆ ತಾವು ಬಾಲಿ ದ್ವೀಪದಲ್ಲಿ ಕಾಲಿಡುವಂತಿಲ್ಲ. ತಾವಲ್ಲಿ ಲಂಗರು ಹಾಕಿದರೆ ಒಂದು ಪ್ಲಸ್ ಒಂದು ಈಕ್ವಲ್ಸ್ ಎರಡು ಎಂದು ತಿಳಿಯುವಷ್ಟು ಸಮರ್ಥರು ಶತ್ರುಗಳು. ಅವರನ್ನೀಗ ಪಲ್ಟಿಯೊಡೆಸಬೇಕು....ಹೇಗೆ ?

"ಕ್ಯಾಪ್ಟನ್....ಹಡಗಿನ ಲೈಫ್ ಬೋಟೊಂದನ್ನು ಸ್ಪೇರ್ ಮಾಡಬಲ್ಲಿರಾ ?" ಇದ್ದಕ್ಕಿದ್ದಂತೆ ಕೇಳಿದ ಮಹೇಶ.

"ಏಕೆ ?"

"ನಾವಿಬ್ಬರೂ ಮುಳುಗದೆ ಪ್ರಾಣ ಕಾಪಾಡಿಕೊಳ್ಳಲು !" ನಕ್ಕ ಮಹೇಶ,

"ಇಲ್ಲಿಗೆ ಸರಿಯಾಗಿ ಅರವತ್ತೈದು ಮೈಲಿಗಳಷ್ಟು ದೂರದಲ್ಲಿದೆ ಬಾಲಿ ಐಲೆಂಡ್. ನಮ್ಮನ್ನು ಬಿಟ್ಟು ನೀವು ಪಶ್ಚಿಮಕ್ಕೆ ಹೋಗಿ ಒಂದು ಸುತ್ತು ಹೊಡೆದು ವಾಪಸ್ಸಾಗಿ ಡರ್ಬಿಯ ಕಡೆಗೇ ಹೋಗಿ ಹಿಂಬಾಲಿಸುತ್ತಿರುವವರಿಗೆ ಈ ವಿಷಯ ತಿಳಿಯದೆ ಬೆನ್ನು ಹತ್ತಿ ಬರುತ್ತಾರೆ. ಲೈಫ್‌ಬೋಟ್ ಸಣ್ಣದಾದ್ದರಿಂದ ಅವರ ರಾಡರ್ ಕಣ್ಣಿಗೆ ನಿಲುಕದು" ಅಂದ.

ಸಿಗಾರ್ ದಂ ಎಳೆಯುತ್ತಾ ಮಹೇಶನ ಮಾತುಗಳನ್ನು ಕೇಳಿಸಿಕೊಂಡ ಕ್ಯಾಪ್ಟನ್. "ಪ್ಲಾನೇನೋ ಚೆನ್ನಾಗಿದೆ. ಆದರೆ ಅಪಾಯಗಳು ಸಂಭವಿಸುವ ಸಾಧ್ಯತೆ ಹೆಚ್ಚು. ಆರ್ ಯು ಷೂರ್ ಟು ಟ್ರೈ ಇಟ್ ?" ಕೇಳಿದ.

ತಲೆಯಾಡಿಸಿದ ಮಹೇಶ. ಕ್ಯಾಪ್ಟನ್ ಮಾತಿನಲ್ಲಿ ಹುರುಳಿಲ್ಲದಿಲ್ಲ. ಬಾಲಿ ಐಲೆಂಡ್‌ಗೆ ಹೋಗುವ ದಾರಿಯಲ್ಲಿ ಸಾಕಷ್ಟು ಸಣ್ಣ ಪುಟ್ಟ ದ್ವೀಪಗಳಿವೆ. ಕೆಲವು ವಾಸ ಯೋಗ್ಯವಾಗಿದ್ದರೆ ಇನ್ನೂ ಕೆಲವು ಕಲ್ಲು ಗುಡ್ಡಗಳ ಸಮೂಹ. ಅಂತಹ ಕೆಲವು ದ್ವೀಪಗಳಲ್ಲಿರುವವರ ಜೀವನಾಧಾರವೇ ಕಳ್ಳತನ ! ಸಮುದ್ರದ ಮೇಲೆ ಓಡಾಡುವ ಸಣ್ಣ ಪುಟ್ಟ ದೋಣಿಗಳನ್ನು ದೋಚುವುದೇ ಅವರ ಕಸುಬು. ಅವರ ಕಣ್ಣಿಗೆ ಬಿದ್ದರೆ ತಮ್ಮಿಬ್ಬರ ಪ್ರಾಣಕ್ಕೇ ಸಂಚಕಾರ ಬಾಗೆಂದು ಮಾರ್ಕಂಡೇಯದಲ್ಲೇ ಇರುವುದು

ಅಸೈನ್‌ಮೆಂಟ್‌ಗೇ ಸಂಚಕಾರ! ತಾವೆಲ್ಲಿಗೆ ಹೋಗುತ್ತಿದ್ದೇವೆಂಬುದು ಶತ್ರುಗಳಿಗೆ ತಿಳಿಯಬಾರದು.

ಕ್ಯಾಪ್ಟನ್ ಬೋಟನ್ನು ಅರೇಂಜ್ ಮಾಡಲು ಹೋದೊಡನೆ ಮಹೇಶ ಡಾಕ್ಟರ್ ಇವಾನ್ ಇದ್ದ ಕ್ಯಾಬಿನ್‌ನೊಳಕ್ಕೆ ಪ್ರವೇಶಿಸಿದ. ಇನ್ನೂ ಸುಸ್ತಿಂದ ಚೇತರಿಸಿಕೊಂಡಿರಲಿಲ್ಲ ಇವಾನ್. ಬಂಧನದಲ್ಲಿ ಸರಿಯಾದ ಪೋಷಣೆಯಿಲ್ಲದೆ ಸೊರಗಿಹೋಗಿದ್ದ ಅವನು.

"ನಮ್ಮ ರೂಟ್ ಬದಲಾಯಿಸಬೇಕಾಗಿದೆ. ಇನ್ನು ಮೇಲೆ ಸಣ್ಣ ಬೋಟ್‌ನಲ್ಲಿ ಪ್ರಯಾಣ ಮಾಡುವವರಿದ್ದೇವೆ. ಕೆನ್ ಯು ಡೂ ಇಟ್?" ಪ್ರಶ್ನಿಸಿದ ಮಹೇಶ

ಬಿಳಿಯ ಹಲ್ಲುಗಳು ಕಾಣುವಂತೆ ನಕ್ಕ ಆ ರಷ್ಯನ್. "ಪ್ರಯತ್ನಿಸುತ್ತೇನೆ." ಅಂದ.

ಅವನು ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳು, ಹಾಕಿಕೊಳ್ಳಬೇಕಾದ ಬಟ್ಟೆಗಳ ಬಗ್ಗೆ ವಿವರಿಸಿ ಹೇಳಿ ಅವುಗಳನ್ನು ಸ್ಟೋರ್ ರೂಂನಿಂದ ತೆಗೆದುಕೊಳ್ಳುವಂತೆ ತಿಳಿಸಿ ಹೊರಕ್ಕೆ ಬಂದ ಮಹೇಶ. ತಾನೂ ಪ್ರಯಾಣಕ್ಕೆ ಸನ್ನದ್ಧನಾಗಲು.

ತನ್ನ ಕಿಟ್‌ಬ್ಯಾಗ್‌ನಿಂದ 'ರಾಜ', 'ರಾಣಿ'ಯರನ್ನು ಮಾಮೂಲಿ ಜಾಗಗಳಲ್ಲಿಳವಡಿಸಿಕೊಂಡು ವುಲ್ಲನ್ ಸ್ವೆಟರ್ ಧರಿಸಿ ಮೇಲೆ ಜರ್ಕಿನ್ ಒಂದನ್ನು ಹಾಕಿಕೊಂಡು ಡೆಕ್ ಮೇಲೆ ಬಂದ.

ಲೈಫ್ ಬೋಟ್ ರೆಡಿಯಾಗಿತ್ತು. ಅದಕ್ಕೆ ಸಣ್ಣ ಸ್ಪೈರಲ್ಯುರ್ ಮೋಟರ್ ಸಹ ಅಳವಡಿಸಲಾಗಿತ್ತು. ಎರಡು ಪೆಟ್ರೋಲ್ ತುಂಬಿದ ಸ್ಪೇರ್ ಕ್ಯಾನ್ಸ್ ಒಂದು ಮೂಲೆಯಲ್ಲಿದ್ದವು. ನಾಲ್ಕು ದಿನಗಳಿಗಾಗುವಷ್ಟು ಆಹಾರ ಪದಾರ್ಥಗಳು, ಕುಡಿಯುವ ನೀರು ಸೀಟಿನ ಕೆಳಗಿದ್ದ ಕಬೋರ್ಡ್‌ನಲ್ಲಿರಿಸಲಾಗಿತ್ತು. ಎಲ್ಲವನ್ನೂ ಮತ್ತೊಮ್ಮೆ ಪರೀಶಿಲಿಸಿದ ಮೇಲೆ ಬೋಟ್ ಅನ್ನು ನೀರಿಗಿಳಿಸಲಾಯಿತು.

ಹದಿನೆಂಟಡಿ ಉದ್ದುದ್ದ ಸಿಲ್ಕ್ ಬಟ್ಟೆಯೊಂದನ್ನು ತಲೆಗೆ ಪೇಟಾದಂತೆ ಸುತ್ತಿಕೊಂಡು ಪ್ರಯಾಣಕ್ಕೆ ರೆಡಿಯಾದ ಮಹೇಶ· ಆ ಟರ್ಬನ್ ಎರಡು ವಿಧದಲ್ಲಿ ಪ್ರಯೋಜನಕಾರಿ ನಡು ಸಮುದ್ರದಲ್ಲಿ ಸೂರ್ಯನ ಕಿರಣಗಳ

ತಾಪ ಅತ್ಯಧಿಕ. ಬಿಸಿಲಿಂದ ರಕ್ಷಣೆ ಕೊಡುವುದಲ್ಲದೆ ಅದು ಮಹೇಶನಿಗೆ ಡರ್ಬಿ ಪಾರ್ಕ್‌ನ ಹೋಲಿಕೆಯನ್ನು ತಂದಿತ್ತು. ಸೋ....ಯಾರೇ ಆದರೂ ಅನುಮಾನಿಸುವ ಅಸ್ಕಾರವಿಲ್ಲ.

ವುಲ್ಲನ್ ಓವರ್‌ಕೋಟ್ ಮತ್ತು ಹ್ಯಾಟ್‌ನೊಡನೆ ಸ್ಟೋರ್ ರೂಂನಿಂದ ಹೊರಬಂದ ಇವಾನ್. ಡೆಕ್ ಮೇಲಿಂದ ಇಳಿಬಿಟ್ಟ ನೂಲೇಣಿಯ ಮೂಲಕ ಇಬ್ಬರೂ ಲೈಫ್ ಬೋಟಿಗಿಳಿದರು. ಮೋಟರ್ ಸ್ಟಾರ್ಟ್ ಮಾಡಿ ಬೋಟ್ ಹಡಗಿನಿಂದ ದೂರಕ್ಕೆ ತೆಗೆದುಕೊಂಡು ಹೋದ ಮಹೇಶ. ತಕ್ಷಣ ಸ್ಪೀಡ್ ಪಿಕ್ ಅಪ್ ಮಾಡಿ ವೇಗವಾಗಿ ದೂರವಾಯಿತು ಮಾರ್ಕಂ-ಡೇಯ. ಡೆಕ್ ಮೇಲೆ ನಿಂತು ಗುಡ್ ಬೈ ಹೇಳುವಂತೆ ಕೈಯಾಡಿಸಿದ ಕ್ಯಾಪ್ಟನ್.

ಬೋಟ್‌ನಲ್ಲಿರುವ ಸರಂಜಾಮುಗಳನ್ನು ಸರಿಯಾಗಿರಿಸಿ ಬ್ಯಾಲೆನ್ಸ್ ಅಡ್ಜಸ್ಟ್ ಮಾಡಿ ಬೋಟ್ ಸ್ಟಡಿ ಮಾಡಿದ ಮಹೇಶ. ಏನೇ ಪ್ರಯತ್ನಿಸಿದರೂ ಬೋಟ್ ಮ್ಯಾಕ್ಸಿಮಮ್ ಲೆವೆಲ್ ದಾಟಿ ಎರಡಂಚಿನಷ್ಟು ನೀರಿನಲ್ಲಿಳಿದಿತ್ತು. ವಾತಾವರಣ ಮಾಮೂಲಾಗಿರದಿದ್ದರೆ ಈ ಎರಡಿಂಚೇ ಮಾರಕವಾಗಬಹುದು! ಬೋಟ್‌ನಲ್ಲಳವಡಿಸಿದ್ದ ಕಂಪಾಸ್ ಹೆಲ್ಪಿನಿಂದ ಬಾಲಿ ದ್ವೀಪದ ಕಡೆಗೆ ತಿರುಗಿಸಿ ಚುಕ್ಕಾಣಿ ಹಿಡಿದು ಸ್ಟೀಯರ್ ಮಾಡತೊಡಗಿದ ಮಹೇಶ.

ಕಾಲುಗಂಟೆಗೆಲ್ಲಾ ಮಾರ್ಕಂಡೇಯ ಕಣ್ಮರೆಯಾಗಿ ಬಿಟ್ಟಿತ್ತು. ಎತ್ತ ನೋಡಿದರೂ ನೀರು. ಮೇಲೆ ಸೂರ್ಯ ಬೆಂಕಿಗಿಂತಲೂ ಪ್ರಜ್ವಲ ಕಿರಣಗಳನ್ನು ಹೊರ ಚೆಲ್ಲುತ್ತಿದ್ದ. ನೀರನ್ನು ಸೀಳಿಕೊಂಡು ವೇಗವಾಗಿ ಪ್ರಯಾಣಿಸುತ್ತಿತ್ತು ಬೋಟ್.

ಸಂಜೆಯಾಯಿತು. ಸೂರ್ಯ ಪಶ್ಚಿಮದಲ್ಲಿ ರಾರಾಜಿಸತೊಡಗಿದ. ನಿಮಿಷಗಳು....ಗಂಟೆಗಳಾಗಿ ವೇಗವಾಗಿ ಸರಿಯುತ್ತಿದ್ದವು. ಮೋಟರ್ ಶಬ್ದ, ನೀರನ್ನು ಸೀಳಿಕೊಂಡು ಹೋಗುತ್ತಿರುವ ಸೌಂಡ್ ವಿನಹ ಬೇರೆ ಶಬ್ದವಿಲ್ಲ.

ಬಿಸಿಲ ಬೇಗೆ ತಾಳಲಾರದೆ ಟಾರ್ಪಾಲಿನ್ ಕೆಳಗೆ ಸೇರಿಕೊಂಡಿದ್ದ

ಇವಾನ್ ಹೊರಗಡೆ ಬಂದ. ನಿಮಿಷ ಸುತ್ತಲೂ ದಿಟ್ಟಿಸಿ, "ನಾವೆಲ್ಲಿದ್ದೇವೆ ?" ಎಂದು ಪ್ರಶ್ನಿಸಿದ.

ಬಾಲಿಯಿಂದ ನಲವತ್ತು ಮೈಲಿಗಳಷ್ಟು ದೂರದಲ್ಲಿದ್ದೇವೆ ಎಂದು ತಿಳಿಸಿದ ಮಹೇಶ ಕಂಪಾಸ್ ಚೆಕ್ ಮಾಡಿ ವಾತಾವರಣ ಹೀಗೇ ಇದ್ದರೆ ನಾಳೆ ಮಧ್ಯಾಹ್ನ ಬಾಲಿಯಲ್ಲಿರುತ್ತೇವೆಂದೂ ತಿಳಿಸಹೋದ

ಆಗಲೇ ಅಲ್ಲಿಯವರೆಗೆ ಬೀಸುತ್ತಿದ್ದ ಗಾಳಿ ಏಕ್‌ದಂ ಸ್ತಬ್ಧವಾಯಿತು. ಅಲೆಗಳ ರಭಸ ಕಡಿಮೆಯಾಗಿ ಸಮುದ್ರ ಪ್ರಶಾಂತವಾಯಿತು.

ಬೆಚ್ಚಿಬಿದ್ದು ಸುತ್ತಲೂ ನೋಡಿದ ಮಹೇಶ. ಅಂದುಕೊಂಡಂತೆಯೇ ಆಗಿತ್ತೀಗ ಮಾರನೇ ದಿನವಿರಲಿ....ಸಮುದ್ರಕ್ಕೆ ಬಲಿಯಾಗದೆ ಜೀವಂತವಾಗಿ ಹೊರ ಬಿದ್ದರೇನೇ ಪವಾಡವಾದೀತು ! ಅಲ್ಲಿಯವರೆಗೆ ಕೆಳಗಿರಿಸಿದ್ದ ಸಣ್ಣ ಸ್ಪೈರ್‌ಚರ್ ತೆರೆಯನ್ನು ಮಾಸ್ಟ್‌ಗೆ ಹತ್ತಿಸಿ ಎಮರ್ಜೆನ್ಸಿಗೆ ಸಿದ್ಧನಾದ.

ಮೆಲ್ಲಗೆ ತಣ್ಣನೆಯ ಗಾಳಿ ಬೀಸಲು ಶುರುವಾಯಿತು. ಕ್ರಮೇಣ ಅಲೆಗಳು ದೊಡ್ಡದಾಗತೊಡಗಿದವು. ನಿಮಿಷ ನಿಮಿಷಕ್ಕೆ ಗಾಳಿಯ ಜೋರು ಹೆಚ್ಚತೊಡಗಿತು. ಮಳೆಯ ಹನಿಗಳೂ ಬೀಳತೊಡಗಿದವು. ಬೋಟ್ ಎಗರೆಗರಿ ಬೀಳಲು ಶುರುವಾಯಿತು

ಬೋಟ್‌ನ ರೂಟ್ ಚೇಂಜ್ ಮಾಡಿ ಎಡಕ್ಕೆ ತಿರುಗಿಸಿದ ಮಹೇಶ. ಕತ್ತಲಾಗುವ ವೇಳೆಗೆ ದೂರದಲ್ಲಿ ಕೆಲವು ದ್ವೀಪಗಳು ಕಾಣಿಸಿದವು. ಅಟ್ ಲೀಸ್ಟ್ ಚಂಡಮಾರುತ ಬಂದೆರಗುವುದರೊಳಗೆ ಆ ದ್ವೀಪಗಳಲ್ಲೊಂದನ್ನು ಸೇರಿದರೆ ಪ್ರಾಣ ಉಳಿಸಿಕೊಳ್ಳಬಹುದು ಎಂದೆನ್ನಿಸಿತು.

ಆದರೆ ಅವಕಾಶ ಸಿಕ್ಕೊಡನೆ ವಿಜೃಂಭಿಸಿತು ಚಂಡಮಾರುತ. ಭೂಮಧ್ಯ ರೇಖೆಗೆ ಹತ್ತಿರದಲ್ಲಿರುವ ಸಮುದ್ರದಲ್ಲಿ ಸೈಕ್ಲೋನ್ ಯಾವಾಗ ಕಾಣಿಸಿಕೊಂಡೀತೆಂದು ಪ್ರೆಡಿಕ್ಟ್ ಮಾಡಲಾಗದು. ಅಲ್ಲಿ ಬೋಟುಗಳಲ್ಲಿನ ಪ್ರಯಾಣ ಹರಿತ ಖಡ್ಗದ ಮೇಲಿನ ವ್ಯಾಯಾಮದಂತೆಯೇ ಮಾರ್ಕಂಡೇಯ್ ಕ್ಯಾಪ್ಟನ್ ಭಯ ಪಡಲು ಕಾರಣ ಇದೂ ಒಂದು.

ಕುಂಭದ್ರೋಣ ಮಳೆ ಶುರುವಾಯಿತು. ನಿಧಾನವಾಗಿ ಬೋಟ್‌ನಲ್ಲಿ ನೀರು ತುಂಬ ತೊಡಗಿತು. ಅಲೆಗಳ ಡಿಕ್ಕಿಯಿಂದಾಗಿ ಬೋಟು ಅದ್ಯಾವಾಗ ಮುಳುಗೀತೆಂದು ಹೇಳಲಾಗದ ಪರಿಸ್ಥಿತಿ. ನೀರಿನಲ್ಲಿ ನೆಂದ ಕಾರಣ

ಮೋಟರ್ ಆಫ್ ಆಗಿ ಹೋಗಿತ್ತು. ಮತ್ತೆ ಸ್ಟಾರ್ಟ್ ಮಾಡಲು ಮಹೇಶ ಮಾಡಿದ ಪ್ರಯತ್ನವೆಲ್ಲಾ ವ್ಯರ್ಥವಾಗಿತ್ತು. ವೇಗ ಕಡಿಮೆಯಾದ ಕಾರಣ ಅಲೆಗಳು ಚಿಮ್ಮಿದ ಕಡೆಯೆಲ್ಲಾ ಹೋಗಲು ಶುರು ಮಾಡಿತ್ತು ಬೋಟ್. ತಕ್ಷಣ ತೆರೆ ಮೇಲೆತ್ತಿದ ಮಹೇಶ. ಗಾಳಿ ತುಂಬಿಕೊಂಡು ತೂಫಾನ್ ಬೀಸುತ್ತಿರುವ ದಿಕ್ಕಿಗೇ ಬೋಟನ್ನು ಎಳೆದೊಯ್ದಿತು ಅದು. ಆಗಲೇ ಬೋಟಿನಲ್ಲಿದ್ದ ಸಾಮಾನುಗಳಿಂದಲೇ ಅಪಾಯ ಸನ್ನಿಹಿತವಾಗುವ ಪರಿಸ್ಥಿತಿಯೊದಗಿತು. ಒಳಗೆ ತುಂಬುತ್ತಿದ್ದ ನೀರಿನ ತೂಕ ಅವುಗಳ ತೂಕದಿಂದಾಗಿ ಬೋಟ್ ಮುಳುಗುವ ಸ್ಥಿತಿ ತಲುಪಿತು. ಹಿಂದೆ ಮುಂದೆ ಯೋಚಿಸದೆ ನಿರ್ದಾಕ್ಷಿಣ್ಯವಾಗಿ ಎಲ್ಲ ಸಾಮಾನುಗಳನ್ನೂ ತೆಗೆದು ನೀರಿಗೆಸೆದುಬಿಟ್ಟ ಮಹೇಶ. ಮೋಟರ್ ಸಹ ಬಿಚ್ಚಿ ಪಕ್ಕಕ್ಕೊಗೆದುಬಿಟ್ಟ. ಒಂದು ಬಕೆಟ್‌ನಲ್ಲಿ ನೀರನ್ನೆತ್ತಿ ಹೊರ ಚೆಲ್ಲುತ್ತಿದ್ದ ಇವಾನ್. ಅಷ್ಟೇ ಫಾಸ್ಟಾಗಿ ಮತ್ತೆ ತುಂಬಿಕೊಳ್ಳುತ್ತಿತ್ತು ನೀರು.

ಕಾರ್ಗತ್ತಲಲ್ಲಿ ಎತ್ತ ಹೋಗುತ್ತಿದ್ದೇವೆಂಬುದೇ ತಿಳಿಯಲಾಗುತ್ತಿಲ್ಲ.

ಬಿರ್ರನೆ ಬೀಸುತ್ತಿರುವ ಬಿರುಗಾಳಿಗೆ ಪಟಪಟನೆ ಹೊಡೆದುಕೊಳ್ಳುತ್ತಿತ್ತು ತೆರೆ. ಅದಿರುವವರೆಗೆ ನಿಲ್ಲದೆ ಮುಂದಕ್ಕೆ ಸಾಗುತ್ತಿತ್ತು ಬೋಟ್. ನಿಂತರೆ ಮಾತ್ರ....ಮುಳುಗುವುದು ಗ್ಯಾರಂಟಿ !

ಆಸೆ, ನಿರಾಸೆಗಳ ನಡುವೆ ತೊನೆದಾಡುತ್ತಾ ಚುಕ್ಕಾಣಿ ಹಿಡಿದು ಬ್ಲೈಂಡ್ ಆಗಿ ಬೋಟನ್ನು ಕಂಟ್ರೋಲ್ ಮಾಡುತ್ತಾ ಬದುಕಿ ದಡ ತಲುಪುವೆವೇ ಎಂದು ಯೋಚಿಸುತ್ತಿದ್ದ ಮಹೇಶ.

# 8

ಐವತ್ತು ಅರವತ್ತು ಅಡಿಗಳ ಎತ್ತರದ ಅಲೆಗಳ ಮೇಲೇರಿ ಎಗರಿಗರಿ ಬೀಳುತ್ತಾ ಕ್ಷಣಕ್ಕೊಂದು ಗಂಡಾಂತರದಿಂದ ಪಾರಾಗುತ್ತಾ ಅದೇಗೋ ಅಪ್‌ಸೆಟ್ಟಾಗದೆ ಮುಂದಕ್ಕೆ ಸಾಗುತ್ತಲೇ ಇತ್ತು ಬೋಟ್. ಚುಕ್ಕಾಣಿ ಗಂಟಿಕೊಂಡಂತೆ ಕುಳಿತುಬಿಟ್ಟಿದ್ದ ಮಹೇಶ. ಇನ್ನೊಂದು ಕೈನಿಂದ ತೆರೆಯನ್ನು ತಿರುಗಿಸುತ್ತಿದ್ದ. ಗಾಳಿ, ಮಳೆಯನ್ನನುಸರಿಸಿ ಹಗ್ಗದ ಮೂಲಕ ತೆರೆಯನ್ನು ನಿಯಂತ್ರಿಸುತ್ತಿದ್ದ. ಬಗ್ಗಿಸಿದ ಸೊಂಟ ಮೇಲೆತ್ತದೆ ಬೋಟಿನಲ್ಲಿ ತುಂಬಿದ ನೀರನ್ನು ಹೊರಚೆಲ್ಲುವ ಕಾಯಕದಲ್ಲಿ ತೊಡಗಿದ್ದ ಇವಾನ್. ಮೊದಲೇ ಬಳಲಿದ್ದವನಾತ. ಜೊತೆಗೆ ಬಿಸಿಲ ಬೇಗೆಯಿಂದ ಮತ್ತಷ್ಟು ಆಯಾಸಗೊಂಡಿದ್ದ. ಈಗಂತೂ ಒಂದು ಕ್ಷಣವೂ ವಿಶ್ರಾಂತಿಯಿರಲಿಲ್ಲ. ಕೈಗಳು ಜಡವಾಗಿ ಸ್ಲೋ ಆಕ್ಷನ್‌ನೊಡನೆ ತನ್ನ ಕೆಲಸ ನಿರ್ವಹಿಸ ತೊಡಗಿದ್ದ.

ಇದ್ದಕ್ಕಿದ್ದಂತೆ ಭರೋ ಎಂದು ಇಮ್ಮಡಿ ವೇಗದೊಡನೆ ಬೀಸತೊಡಗಿತು ಗಾಳಿ. ನೂರಡಿ ಎತ್ತರವಿದ್ದ ಅಲೆಯೊಂದು ಬೋಟನ್ನು ತಾರಾಮಾರಾ ಎತ್ತೆಸೆಯಿತು. ಮಹೇಶನ ಕೈನಿಂದ ಚುಕ್ಕಾಣಿ ಜಾರಿ ಹೋಯಿತು ತೆರೆಯ ದಾರ ಅರ್ಧಕ್ಕೆ ತುಂಡಾಯಿತು. ಕ್ಯಾಟರ್ ಬಿಲ್‌ನಿಂದ ಹೊರ ಬೀಳುವ ಕಲ್ಲಿನಂತೆ ದೂರದಲ್ಲೆಲ್ಲೋ ಹೋಗಿ ಬಿದ್ದ ಮಹೇಶ. ಬೋಟ್ ಏನಾಯಿತೋ ಗೊತ್ತಿಲ್ಲ....ಇವಾನ್ ಏನಾದನೆಂಬುದನ್ನು ಊಹಿಸಲೂ ಸಾಧ್ಯವಾಗಲಿಲ್ಲ.

ಕಣ್ಣು ತೆರೆದಾಗ ಅರ್ಧ ಮರಳಲ್ಲೂ ಅರ್ಧ ನೀರಿನಲ್ಲೂ ಇತ್ತವನ ದೇಹ. ಇನ್ನೂ ಬೆಳಗಾಗಿರಲಿಲ್ಲ. ಬಿರುಗಾಳಿಯ ವೇಗ ತಗ್ಗಿತ್ತು. ಮಳೆ ಸಂಪೂರ್ಣವಾಗಿ ನಿಂತು ಹೋಗಿತ್ತು. ಗಾಳಿ ಮಾತ್ರ ಬೀಸುತ್ತಲೇ ಇತ್ತು.

ಚುಮುಗುಡುತ್ತಿದ್ದ ಅವಯವಗಳನ್ನು ಸ್ವಾಧೀನಕ್ಕೆ ತಂದು ಕೊಳ್ಳಲು ಪ್ರಯತ್ನಿಸುತ್ತಾ ಮೇಲೆದ್ದು ಸುತ್ತಲೂ ನೋಡಿದ. ತಾನು ಬೋಟಿನಿಂದ ಕಿಕ್ ಔಟ್ ಆದಾಗ ಅಸ್ಪಷ್ಟವಾಗಿ ನೆಲ ಕಾಣಿಸಿದ ನೆನಪು. ಅದೇ ನಿಜವಾಗಿದ್ದಲ್ಲಿ ಇವಾನ್ ಸುತ್ತಮುತ್ತಲೆಲ್ಲೋ ಇರಬೇಕು. ಇರ ಬಹುದೇ ? ಇದ್ದರೆ ಬದುಕಿರುತ್ತಾನೆಯೋ ?

ಅರ್ಥವಿಲ್ಲದ ಸಂದೇಹಗಳಿಂದ ಮನಸ್ಸು ಕೆಡಿಸಿಕೊಳ್ಳುವುದೇಕೆಂದು ಆ ಪ್ರದೇಶವನ್ನೆಲ್ಲಾ ರೌಂಡ್ ಹೊಡೆದ. ಎಲ್ಲಿ ನೋಡಿದರೂ ಕಲ್ಲು ಬಂಡೆ ಗಳು. ಸಣ್ಣ ಮುಳ್ಳು ಪೊದೆಗಳು. ಒಂದು ಕಡೆ ಅರ್ಧ ಡಝನ್ ದೋಣಿಗಳು ಕಾಣಿಸಿದವು!

ಅಂದರೆ ಈ ದ್ವೀಪದಲ್ಲಿ ಮನುಷ್ಯರಿದ್ದಾರೆ. ದೋಣಿಗಳ ಬಳಿಗೆ ಹೋಗಿ ಪರಿಶೀಲಿಸಿದ. ಅಲೆಗಳ ಜೋರು ತಡೆಯಲು ಸಾಧ್ಯವಾಗುವಂತೆ ಬಲವಾದ ಹಲಗೆಗಳಿಂದ ನಿರ್ಮಾಣಗೊಂಡಿದ್ದುವವು. ಅವುಗಳಲ್ಲಿ ಸಮುದ್ರ ಪ್ರಯಾಣ ಮಾಡುವುದು ಸುಲಭ. ಆದರೆ ದೋಣಿಯನ್ನು ಸಮುದ್ರಕ್ಕೆ ಸೇರಿಸುವುದು ಹೇಗೆ ? ಕನಿಷ್ಠ ಇಪ್ಪತ್ತು ಜನರಾದರೂ ಅದನ್ನು ತಳ್ಳ ಬೇಕು. ಒಬ್ಬರಿಬ್ಬರಿಂದ ಆಗುವ ಕೆಲಸವಲ್ಲ. ಆ ದೋಣಿಗಳಲ್ಲಿ ಪ್ರಯಾ ಣಿಸುವ ಆಸೆ ಬಿಟ್ಟುಬಿಟ್ಟ ಮಹೇಶ.

ಇನ್ನು ಕಾಲು ಗಂಟೆ ಕಳೆಯಿತು. ಸುಮಾರು ಎರಡು ಫರ್ಲಾಂಗ್ ನಷ್ಟು ದೂರ ನೀರಿನ ದಡದಲ್ಲೇ ನಡೆದ. ಇವಾನ್ ಕಾಣಲಿಲ್ಲ. ಅವನು ಬದುಕಿರಲಾರ ಎಂಬ ಯೋಚನೆ ಮಾತ್ರಕ್ಕೇ ಎದೆ ಝಲ್ಲೆಂದಿತು. ಅವ ನಿಲ್ಲದೆ ಸಿಲ್ವರ್ ಕಿಂಗ್ ಪರಿ ಮಾಡಲಸಾಧ್ಯ. ಇನ್ನೊಬ್ಬರನ್ನು ಕರೆಸು ವುದೂ ಅಸಂಭವವೇ. ಈಗಾಗಲೇ ಶತ್ರುಗಳಿಗೆ ಬಹಳ ವಿಷಯಗಳು ತಿಳಿದು ಹೋಗಿವೆ. ಇನ್ನು ಸಿಲ್ವರ್ ಕಿಂಗ್ ಎಲ್ಲಿದೆಯೆಂಬುದನ್ನು ಕಂಡು ಕೊಳ್ಳದೆ ಬಿಡರು. ಅದೆಲ್ಲಿದೆಯೆಂದು ತಿಳಿದೊಡನೆ ಸಿಲ್ವರ್ ಕಿಂಗ್ ಸ್ಥಿತಿ ಅಧೋಗತಿಯೇ !

ಬೆಳಕಾದ ಮೇಲೆ ಮತ್ತೊಮ್ಮೆ ಹುಡುಕುವುದೆಂದು ನಿರ್ಧರಿಸಿ ಬಂಡೆ ಗಲ್ಲೊಂದರ ಬದಿಯಲ್ಲಿ ಮೈ ಮುದುಡಿಕೊಂಡು ಕುಳಿತ. ಚೆನ್ನಾಗಿ ಬಳ ಲಿದ್ದ ಶರೀರಕ್ಕೆ ನಿದ್ರೆ ಬರಲೂ ಹೆಚ್ಚು ಹೊತ್ತೇನೂ ಹಿಡಿಯಲಿಲ್ಲ.

ಮತ್ತೆ ಕಣ್ಣು ಬಿಟ್ಟಾಗ ಬೆಳಕಾಗಿತ್ತು. ಆಕಳಿಸುತ್ತಾ ಮೈಗಂಟಿದ್ದ ಮರಳನ್ನು ಒದರುತ್ತ ಎದ್ದು ಕುಳಿತ ಮಹೇಶ. ಪಕ್ಕಕ್ಕೆ ತಿರುಗಿದವನು....ಹೇಗಿದ್ದವನು ಹಾಗೆಯೇ ಫ್ರೀಜ್ ಆಗಿಬಿಟ್ಟ. ಸಂತೋಷ. ಭಯ ಒಟ್ಟಿಗೆ ಅವನನ್ನು ಕಕ್ಕಾಬಿಕ್ಕಿಯಾಗಿಸಿದವು.

ಹತ್ತು ಗಜಗಳಷ್ಟು ದೂರದಲ್ಲಿ ಅರ್ಧ ಚಂದ್ರಾಕಾರದಲ್ಲಿ ನಿಂತು ಅವನನ್ನೇ ನೋಡುತ್ತಿದ್ದರು ಕೆಲವು ವೃದ್ಧಕಾಯರು. ಅವರ ಅವತಾರ, ಬಟ್ಟೆಗಳನ್ನು ನೋಡಿದೊಡನೆ ದೋಣಿಗಳನ್ನು ದೋಚುವ ಡಕಾಯಿತರೆಂದು ಸುಲಭವಾಗಿ ಅರ್ಥವಾಯಿತು ಮಹೇಶನಿಗೆ.

ಅವರ ನಡುವೆ ಜೀವಂತವಾಗಿ ನಿಂತಿದ್ದ ಡಾಕ್ಟರ್ ಇವಾನ್ !

"ಹಲೋ....ಗುಡ್ ಮಾರ್ನಿಂಗ್ !" ಅಂದ ಮಹೇಶ ಡರ್ಬಿ ಭಾಷೆಯಲ್ಲಿ.

ಅವರಿಂದ್ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಅದೇಗೋ ಒಟ್ಟಿನಲ್ಲಿ ಜಲಸಮಾಧಿ ಹೊಂದದೆ ಇವರ ನಡುವೆ ಬಂದು ಸಿಕ್ಕಿಕೊಂಡಿದ್ದ ಇವಾನ್.

ಒಂದೊಂದೇ ಹೆಜ್ಜೆ ಮುಂದಿಡುತ್ತಾ ಮಹೇಶನನ್ನು ಸುತ್ತುವರಿಯ ತೊಡಗಿದ್ದರು ಅವರು.

"ಯಾರು ನೀನು ? ಇಲ್ಲಿಗೇಕೆ ಬಂದೆ ?" ಅವರಲ್ಲೊಬ್ಬ ಪ್ರಶ್ನಿಸಿದ.

"ಸಮುದ್ರ ದೇವತೆಯ ಕೋಪಕ್ಕೆ ಗುರಿಯಾಗಿ ಇಲ್ಲಿಗೆ ಬಂದು ಬಿದ್ದೆವು." ಅವರ ಭಾಷೆ ಅನುಸರಿಸುತ್ತಾ ಡರ್ಬಿಯನ್ನು ಉತ್ತರಿಸಿದ ಮಹೇಶ.

ಇವಾನ್‌ಗೆ ಅವರ ಭಾಷೆ ಬರದು. ಇಂಗ್ಲೀಷ್ ಅರ್ಥ ಮಾಡಿಕೊಳ್ಳುವವರು ಅವರಲ್ಲಿದ್ದಾರೋ ಇಲ್ಲವೋ ಗೊತ್ತಿಲ್ಲ. ಅವರವನ ಬಳಿ ವಿವರಗಳನ್ನರಿತಿದ್ದರೆ ತಾನು ಆತುರ ಪಡದಿರುವುದೇ ಒಳ್ಳೆಯದು. ಹಾಗಂದು ಕೊಂಡೊಡನೆ ಇವಾನ್ ಜೊತೆಗೆ ರಷ್ಯನ್‌ನಲ್ಲಿ ಮಾತಾಡಿದ. ತನಗೆ ಎಚ್ಚರವಾದಾಗ ಇವರ ಬಂಧಿಯಾಗಿದ್ದೆನೆಂದು, ಭಾಷೆ ಅರ್ಥವಾಗದ ಕಾರಣ ಏನೂ ಮಾತಾಡಿಲ್ಲವೆಂದು ತಿಳಿಸಿದ ಇವಾನ್.

"ಇವಾನ್ ನಿನಗೆ ಗೊತ್ತೇ ?" ಇವಾನ್ ಕಡೆಗೆ ತೋರಿಸುತ್ತಾ ಕೇಳಿದ ಅದೇ ವ್ಯಕ್ತಿ.

ಗೊತ್ತಿನ್ನುವಂತೆ ತಲೆಯಾಡಿಸಿದ ಮಹೇಶ. ಇವಾನ್ ಸಿಂಗಪುರ್‌ನಿಂದ ಹೊರಟಿರುವ ವರ್ತಕರೆನಂದೂ ಮಧ್ಯದಲ್ಲಿ ಬಿರುಗಾಳಿಯ ಕಾರಣ ಹಡಗು ಮುಳುಗಿತೆಂದೂ ತಾವಿಬ್ಬರೂ ಪ್ರಾಣ ಉಳಿಸಿಕೊಳ್ಳಲು ಸಣ್ಣ ಬೋಟ್‌ನಲ್ಲಿ ಪ್ರಯಾಣಿಸಿದೆವೆಂದೂ ತಿಳಿಸಿ ತಾನವನ ಹೆಲ್ಪರ್ ಎಂದೂ ಪ್ರಕಟಿಸಿದ.

ಬೇರೆ ಪ್ರಶ್ನೆ ಕೇಳದೆ ಅವರೊಡನೆ ದ್ವೀಪದ ಮಧ್ಯ ಭಾಗ ಸೇರಿದರು ಎಲ್ಲರೂ. ಒಟ್ಟು ಇಪ್ಪತ್ತು ಜನರಿದ್ದರು ಅವರು. ಎಲ್ಲರ ಕೈಗಳಲ್ಲೂ ಈಟಿಗಳಿದ್ದವು. ನೀರಿನಲ್ಲಿ ನೆಂದ ಹೋಲ್‌ಸ್ಟರ್‌ದಲ್ಲಿರುವ 'ರಾಜ' ಈಗ ನಿರುಪಯುಕ್ತ. 'ರಾಜ'ನಿಂದಲೂ ಸಹಾಯ ನಿರೀಕ್ಷಿಸಲಾಗದು ಇಪ್ಪತ್ತು ಜನರ ನಡುವೆ ಅನ್ನಿಸಿತು ಮಹೇಶನಿಗೆ.

ತೀರದಿಂದ ಎರಡು ಫರ್ಲಾಂಗ್ ನಡೆದ ಮೇಲೆ ಅವರ ಗುಡಿಸಿಲುಗಳು ಕಾಣಿಸಿದವು. ನೆಲ ಪೂರ್ತಿ ಕೆಸರು ಗುಡಿಸಿಲುಗಳ ಸುತ್ತಲೂ ತೆಂಗಿನ ಮರಗಳಿದ್ದವು.

ಮಹೇಶ, ಇವಾನ್‌ರೊಡನೆ ಬರುತ್ತಿರುವ ಗುಂಪನ್ನು ಗಮನಿಸಿ ಗುಡಿಸಿಲುಗಳಲ್ಲಿದ್ದವರೆಲ್ಲಾ ಹೊರ ಬಂದರು. ಲಂಗಗಳ ವಿನಹ ಬರಿದೆದೆಯ ಹೆಂಗಸರು, ದಿಗಂಬರರಾಗಿರುವ ಮಕ್ಕಳು, ಗಟ್ಟಿ ಮುಟ್ಟಾಗಿರುವ ಯುವಕರು, ಮುದುಕರು....ಎಲ್ಲರ ನೋಟಗಳಲ್ಲೂ ಅನುಮಾನ, ಅಸಹನೆ.

ಅಲ್ಲಿರುವ ಎಲ್ಲಾ ಗುಡಿಸಿಲುಗಳಿಗಿಂತಲೂ ದೊಡ್ಡದಾದ ಗುಡಿಸಿಲ ಮುಂದೆ ಅವರಿಬ್ಬರನ್ನೂ ನಿಲ್ಲಿಸಿದರು.

ಒಳಗಿಂದ ಆರಡಿಗಳ ಅಜಾನುಬಾಹುವೊಬ್ಬ ಹೊರಬಂದ. ಅವನೇ ಅವರ ನಾಯಕನೆನ್ನುವಂತೆ ದೊಡ್ಡ ಪೇಟಾ, ಬೆಳ್ಳಿ ಆಭರಣಗಳನ್ನು ಧರಿಸಿದ್ದ ಅವನು. ಅವನ ಮುಖ ಕಂಡೊಡನೆ ಬಗ್ಗಿ ನಮಸ್ಕಾರ ಮಾಡಿದರೆಲ್ಲಾ. ಅಪರಿಚಿತರು ಹೇಗೆ ಸಿಕ್ಕಿದರೆಂಬುದನ್ನು ವಿವರಿಸಿದ ಅವರಲ್ಲೊಬ್ಬ. ಎಲ್ಲಾ ಕೇಳಿ ಮಹೇಶನ ಕಡೆ ದುರುಗುಟ್ಟಿ ನೋಡಿದ ನಾಯಕ.

"ಅವರೇಳುತ್ತಿರುವುದೆಲ್ಲಾ ನಿಜ. ನಾವು ಬಂದ ಜಾಗ ಪರಿಶೀಲಿಸಿದರೆ ಬೋಟಿನ ಮುರಿದ ಭಾಗಗಳು ಸಿಗಬಹುದು. ದೇವರ ದಯೆದಿಂದ ಹೇಗೋ ಪ್ರಾಣ ಉಳಿಸಿಕೊಂಡು ಇಲ್ಲಿಗೆ ತಲುಪಿದ್ದೇವೆ." ಅವನೇನಾದರೂ ಹೇಳುವ

ಮೊದಲೇ ಹೇಳಿದ ಮಹೇಶ.

"ನಿಮ್ಮನ್ನು ನಂಬುವುದು ಹೇಗೆ ? ಇಲ್ಲಿಗೆ ಬಂದು ನಮ್ಮ ರಹಸ್ಯ ತಿಳಿದುಕೊಳ್ಳಲು ಬಂದಿರಬಾರದೇಕೆ ?" ಕೇಳಿದ ನಾಯಕ.

"ಅಂತಹ ಆಲೋಚನೆಯೇ ನಮಗಿಲ್ಲ. ನೀವು ಅನುಮತಿ ಕೊಟ್ಟರೆ ಹೊರಟುಹೋಗುತ್ತೇವೆ" ಅಂದ ಮಹೇಶ ಮನ ಒಲಿಸುವ ಧ್ವನಿಯಲ್ಲಿ.

ಸುಮಾರು ಒಂದು ಚದರ ಮೈಲಿಯಷ್ಟಿರಬಹುದು ಆ ದ್ವೀಪ. ಗ್ರಾಮದ ಸುತ್ತಲೂ ಇರುವ ಗಿಡಗಳ ವಿನಹ ಇನ್ನೆಲ್ಲ ಬಂಡೆಗಲ್ಲುಮಯ.

"ನಿಮ್ಮ ದ್ವೀಪದ ಹೆಸರು ತಿಳಿದುಕೊಳ್ಳಬಹುದೇ ?" ಮೆಲ್ಲಗೆ ಪ್ರಶ್ನಿಸಿದ ಮಹೇಶ.

ಆ ಪ್ರಶ್ನೆಗೆ ಸಮಾಧಾನ ಕೊಡಲು ತಟಪಟಾಯಿಸಿದ ಅವರ ನಾಯಕ ಏನೆಂದುಕೊಂಡನೋ 'ಜೂಕಾ !' ಎಂದು ಹೇಳಿ ಅನುಚರರಿಗೆ ಸನ್ನೆ ಮಾಡಿದ. ಇಬ್ಬರನ್ನು ಕೈಹಿಡಿದು ಎಳೆದೊಯ್ದರು ಅವರು.

ಹತ್ತು ನಿಮಿಷಗಳ ನಂತರ ತೆಂಗಿನ ಗರಿಯ ಗುಡಿಸಿಲೊಂದರಲ್ಲಿ ಬಂದಿಗಳಾದರು ಮಹೇಶ, ಇವಾನ್ ಗುಡಿಸಿಲಾಚೆ ಕಾವಲಿದ್ದ ನಾಲ್ವರು ಜೂಕಾ ನಿವಾಸಿಗಳು.

ಗುಡಿಸಿಲಿನ ಮಧ್ಯದಲ್ಲಿ ಪದ್ಮಾಸನ ಹಾಕಿ ಕುಳಿತ ಮಹೇಶ. ಅವನ ಪಕ್ಕದಲ್ಲೇ ನೆಲದ ಮೇಲೆ ಅಡ್ಡಾದ ಇವಾನ್. ಕಾಲು ಗಂಟೆ ಇಬ್ಬರೂ ಮೌನದೊಡನೆಯೇ ಇದ್ದರು. ನಸು ಕೆಮ್ಮಿ ಮೌನ ಭಂಗ ಮಾಡಿದ ಇವಾನ್.

"ಏನಾಯಿತು ಮಿಸ್ಟರ್ ಮಹೇಶ" ಕೇಳಿದ.

ಮೆಲು ಧ್ವನಿಯಲ್ಲಿ ನಡೆದದ್ದನ್ನೆಲ್ಲಾ ವಿವರಿಸಿದ ಮಹೇಶ. ಮುದುಕಿಯೊಬ್ಬಳ ಆಗಮನವಾದಗ ಅವರ ಸಂಭಾಷಣೆಗೆ ಬ್ರೇಕ್ ಬಿತ್ತು. ಎರಡು ಕುಡಿಕೆಗಳಲ್ಲಿ ನೀರು, ಎಲೆಗಳ ಮೇಲೆ ಎರಡೆರಡು ರೊಟ್ಟಿಗಳನ್ನಿಟ್ಟು ತಂದು ಅವರ ಮುಂದಿರಿಸಿ ಹೊರಟುಹೋದಳು.

ಕಚ್ಚಿದರೆ ಹಲ್ಲುಗಳು ಅಲ್ಲಾಡುವಂತಿದ್ದ ಆ ರೊಟ್ಟಿ ಮುರಿದು ಜೊಲ್ಲಿನಲ್ಲಿ ನೆನೆಸುತ್ತಾ ಅಲ್ಲಿಂದ ಹೊರಬೀಳುವ ಪಥಕರಾಚನೆಯಲ್ಲಿ ತೊಡಗಿದ ಮಹೇಶ ಹೋರಾಟ, ಪರಾರಿಯಾಗುವುದು ಇಲ್ಲಿ ಅಸಂಭವ.

ತಮಗೆ ಅಷ್ಟು ಚೈತನ್ಯವೂ ಇಲ್ಲ, ಆಯುಧಗಳೂ ಇಲ್ಲ....ಇನ್ನೂ ಒಳ್ಳೆಯ ತನದೊಡನೆಯೇ ಅಲ್ಲಿಂದ ಪಾರಾಗಬೇಕು.

ಜೀವನಕ್ಕಾಗಿ ದರೋಡೆ ಮಾಡಿ ಬದುಕುವ ಜಾತಿ ಇದು. ಪ್ರತಿ ದಿನ ಅವರು ಅಪಾಯಗಳನ್ನು ಎದುರುಗೊಳ್ಳುವುದು ಸಹಜವೇ. ಎಲ್ಲರಂತೆಯೇ ಇವರೂ ಸ್ಪರ್ಧೆಯೆಂದರೆ ಇಷ್ಟ. ಪಂದ್ಯಕ್ಕಾಗಿ ಪ್ರಾಣ ಪಣವಿಡಲು ಸೈ ಎನ್ನುವ ಜನ. ಆ ಪಂದ್ಯಕ್ಕಾಗಿ ಒಂದಷ್ಟು ಹಣ ಕೂಡಿಸಿದರೆ ತಾವಿಲ್ಲಿಂದ ತಪ್ಪಿಸಿಕೊಳ್ಳಬಹುದು.

# 9

ನಡು ನೆತ್ತಿಯ ಮೇಲಿದ್ದ ಸೂರ್ಯ

ಆ ಬಿಸಿಲಲ್ಲೇ ಮಹೇಶ, ಇವಾನ್‌ರನ್ನು ತಮ್ಮ ನಾಯಕನ ಬಳಿಗೆ ಎಳೆದೊಯ್ದರು ಜೂಕಾ ವಾಸಿಗಳು.

ತನ್ನ ಗುಡಿಸಲ ಮುಂದೆ ಹಗ್ಗದ ಮಂಚದ ಮೇಲೆ ಕುಳಿತಿದ್ದ ನಾಯಕ. ಹತ್ತು ಹನ್ನೆರಡು ದೃಢಕಾಯರು ಅವನ ಹಿಂದೆ ಗೋಡೆಗೆ ಗೊರಗಿ ನಿಂತಿದ್ದರು

"ನೀನು ಹೇಳಿದಂತೆಯೇ ನಿಮ್ಮ ಯಜಮಾನನ ಹಡಗು ಮುಳುಗಿ ಇತ್ತ ಕಡೆಗೆ ಬಂದಿದ್ದರೆ....ಅವನು ಶ್ರೀಮಂತನೆಂದಾಯಿತು ಹಾಗಲ್ಲದೇ ಇಲ್ಲಿಗೆ ಬಂದದ್ದಕ್ಕೆ ನಮ್ಮ ಪೋಷಣೆಗಳಿಗೆ ಪ್ರಾಣ ಸಮೇತ ವಾಪಸ್ಸಾಗಲು ಕೈ ತುಂಬಾ ಹಣ ಕೊಡಬೇಕಾಗುತ್ತದೆ" ನೇರ ವಿಷಯಕ್ಕೆ ಬಂದ ನಾಯಕ.

"ದಾರಿ ತಪ್ಪಿ ಆಕಸ್ಮಿಕವಾಗಿ ಬಂದವರ ಕಷ್ಟ ಸುಖ ವಿಚಾರಿಸದೆ ಹಣ ವಸೂಲು ಮಾಡುವಿರಾ ?" ಆಶ್ಚರ್ಯದೊಡನೆ ಕೇಳಿದ ಮಹೇಶ.

ಮೇಲಕ್ಕಷ್ಟೇ ಆ ಆಶ್ಚರ್ಯ ? ಹೀಗಾಗಬಹುದೆಂದು ನಾಯಕನನ್ನು ಕಂಡಾಗಿನಿಂದ ಅಂದುಕೊಳ್ಳುತ್ತಲೇ ಇದ್ದ ಅವನು. ಅದಕ್ಕೇನೂ ಮಾಡುವಂತಿರಲಿಲ್ಲ ಕೂಡ. ತನಗೆ ಹೊರ ಪ್ರಪಂಚಕ್ಕೆ ಸಂದೇಶ ಕಳಿಸಲು ಸಾಧ್ಯವಾದರೆ ಹಣ ತರಿಸುವುದೇನೂ ಕಷ್ಟವಿಲ್ಲ. ಆದರದಕ್ಕೆ ತಾವ್ಯಾರೆಂದು ತಿಳಿಸಬೇಕು. ಐಡೆಂಟಿಟಿ ಹೊರಗಿಟ್ಟರೆ ಎದುರಾಗುವ ಅನಾಹುತಗಳನ್ನು ಲೆಕ್ಕ ಹಾಕಲಾಗದು. ಬೈ ಚಾನ್ಸ್ ಆ ರಿಸ್ಕ್ ತೆಗೆದು ಕೊಂಡರೂ ಸಿಕ್ಕಾಪಟ್ಟೆ ಟೈಂ ವೇಸ್ಟ್ ಬೇರೆ ಆಗುತ್ತದೆ. ವಾರಗಳೇ ಹಿಡಿದರೂ ಆಶ್ಚರ್ಯವಿಲ್ಲ. ಅಲ್ಲಿಯವರೆಗೆ ಸಿಲ್ವರ್ ಕಿಂಗ್ ಅಸಹಾಯಕ ಪರಿಸ್ಥಿತಿಯಲ್ಲಿ ಕಾಲ ಕಳೆಯಬೇಕಾಗುತ್ತದೆ.

"ಜೂಕಾ ಐಲೆಂಡ್ ಬಹಳ ಬಡ ದ್ವೀಪ. ಶ್ರೀಮಂತರು ಬಡವರಿಗೆ ಸಹಾಯ ಮಾಡಬೇಕು" ತತ್ವಜ್ಞಾನ ಹೇಳತೊಡಗಿದ ನಾಯಕ.

"ನನ್ನ ಯಜಮಾನ ಹಿಂದೊಮ್ಮೆ ಶ್ರೀಮಂತನೇ. ಈಗ ಮೈಮೇಲಿರುವ ಬಟ್ಟೆಯ ವಿನಹ ಇನ್ನೇನೂ ಇಲ್ಲ. ಎಲ್ಲಾ ಸಮುದ್ರದಲ್ಲಿ ಮುಳುಗಿ ಹೋಯಿತು...." ಎಂದು ಜೇಬಿನಿಂದ ಡಬ್ಬಿಯಲ್ಲಿ ಖರ್ಚಾಗಿ ಉಳಿದಿದ್ದ ಹಣ ಹೊರಕ್ಕೆ ತೆಗೆದ ಮಹೇಶ.

ಇದ್ದ ಒಟ್ಟು ನಾಲ್ಕು ಸಾವಿರದಲ್ಲಿ....ಏನನ್ನು ಉಳಿಸಿಕೊಳ್ಳದೆ ಎಲ್ಲವನ್ನು ಕೊಟ್ಟು, "ಇಷ್ಟನ್ನು ತೆಗೆದುಕೊಂಡು ನಮ್ಮನ್ನು ಬಿಟ್ಟುಬಿಡಿ" ಅಂದ.

"ನೀನು ಕೊಡುವುದೇನು? ನಾನೇ ತೆಗೆದುಕೊಂಡರೆ ಅಡ್ಡ ಬರುವವರು ಯಾರಿದ್ದಾರೆ ?" ಕ್ಯಾಕರಿಸಿ ಉಗಿಯುತ್ತಾ ಕೇಳಿದ ನಾಯಕ.

ಆ ಮಾತು ನಿಜವೆಂಬಂತೆ ತಲೆಯಾಡಿಸಿದರು ಅವನ ಅನುಚರರು.

ತಾನು ಆ ಮಾತನ್ನು ಒಪ್ಪಿಕೊಂಡ ಮಹೇಶ. "ಈ ದ್ವೀಪದಲ್ಲಿರುವ ಎಲ್ಲರೂ ನಿನ್ನವರೇ. ಆಯುಧಗಳಿಲ್ಲದೆ ಅನ್ನಾಹಾರಗಳಿಲ್ಲದೆ ಸೊರಗಿ ಹೋಗಿರುವವರು ನಾವು. ಮೇಲೆ ಬಿದ್ದು ಕಿತ್ತುಕೊಂಡರೆ ಏನು ಮಾಡಲಾಗುತ್ತದೆ ನಮ್ಮಿಂದ. ನಿಮ್ಮ ಶೌರ್ಯಕ್ಕೆ ತಲೆ ಬಾಗಿಸಲೇ ಬೇಕಾಗುತ್ತದೆ"

"ಅಂದರೆ ?"

"ಅಂದ....ರೆ ನೀವು ಹೇಡಿಗಳನ್ನುತ್ತೇವೆ. ಒಬ್ಬೊಬ್ಬನೆ ಬಂದು ನನ್ನ ಕೈನಿಂದ ಈ ಹಣ ಕಸಿದುಕೊಳ್ಳಿ ನೋಡೋಣ...." ಸವಾಲೆಸೆದ ಮಹೇಶ.

"ಅಂತಹ ಧೀರನೇ ನೀನು ?"

"ಧೀರನೋ ಅಲ್ಲವೋ ರಂಗಕ್ಕಿಳಿದ್ದರೆ ತಿಳಿದೀತು....ನಿನ್ನವರ್ಯಾರೇ ಆಗಿರಲ್ಲಿ ನನ್ನನ್ನು ಕುಸ್ತಿಯಲ್ಲೊ, ಬಾಕ್ಸಿಂಗ್‌ನಲ್ಲೇ ಸೋಲಿಸಿದರೆ ಈ ಹಣ ಫ್ರೀಯಾಗಿ ಕೊಟ್ಟುಬಿಡುತ್ತೇನೆ" ತೊಡೆ ತಟ್ಟುತ್ತಾ ಹೇಳಿದ ಮಹೇಶ.

ಸುತ್ತಲೂ ನಿಂತಿದ್ದವರಲ್ಲಿ ಕಲರವ ಶುರುವಾಯಿತು. ಏನೇನೋ

ಕೂಗಾಡತೊಡಗಿದರು. ಅವರೆಲ್ಲರೂ ಸುಮ್ಮನಾಗುವಂತೆ ಕೈಯೆತ್ತಿ ಸನ್ನೆ ಮಾಡಿದ ನಾಯಕ.

“ನನ್ನ ಅನುಚರರು ಆ ಪದ್ಧತಿಗಳನ್ನರಿಯದ ಅಮಾಯಕರು. ತಮಾಷೆಗೆಂದು ಆಡುವ ಆಟಗಳು ನಮಗೆ ಗೊತ್ತಿಲ್ಲ. ನಿಜವಾಗಿಯೂ ಗಂಡಸಾದರೆ ವೀರನಂತೆ ಕತ್ತಿ ಹಿಡಿದು ನಿಲ್ಲು. ನಿಮ್ಮ ಡರ್ಬಿ ಜಾತಿ ಖಡ್ಗ ಯುದ್ಧಕ್ಕೆ ಹೆಸರು ವಾಸಿಯಲ್ಲವೇ ?” ಕೇಳಿದ.

ಹಲವಾರು ಯೋಚನೆಗಳ ಬೀಡಾಯಿತು ಮಹೇಶನ ಮನ ನಿಜಕ್ಕೂ ಒಳ್ಳೆಯ ಸ್ವೋರ್ಡ್ ಫೈಟರ್ಸ್ ಡರ್ಬಿ ಜನ. ಈಗ ಸಂದೇಹ ಪ್ರದರ್ಶಿಸಿದರೆ ಪ್ರಾಣ ತೆಗೆದುಬಿಡುತ್ತಾರಷ್ಟೇ ಇವರು. ಮುಖದ ಮೇಲೆ ಯಾವ ಭಾವ ತೋರದೆ ತನ್ನ ಒಪ್ಪಿಗೆ ಸೂಚಿಸಿದ. “ನನ್ನೊಡನೆ ಸ್ಪರ್ಧಿಸುವವನ ಆಯ್ಕೆ ಮಾಡಿ ನಾನೇ ಗೆಲ್ಲುವವನು....” ಎಂದ ಆತ್ಮ ವಿಶ್ವಾಸದ ಧ್ವನಿಯೊಡನೆ.

“ಮೊದಲೇಟು ತಿಂದವನು ಸೋತಂತೆ !” ಮತ್ತೊಂದು ಕಂಡೀಷನ್ ಹಾಕಿದ ನಾಯಕ.

ನಡು ಬಗ್ಗಿಸಿ ಬೋ ಮಾಡುತ್ತಾ ಅದೂ ಒಪ್ಪಿಕೊಂಡ ಮಹೇಶ. ಪೂರ್ತಿ ಮುಳುಗಿದ ಮೇಲೆ ಚಳಿಯೇನು, ಗಾಳಿಯೇನು ?

ಸ್ಪರ್ಧೆ ಸಂಜೆಗೆ ನಡೆಯುತ್ತದೆಂದು ಪ್ರಕಟಗೊಂಡಿತು.

ಗುಡಿಸಿಲಲ್ಲಿ ಸಂಪೂರ್ಣ ವಿಶ್ರಾಂತಿ ತೆಗೆದುಕೊಂಡ ಮಹೇಶನನ್ನು ಮಾತಾಡಿಸಿ ಡಿಸ್ಟರ್ಬ್ ಮಾಡಲಿಲ್ಲ ಇವಾನ್.

ಬೀಚ್‌ಗೂ, ಗ್ರಾಮಕ್ಕೂ ಮಧ್ಯದಲ್ಲಿ ನೂರು ಗಜಗಳಷ್ಟು ಖಾಲಿ ಜಾಗದಲ್ಲಿ ತುಸು ಹಸಿರು ಬೆಳೆದಿತ್ತು. ಸ್ಪರ್ಧೆ ಅಲ್ಲೇ ನಡೆಯುವುದೆಂದು ನಿಶ್ಚಯಗೊಂಡಿದ್ದ ಅಲ್ಲೇ ಸ್ವೋರ್ಡ್ ಸೆಲೆಕ್ಷನ್ ನಡೆಯಿತು.

ಎತ್ತರವಾದ ವೇದಿಕೆಯಂತಿದ್ದ ಬಂಡೆಗಲ್ಲ ಮೇಲೆ ಕುಳಿತ ನಾಯಕ. ಸುತ್ತಲೂ ನಿಂತರು ಜೂಕಾ ಪೌರರು.

ಖಡ್ಗವನ್ನಿಡಿದು ಅಖಾಡಾದ ಒಂದು ಮೂಲೆಯಲ್ಲಿ ಸಿದ್ಧನಾಗಿ ನಿಂತ ಮಹೇಶ. ಮೈಮೇಲೆ ಪ್ಯಾಂಟ್ ಮಾತ್ರವಿತ್ತು. ಪೇಟಾ ಹುಬ್ಬುಗಳ ವರೆಗೆ ಸುತ್ತಿದ್ದ.

"ಮಹೇಶ್....ಸೋತರೂ ಚಿಂತೆಯಿಲ್ಲ. ಖಡ್ಗದೇವಿಗೆ ಮಾತ್ರ ಸಿಗಬೇಡ !" ಹಿಂದಿನಿಂದ ಎಚ್ಚರಿಸಿದ ಇವಾನ್.

ನಗುತ್ತಾ ನಿಂತ ಮಹೇಶನೆದುರಿಗೆ ಹತ್ತಡಿಗಳಷ್ಟು ದೂರದಲ್ಲಿ ಬಂದು ನಿಂತ ಪ್ರತ್ಯರ್ಥಿ.

ಬಹಳ ಹೊತ್ತು ಫೈಟ್ ಮಾಡುವ ಇರಾದೆಯೊಡನಿರಲಿಲ್ಲ ಮಹೇಶ. ಮೊದಲು ತನ್ನ ಜೇಬಿನಲ್ಲಿದ್ದ ನೋಟುಗಳನ್ನು ತೆಗೆದು ನಾಯಕನಿಗೆ ಕೊಟ್ಟ. ಕೈಗೆ ಹಾಕಿಕೊಂಡಿದ್ದ ಬೆಳ್ಳಿಯ ಕಡಗಗಳನ್ನು ತೆಗೆದು ಇನ್ನೊಂದು ಕೈನಲ್ಲಿಡಿದುಕೊಂಡ ನಾಯಕ.

"ಛೀ ಛೀ....ಎರಡೇ ಕಡಗ ಸಾಕು !" ಅಂದ ಮಹೇಶ.

ಮೊದಲ ಬಾರಿಗೆ ನಕ್ಕ ನಾಯಕ. ಕಣ್ಣುಗಳು ಕಿರಿದಾದವು. "ಕಡಗಗಳನ್ನು ಸೋಲುವ ಭಯವೇನೂ ಇಲ್ಲ ಬಿಡು." ಅಂದ.

ಅವನು ಸನ್ನೆ ಮಾಡಿದೊಡನೆ ಶುರುವಾಯಿತು ಫೈಟಿಂಗ್.

ಪಿನ್ ಡ್ರಾಪ್ ಸೈಲೆನ್ಸ್ ಆವರಿಸಿತು ಆ ಪ್ರದೇಶದಲ್ಲಿ.

ಐದು ನಿಮಿಷ ಬೇಕೆಂದೇ ಪ್ರತ್ಯರ್ಥಿಯ ಖಡ್ಗಕ್ಕೆ ಸಿಗದೆ ಅಂಕಣದ ಸುತ್ತಲೂ ಓಡಾಡಿಸಿದ ಮಹೇಶ ಚಟಕ್ಕನೆ ನಿಂತ.

ಪ್ರತ್ಯರ್ಥಿ ತನ್ನ ಖಡ್ಗ ಬೀಸಿದೊಡನೆ ದೇಹವನ್ನು ಬಿಲ್ಲಿನಂತೆ ಕೆಳಗೆ ಬಾಗಿಸಿದ. ಅವನ ತಲೆಯ ಮೇಲೆ ಬಿರುಗಾಳಿಯನ್ನೂ ತಡವಿಕೊಂಡು ಹೋಯಿತು ಪ್ರತ್ಯರ್ಥಿಯ ಖಡ್ಗ. ಬ್ಯಾಲೆನ್ಸ್ ಕಳೆದುಕೊಂಡ ಅವನು ಮತ್ತೆ ಸರಿಯಾಗಿ ನಿಲ್ಲುವಷ್ಟರಲ್ಲಿ ಎದೆಯ ಮೇಲೆ ಇಂಚಿನಷ್ಟು ಗೀಟೆಳೆದು ಹಿಂದೆ ಬಂತು ಮಹೇಶನ ಖಡ್ಗ. ಛಿಲ್ಲನೆ ರಕ್ತ ಚಿಮ್ಮಿತು.

ಕಿಟಾರನೆ ಕಿರುಚಿ ಖಡ್ಗವನ್ನು ಬಿಟ್ಟು ಗಾಯಗೊಂಡ ಭಾಗಕ್ಕೆ ಕೈ ಒತ್ತಿಕೊಂಡ ಪ್ರತ್ಯರ್ಥಿ.

ದಿಗ್ಭ್ರಾಂತರಾಗಿ ನಿಂತರೂ ಜೂಜಾಟ ಜನರೆಲ್ಲಾ. ತಮ್ಮ ಗುಂಪಿನಲ್ಲೇ ಸ್ವೋರ್ಡ್ ಫೈಟಿಂಗ್‌ನಲ್ಲಿ ಪ್ರಚಂಡನೆನಿಸಿಕೊಂಡವನನ್ನು ಎಷ್ಟು ಸುಲಭವಾಗಿ ಸೋಲಿಸಿಬಿಟ್ಟ ಇವನು ಎಂಬ ಶಾಕ್‌ನಿಂದಲೇ ಸ್ತಬ್ಧರಾಗಿ ಬಿಟ್ಟಿದ್ದರೆಲ್ಲಾ. ಮನಸ್ಸು ಮಾಡಿದ್ದರೆ ಅವನನ್ನು ಕೊಲ್ಲಬಹುದಿತ್ತು. ಆದರೂ ಆ ಕೆಲಸ ಮಾಡದೆ ದೊಡ್ಡತನ ಪ್ರದರ್ಶಿಸಿದ್ದ ಈ ಅಪರಿಚಿತ.

ಆ ವಿಷಯ ನಾಯಕನೂ ಗಮನಿಸಿದ್ದ !

ಸೈಲೆಂಟಾಗಿದ್ದ ಜನರ ಮುಂದೆ ನಡೆದು ಬಂದ ಮಹೇಶನ ಕೈಗೆ ನೋಟುಗಳು ಹಾಗೂ ಕಡಗ ಅಂಟಿಸಿದ ನಾಯಕ. ನೋಟುಗಳನ್ನು ನಾಯಕನ ಕೈಗೆ ಹಿಂದಿರುಗಿಸಿ ಕಡಗಗಳನ್ನು ಇನ್ನೊಂದು ಕೈಗೆ ತೊಡಿಸಿದ ಮಹೇಶ.

"ಇವೆಲ್ಲಾ ನನಗಿಂತಾ ನಿನಗೆ ಹೆಚ್ಚು ಉಪಯೋಗಕ್ಕೆ ಬರುತ್ತದೆ ನಾಯಕಾ. ನನಗೇನಿದ್ದರೂ ಒಂದು ದೋಣಿ ಹಾಗೂ ಆಹಾರ ಪದಾರ್ಥ ಗಳಷ್ಟೇ ಈಗ ಬೇಕಾಗಿರುವುದು !" ಅಂದ ಗಂಭೀರ ಧ್ವನಿಯಲ್ಲಿ.

ಎರಡು ಕ್ಷಣ ಮೌನಸಾಗರವಾಯಿತು ಆ ಪ್ರದೇಶ. ಮರೂನೇ ಕ್ಷಣ ಅವನ ಬೆನ್ನು ತಟ್ಟಿ ತನ್ನ ಮೆಚ್ಚುಗೆ ವ್ಯಕ್ತಪಡಿಸಿದ ನಾಯಕ. ತಕ್ಷಣ ಮಿಕ್ಕವರೆಲ್ಲಾ ಜೋರಾಗಿ ಚಪ್ಪಾಳೆ ತಟ್ಟತೊಡಗಿದರು.

ಆಗ ಬಿಗಿ ಹಿಡಿದಿದ್ದ ಉಸಿರನ್ನು ನಿಧಾನವಾಗಿ ಹೊರಚೆಲ್ಲಿದ ಇವಾನ್.

ಅಂದೆಲ್ಲಾ ಅವರಿಗಲ್ಲಿ ರಾಯಲ್ ಟ್ರೀಟ್‌ಮೆಂಟ್. ಯಾವ ದೋಣಿ ಯಿಂದ ಕದ್ದು ತಂದಿದ್ದೋ....ನೆಲದಲ್ಲಿ ಹುಗಿದಿಟ್ಟಿದ್ದ ವಿಸ್ಕಿ ಬಾಟಲ್ ಹೊರತೆಗೆದು ಮಹೇಶ, ಇವಾನ್‌ರೊಡಗೂಡಿ ಆ ಬಾಟಲ್ ಖಾಲಿಯಾಗಲು ಸಹಕರಿಸಿದ ನಾಯಕ. ಒಣಕಲು ರೊಟ್ಟಿಯು ಇದಲು ರುಚಿಕರವಾದ ಊಟ. ಅರ್ಧರಾತ್ರಿಯವರೆಗೆ ಅವರನ್ನು ತನ್ನೊಡನೆಯೇ ಇರಿಸಿಕೊಂಡು ನಂತರ ಗುಡಿಸಿಲಿಗೆ ಕಳಸಿಕೊಟ್ಟ ಬೆಳಗ್ಗೆ ಪ್ರಯಾಣಕ್ಕೆ ಸಿದ್ಧರಾಗುವಂತೆ ತಿಳಿಸಿ.

ಬೆಳಗ್ಗೆ ದೋಣಿಯೊಂದು ಸಿದ್ಧವಾಗಿತ್ತು. ಅವರಿಗೆ ಸಹಾಯಕ್ಕೆಂದು ತನ್ನ ಕಡೆಯ ಇಬ್ಬರನ್ನು ಕಳಿಸಿಕೊಟ್ಟ ನಾಯಕ. ಇಷ್ಟು ಸುಖಾಂತ್ಯ ವಾಗಿ ಈ ಕಠಿಣ ಪರಿಸ್ಥಿತಿಯಿಂದ ಪಾರಾದೇವೆಂದು ಕನಸ್ಸಿನಲ್ಲೂ ಯೋಚಿ ಸಿರಲಿಲ್ಲ ಮಹೇಶ, ಇವಾನ್.

ನಿಧಾನವಾಗಿ ಸೀರಿಗಿಳಿಯಿತು ದೋಣಿ. ಗಾಳಿ ತಗುಲಿದೊಡನೆ ಬಿಚ್ಚಿ ಕೊಂಡಿತು ತೆರೆ. ಕ್ರಮೇಣ ವೇಗ ಹೆಚ್ಚಿಸಿಕೊಳ್ಳತೊಡಗಿತು.

ನಿಧಾನವಾಗಿ ಜೊತೆ ಯುವಕರೊಡನೆ ಮಾತು ಬೆಳೆಸಿ ಬಾಲಿ ಐಲೆಂಡ್ ಬಗ್ಗೆ ಹಲವಾರು ವಿಷಯಗಳನ್ನು ತಿಳಿದುಕೊಂಡ ಮಹೇಶ. ಅಮೂಲ್ಯ ಮಾಹಿತಿಗಳು ಸಿಕ್ಕವವನಿಗೆ ಅವರಿಂದ.

ಕೆಂಪು ಮಂದಾರದಂತೆ ಆಕಾಶದಲ್ಲಿ ಕಾಣಿಸಿಕೊಂಡ ಸೂರ್ಯ. ಮತ್ತೊಮ್ಮೆ ಸಮುದ್ರವೆಲ್ಲಾ ಕೆಂಪು ಕೆಂಪಾಯಿತು.

ಕೆಂಪು ಅಪಾಯದ ಸಂಕೇತ!

ಇಂಡಿಯನ್ ಓಷನ್‌ನಲ್ಲಿರುವ ದ್ವೀಪ ವಾಸಿಗಳಿಗೆ ಮಾತ್ರ ಕೆಂಪು ಸಂತೋಷದ ಚಿಹ್ನೆ. ಆದರೆ ವ್ಯೋಮೇಲಿನ ಕೆಂಪು ಬರೆಗಳು....ಮಧ್ಯಾಹ್ನದ ಬಿಸಿಲಿನ ಬೇಗೆಗೆ ಬಂದವು ಅವು!....ಮಹೇಶನಿಗೆ, ದಿವಾನ್‌ಗೆ ಮಾತ್ರ ಯಾವ ಸಂತೋಷವನ್ನೂ ತರಲಿಲ್ಲ!

# 10

ಜೂಕಾ ದ್ವೀಪದಿಂದ ಹೊರಟ ಎರಡು ದಿನಗಳ ನಂತರ ಸಂಜೆಯಲ್ಲಿ ಬಾಲಿ ಐಲೆಂಡ್ ಸಮೀಪಿಸಿತು ದೋಣಿ.

ಇಪ್ಪತ್ತು ಚದರ ಮೈಲಿಗಳ ವೈಶಾಲ್ಯತೆಯೊಡನಿರುವ ಬಾಲಿ ದ್ವೀಪ ಎಲ್ಲೆಲ್ಲೂ ಹಸಿರೊಡನೆ ಕಂಗೊಳಿಸುತ್ತಿತ್ತು. ಜನಸಂಖ್ಯೆ ಹತ್ತಿರ ಹತ್ತಿರ ನಲವತ್ತು ಸಾವಿರ. ಸಾರಯುಕ್ತ ನೆಲವಾದ ಕಾರಣ ಎತ್ತರವಾದ ಬೆಟ್ಟಗಳಿದ್ದರೂ ಇಳಿಜಾರಲ್ಲಿ ಕಣಿವೆಗಳಲ್ಲಿ ವೃಕ್ಷಸಂಪದ ತುಂಬಿದ್ದು ಹಸಿರು ಹಾಪಣ ಹೊದಿಸಿದಂತೆ ಕಾಣುತ್ತಿತ್ತು. ದೋಣಿಯು ಮೇಲಿನ ತೆರೆಯೇರಿಸಿದ್ದ ಕಂಬಕ್ಕೆ ಒರಗಿ ನಿಂತು ಬೀಚ್‌ನಲ್ಲಿ ಓಡಾಡುತ್ತಿರುವ ಜನರನ್ನು ಗಮನಿಸತೊಡಗಿದ ಮಹೇಶ.

ಹಾರ್ಬರ್‌ನಿಂದ ಫರ್ಲಾಂಗ್ ದೂರದಲ್ಲೇ ನಿಂತಿತು ದೋಣಿ. ತಮಗೆ ದ್ವೀಪದಲ್ಲಿ ಕಾಲಿಡಲು ಅನುಮತಿಯಿಲ್ಲವೆಂದು ತಿಳಿಸಿದರೂ ಜೂಕಾ ಯುವಕರು. ಹತ್ತಿರದಲ್ಲಿ ಕಾಣಿಸಿದ ತೆಪ್ಪವೊಂದನ್ನು ಕರೆದು ದಡ ತಲುಪುವ ವ್ಯವಸ್ಥೆ ಮಾಡಿದ ಮಹೇಶ. ಇವಾನ್ ಬಳಿ ಕೇಳಿ ತಲಾ ಸಾವಿರ ರೂಪಾಯಿಗಳ ದರ್ಬಿ ನೋಟುಗಳನ್ನು ಅವರಿಬ್ಬರಿಗೂ ಕೊಟ್ಟು ತೆಪ್ಪ ಹತ್ತಿದ ಮಹೇಶ ಇವಾನ್‌ನೊಡನೆ. ದೋಣಿ ಜೂಕಾ ದ್ವೀಪದ ಕಡೆಗೆ ತಿರುಗಿತು. ತೆಪ್ಪ ತೀರ ತಲುಪಿತು.

ತೆಪ್ಪದ ಓನರ್‌ಗೆ ಮಾತಾಡಿದಂತೆ ಬಾಡಿಗೆ ಕೊಟ್ಟು ರಸ್ತೆಗಿಳಿದರು ಇಬ್ಬರೂ. ಮೈನ್‌ರೋಡ್‌ಗೆ ಹೊಂದಿದಂತೆ ಹಲವಾರು ಗಲ್ಲಿಗಳಿದ್ದವು. ಅಲ್ಲಿರುವ ಎಲ್ಲ ಅಂಗಡಿಗಳಲ್ಲೂ ಜನದಟ್ಟಣೆ. ರಸ್ತೆಗಳಲ್ಲೇ ತಮ್ಮ ಸರಂಜಾಮುಗಳೊಡನೆ ಕುಳಿತಿದ್ದ ಬಾರ್ಬರ್ಸ್ ಮುಂದೆ ಕುಳಿತು ಶೇವ್ ಮಾಡಿಸಿ

ಕೊಂಡರು ಮಹೇಶ, ಇವಾನ್. ರೆಡಿಮೇಡ್ ಕ್ಲಾತ್ ಷಾಪೊಂದರಲ್ಲಿ ಬಟ್ಟೆಗಳನ್ನು ಖರೀದಿಸಿ ಅಲ್ಲೇ ಒಂದೆಡೆ ಡ್ರೆಸ್ ಚೇಂಜ್ ಮಾಡಿಕೊಂಡರು.

'ರಾಣಿ'ಯನ್ನು ಶುಭ್ರವಾಗಿ ಕ್ಲೀನ್ ಮಾಡಿ ಸೊಂಟದ ಬೆಲ್ಟ್‌ನಲ್ಲಿ ರಿಸಿಕೊಂಡಿದ್ದ ಸ್ಪೇರ್ ಕ್ಲಿಪ್. ಅದರ ಒಡಲಿಗೆ ತುಂಬಿ ಹೋಲ್‌ಸ್ಟರ್‌ಗೆ ಸೇರಿಸಿದ ಮಹೇಶ. ಆ ಬೆಲ್ಟ್‌ನಲ್ಲೇ ಒಂದೆಡೆ ಇತ್ತು ಸರ್ಕ್ಯೂಟ್ ಕಾರ್ಡ್. 'ರಾಜ'ನನ್ನು ಒಮ್ಮೆ ಪರಿಶೀಲಿಸಿಕೊಂಡ ಮಹೇಶ. ಮುಂದೆ ಹೆಜ್ಜೆ ಹೆಜ್ಜೆಗೂ ಬೇಕಾಗಬಹುದು ಅವುಗಳ ಸಹಾಯ.

ಟೌನ್‌ನ ಒಂದಂಚಿಗಿದ್ದ ಸಣ್ಣ ಗುಡ್ಡದ ಮೇಲೆ ನಿರ್ಮಿಸಲ್ಪಟ್ಟಿತ್ತು ರಾಯಲ್ ಪ್ಯಾಲೆಸ್. ಅದರ ಸುತ್ತಲೂ ಸುಂದರವಾದ ಹೂದೋಟವಿತ್ತು. ತೋಟವನ್ನು ಬಲವಾದ ಫೆನ್ಸಿಂಗ್ ಸುತ್ತುವರೆದಿತ್ತು.

ಮೈನ್‌ಗೇಟ್ ಬಳಿ ಇಬ್ಬರು ಸೆಂಟ್ರಿಗಳು ಅವರನ್ನು ತಡೆದು ಪ್ರಶ್ನಿಸಿದರು. ತಮಗೆ ಕಿಂಗ್ ಪರಿಚಯವಿಲ್ಲವೆಂದು, ಆದರೆ ಅವರನ್ನು ಅರ್ಜೆಂಟಾಗಿ ಭೇಟಿಯಾಗಬೇಕೆಂದೂ ತಿಳಿಸಿದ ಮಹೇಶ. ತಡವಾಗಬಹುದೆಂದುಕೊಂಡಿದ್ದ ಮಹೇಶ ಒಬ್ಬ ಸೆಂಟ್ರಿ ತನ್ನೊಡನೆ ಬರುವಂತೆ ಅವರಿಗೆ ತಿಳಿಸಿ ಮುನ್ನಡೆದಾಗ ನಿಜಕ್ಕೂ ಆಶ್ಚರ್ಯವಾಗಿತ್ತು ಮಹೇಶನಿಗೆ.

ಇದು ಈ ದ್ವೀಪ ವಾಸಿಗಳ ಹಾಸ್ಪಿಟಾಲಿಟಿಯೇ ? ಅಥವ ಕಿಂಗ್‌ಗೆ ತಾವು ಬರಬಹುದೆಂಬ ಮುನ್ಸೂಚನೆಯಿತ್ತೇ ?

ಮಾರ್ಬಲ್‌ನಿಂದ ಕಟ್ಟಿರುವಂತೆಯೇ ಬಿಳಿಯ ಕಲ್ಲುಗಳಿಂದ ನಿರ್ಮಾಣಗೊಂಡಿದ್ದ ಆ ಪ್ಯಾಲೆಸ್ ಮನಮೋಹಕವಾಗಿತ್ತು. ಸುಂದರವಾಗಿ ಅಲಂಕರಿಸಿರುವ ವಿಸಿಟರ್ಸ್ ರೂಮ್‌ನಲ್ಲಿ ಅವರನ್ನು ಕೂರಿಸಿ ಕಿಂಗ್‌ಗೆ ವಿಷಯ ತಿಳಿಸಿದ ಆ ಸೆಂಟ್ರಿ.

ಒಂದು ಕಡೆ ತೂಗಾಡುತ್ತಿದ್ದ ಸಿಲ್ಕ್ ಕರ್ಟನ್ಸ್ ಪಕ್ಕಕ್ಕೆ ಸರಿಸಿ ತೆಳ್ಳಗೆ ಸೌಮ್ಯ ಮುಖಭಾವದ ವ್ಯಕ್ತಿಯೊಬ್ಬ ಕೊಠಡಿಯಲ್ಲಿ ಕಾಲಿರಿಸಿದ. ಬಿಳಿಯ ಪಂಚೆ, ಹಸಿರು ಜುಬ್ಬಾ, ಬಿಳಿಯ ಪೇಟಾ ಧರಿಸಿದ್ದನಾತ. ಅವನ ಆ ಸಿಂಪ್ಲಿಸಿಟಿಯೇ ಒಂದು ರೀತಿಯ ಘನತೆಯನ್ನು ಪ್ರದರ್ಶಿಸುತ್ತಿತ್ತು. ಸಂಪೂರ್ಣ ಬೆಳ್ಳಗಾಗಿದ್ದ ಮೀಸೆಯನ್ನು ಚೂಪಾಗಿ ಹುರಿಗೊಳಿಸಲಾಗಿತ್ತು.

ಕುತ್ತಿಗೆಯನ್ನು ಒಂದು ಮುತ್ತಿನ ಹಾರ ಅಲಂಕರಿಸಿತ್ತು. ಬಲಗೈನ ತೋರು ಬೆರಳಲ್ಲೊಂದು ಕೆಂಪು ಹರಳಿನ ಉಂಗುರ.

ಥಿಗ್ಗನೆದ್ದು ನಿಂತರು ಮಹೇಶ, ಇವಾನ್ ಆ ವ್ಯಕ್ತಿಯನ್ನು ಕಂಡೊಡನೆ.

"ನನ್ನನ್ನು ನೋಡಲೆಂದು ಬಂದಿರಾ ?" ಪ್ರಶ್ನಿಸಿದ ಕಿಂಗ್.

"ಎಸ್ ಇವರ್ ಹೈನೆಸ್ !" ಅನ್ನುತ್ತಾ ಸುತ್ತಲೂ ನೋಡಿದ ಮಹೇಶ, "ನಾವು ಮಾತಾಡಲಿರುವ ವಿಷಯ ಇನ್ನೊಂದು ಕಿವಿಗೆ ಬೀಳವಂತಿಲ್ಲ !"

ದೆನ್ ಕಮ್ ವಿತ್ ಮಿ !" ಅನ್ನುತ್ತಾ ಬೇರೊಂದು ದಾರಿಯಿಂದ ಕೊಠಡಿಯೊಂದರೊಳಕ್ಕೆ ಕರೆದೊಯ್ದ ಕಿಂಗ್.

ಮೊದಲ ಕೊಠಡಿಗಿಂತಾ ಭವ್ಯವಾಗಿ ಅಲಂಕರಿಸಲ್ಪಟ್ಟಿತ್ತು ಆ ಕೊಠಡಿ. ಕುಷನ್ ಚೇರ್ಸ್ ಕೊಠಡಿಯ ಮಧ್ಯದಲ್ಲಿ ವೃತ್ತಾಕಾರವಾಗಿ ಹಾಕಲ್ಪಟ್ಟಿದ್ದವು.

"ಇವರ್ ಹೈನೇಸ್ !" ಮೈ ನೇಮ್ ಈಸ್ ಮಹೇಶ. ದಿಸೀಸ್ ಡಾಕ್ಟರ್ ಇವಾನ್ ಫ್ರಂ ರಷ್ಯಾ. ಇಬ್ಬರೂ ದರ್ಬಿಯಿಂದ ಬರುತ್ತಿದ್ದೇವೆ. ಲೆಫ್ಟಿನೆಂಟ್ ಸ್ವರೂಪ್ ಎಂಬ ಇಂಡಿಯನ್ ನೇವಲ್ ಆಫೀಸರ್ ಇಲ್ಲಿದ್ದಾನೆಂದು ತಿಳಿಯಿತು. ಆತನ ಭೇಟಿಯಾಗಬೇಕೆಂದು ನಮ್ಮ ಆಕಾಂಕ್ಷೆ. ಕುರ್ಚಿಯಲ್ಲಿ ಕುಳಿತೊಡನೆ ತಾವು ಬಂದ ಕೆಲಸ ವಿವರಿಸಿದ ಮಹೇಶ.

"ಲೆಫ್ಟಿನೆಂಟ್ ಸ್ವರೂಪ್ ಇಲ್ಲಿದ್ದಾನೆಂಬ ಗ್ಯಾರಂಟಿಯೇನು ? ತನಗೇನೆಗೊತ್ತಿದೆಯೆಂದು ಆ ವಿಷಯ ನನ್ನನ್ನು ವಿಚಾರಿಸುತ್ತಿದ್ದೀರಿ ?" ಮೀಸೆಯ ಮೇಲೆ ಕೈಯಾಡಿಸುತ್ತಾ ಕೇಳಿದ ಕಿಂಗ್.

"ನಿಮ್ಮ ಮೂಲಕ ಲೆಫ್ಟಿನೆಂಟ್ ಭೇಟಿಯಾಗಬಹುದೆಂದು ನನಗೆ ಆರ್ಡರ್ ಮಾಡಲಾಗಿದೆ" ಅಂದ ಮಹೇಶ.

"ಎಲ್ಲಿಂದ ಬಂದ ಆರ್ಡರ್ಸ್ ಅವು ?"

"ದರ್ಬಿಯಲ್ಲಿರುವ ನಮ್ಮ ಎಂಬೆಸಿಯಿಂದ"

ಸಾಲೋಚನೆಯೊಡನೆ ತಲೆಯಾಡಿಸಿದ ಕಿಂಗ್. 'ಹೀಗೆ ಏಕ್‌ದಂ

ನನ್ನ ಮೇಲೆ ಪ್ರೆಷರ್ ಬಿದ್ದರೆ ನನ್ನಿಂದ ಉತ್ತರಿಸಲಾಗದು. ಭಾರತೀಯರು ಸಾಮಾನ್ಯವಾಗಿ ಇಷ್ಟು ದೂರ ಬರುವುದಿಲ್ಲ. ಸದ್ಯಕ್ಕೆ ಒಬ್ಬನೇ ಒಬ್ಬ ಇಂಡಿಯನ್ ನನ್ನ ದೇಶದಲ್ಲಿದ್ದಾನೆ. ಅವನು ನನ್ನ ಮಕ್ಕಳಿಗೆ ಟ್ಯೂಟರ್" ಅನ್ನುತ್ತಾ ಅವರ ಕಡೆಗೆ ನೋಡಿದ, "ಎನಿವೇ....ಬಹಳ ದೂರದಿಂದ ಬಂದಿದ್ದೀರಿ. ವಿಶ್ರಾಂತಿ ತೆಗೆದುಕೊಳ್ಳಿ. ಆಮೇಲೆ ಮಾತಾಡಿಕೊಳ್ಳೋಣ." ಹೇಳಿ. ಎದ್ದು ನಿಂತ.

"ಇದೇನು ಹೀಗೆ ಹೇಳುತ್ತಿದ್ದಾನಿವ ?"

ತಮಗೆಂದು ಅಲಾಟ್ ಮಾಡಿದ ಗೆಸ್ಟ್‌ಹೌಸ್‌ನ ಕೊಠಡಿಯಲ್ಲಿ ಮೃದು ಮೆತ್ತೆಯ ಮೇಲೆ ಮೈ ವಾಲಿಸಿ ಕೇಳಿದ ಇವಾನ್.

ಒಂದು ಮೂಲೆಯಲ್ಲಿ ನಿಲ್ಲಿಸಿದ್ದ ಬಂಗಾರದ ಸಿಂಹವನ್ನೇ ನಿಟ್ಟಿಸಿ ಮುಗುಳ್ನಕ್ಕ ಮಹೇಶ. "ಐ ಲೈಕ್ ಹಿಸ್ ಹೈನೆಸ್ ವೆರಿಮಚ್ ಡಿಯರ್ ಫ್ರೆಂಡ್ ! ಬಹಳ ಎಚ್ಚರಿಕೆಯ ವ್ಯಕ್ತಿ. ನಮಗಾಗಿ ಕಾಯುತ್ತಿರುವುದೇನೋ ನಿಜ. ನಾವು ಸರಿಯಾದ ಪಾರ್ಟಿ ಹೌದೋ ಅಲ್ಲವೋ ಎಂದು ಪರೀಕ್ಷಿಸುತ್ತಿದ್ದಾನಷ್ಟೇ" ಅಂದ.

"ಯು ಮೀನ್....ನಮ್ಮ ಬಗ್ಗೆ ಇನ್ವೆಸ್ಟಿಗೇಷನ್ ಮಾಡುತ್ತಾನೆಯೋ ?"

"ಮಾಡದಿರಬಹುದು. ಸ್ವರೂಪ್‌ನೊಡನೆ ಕಲೆತು ಮಾತಾಡಬಹುದು ಅವನ ಬಳಿ ನಮ್ಮನ್ನು ಐಡೆಂಟಿಫೈ ಮಾಡುವ ಸಾಧನಗಳೇನಾದರೂ ಇದ್ದೇ ಇರುತ್ತವೆ." ಹೇಳಿದ ಮಹೇಶ.

ಇಬ್ಬರು ಸರ್ವೆಂಟ್ಸ್ ಬಂದು ಸ್ನಾನಕ್ಕೆ ಕರೆದರು. ಸ್ನಾನ ಮುಗಿಸಿ ಒಂದು ಗಂಟೆ ರೆಸ್ಟ್ ತೆಗೆದುಕೊಂಡ ಮೇಲೆ ಡಿನ್ನರ್‌ಗೆ ಕರೆ ಬಂತು.

ಎಂಟು ಗಂಟೆ ಆಗ.

ಮಹೇಶ, ಇವಾನ್ ಡೈನಿಂಗ್ ರೂಂ ಪ್ರವೇಶಿಸಿದೊಡನೆ ಸಾವಕ ಹೊಡನೆ ಆಹ್ವಾನಿಸಿದ ಕಿಂಗ್. ಅವನ ಪಕ್ಕದಲ್ಲೇ ಸುಂದರ ಯುವತಿಯೊಬ್ಬಳು ಕುಳಿತಿದ್ದಳು.

"ದಿಸೀಸ್ ಮೈ ಡಾಟರ್ ಮಾಯೂರಿ !" ಪರಿಚಯ ಮಾಡಿದ ಕಿಂಗ್.

ವಿನಯದೊಡನೆ ನಮಸ್ಕರಿಸಿದ ಮಹೇಶ. ಕೈಕುಲುಕಿದ ಇವಾನ್.

ಡಿನ್ನರ್ ವೇಳೆ ಮನೋಲ್ಲಾಸವಾಗಿ ಕಳೆಯಿತು. ಸುಮ್ಮನೆ ಮೌನ ಗೌರಿಯಾಗಿರದೆ ಹಾಗೆಂದು ಚೆಲ್ಲಂಚೆಲ್ಲಾಗಿಯೂ ವರ್ತಿಸದೆ ಸಹಜವಾಗಿಯೇ ಸಂಭಾಷಣೆಗಳಲ್ಲಿ ಪಾಲ್ಗೊಂಡು ಚುರುಕು ಮಾತುಗಳಿಂದ ಎಲ್ಲರನ್ನೂ ರಂಜಿಸಿದಳು ಮಯೂರಿ. ಭಾರತೀಯಊಟ, ಬಂದವರ ಗೌರವಾರ್ಥ ಆ ಏರ್ಪಾಟಾಗಿತ್ತು.

"ಸಿನಿಮಾ ಏನಾದರೂ ನೋಡುವಿರಾ ?" ಅಡಿಕೆ ಪುಡಿ ಬಾಯಿಗೆ ಹಾಕಿಕೊಳ್ಳುತ್ತಾ ವಿಚಾರಿಸಿದ ಕಿಂಗ್.

ಡೈನಿಂಗ್ ಹಾಲ್‌ನಿಂದ ಹೊರಬಂದು ಕಾರಿಡಾರ್‌ನಲ್ಲಿ ನಡೆಯುತ್ತಿದ್ದರು ಅವರು.

"ಬೇಡ ಡ್ಯಾಡಿ....ಇದುವರೆಗೆ ನೂರು ಸಾರಿ ನೋಡಿರಬಹುದು ಆ ಫಿಲಂಗಳನ್ನ !" ಪ್ರೊಟೆಸ್ಟ್ ಮಾಡಿದಳು ಮಯೂರಿ.

"ವೆಲ್....ವಾಟ್ ಟು ಡೂ ನೌ !"

"ನಾನು ಗಾರ್ಡನ್ ಒಂದು ರೌಂಡ್ ಹೊಡೆದು ಬರುತ್ತೇನೆ."

ಅದಕ್ಕೆ ಕಿಂಗ್ ಒಪ್ಪಲಿಲ್ಲ. ಕಿರಿದು ನಡೆದ ಚರ್ಚೆಯ ನಂತರ ಇವಾನ್ ಕಿಂಗ್ ಜೊತೆಗೂಡಿ ಸಿನಿಮಾ ನೋಡಲೋದ. ಮಯೂರಿಯೊಡನೆ ಮಹೇಶ ಗಾರ್ಡನ್‌ನೊಳಕ್ಕೆ ಬಂದ.

ಒಂದು ಪೊದೆಯ ಬದಿಗೆ ಹಾಕಿದ್ದ ಸೋಫಾದಲ್ಲಿ ಕೂರುತ್ತಾ ಮಯೂರಿಯನ್ನೇ ನೋಡಿದ ಮಹೇಶ.

ಇಪ್ಪತ್ತೆರಡಿರಬಹುದು ವಯಸ್ಸು. ಅದ್ಭುತ ಶಿಲೆಯಂಥ ಹೊಳೆಯುವ ಸಹಜ ಸೌಂದರ್ಯ ಅವಳದು. ಯೌವ್ವನ ಕಂಗಗಳಂತೂ ಬ್ರಾಸ್‌ನಿಂದ ಇನ್ನೇನು ಹೊರಬಿದ್ದೇವೆಂಬಂತೆ ಕುಲುಕುತ್ತಾ ನೋಡುಗರನ್ನು ಮತ್ತೇರಿಸುತ್ತಿದ್ದವು.

"ಸುಮ್ಮನೆ ಗಾಳಿ ಹವಾ ತೆಗೆದುಕೊಳ್ಳಲೆಂದು ಇಲ್ಲಿಗೆ ನನ್ನನ್ನು ಕರೆತಂದಿಲ್ಲವೆಂದುಕೊಳ್ಳುತ್ತೇನೆ" ಅಂದ ಮಹೇಶ ನೇರ ವಿಷಯಕ್ಕೆ ಬಂದು.

ಮಹೇಶನ ಪಕ್ಕದಲ್ಲಿ ಕುಳಿತು ತಲೆಯಾಡಿಸಿದಳು ಮಯೂರಿ

"ಎಸ್ ಮಿಸ್ಟರ್ ಮಹೇಶ್....ನಿಮ್ಮೊಡನೆ ಕೆಲವು ವಿಷಯಗಳನ್ನು

ಮಾತಾಡಬೇಕೆಂದಿರುವೆ. ಬಹುಶಃ ಹ್ಯಾರಿ ಇದನ್ನು ಹೇಳಲಾರನು" ಅಂದಳು.

ಸಿಗರೇಟ್ ಹಚ್ಚಿಸಿಕೊಂಡ ಮಹೇಶ ಅವಳ ಮುಂದಿನ ಮಾತುಗಳಿಗೆ ಕಿವಿತೆರೆದ.

"ನನ್ನ ಸೋದರ.... ಈ ಸಿಂಹಾಸನದ ವಾರಸುದಾರ. ದರ್ಬಿಯಿಂದ ಹಿಂದಿರುಗುತ್ತಿದ್ದಾಗ ಅರ್ಧ ದಾರಿಯಲ್ಲೇ ಹತ್ಯೆಗೀಡಾದ" ಅಂದಳು ಮಯೂರಿ.

"ಗಾಡ್ ಯಾವಾಗ ?"

"ತಿಂಗಳ ಹಿಂದೆ."

"ಯಾರು ಕೊಲೆ ಮಾಡಿದವರು ?" ಸಿಲ್ವರ್ ಕಿಂಗ್ ಸಮಸ್ಯೆಯ ಮೂಲಕ ಈ ಮರ್ಡರ್ ಆಯಿತೇನೋ ಎಂಬ ಯೋಚನೆ ಮಹೇಶನ ಮನದಲ್ಲಿ ಅಸ್ಪಷ್ಟವಾಗಿ ಮೂಡಿತು.

"ಸರಿಯಾಗಿ ಗೊತ್ತಿಲ್ಲ. ನನಗನ್ನಿಸುವಂತೆ ಇದು ಗೋಲ್ಡನ್ ಗ್ಯಾಂಗ್ ಕೆಲಸವಿರಬಹುದೆನಿಸುತ್ತದೆ. ನಮ್ಮ ತಾತ ಮುತ್ತಾಂದಿರ ಕಾಲದಿಂದಲೂ ಯಾರಾದರೊಬ್ಬರು ಈ ದ್ವೀಪವನ್ನು ವಶಪಡಿಸಿಕೊಳ್ಳುವ ಪ್ರಯತ್ನ ಮಾಡುತ್ತಲೇ ಇದ್ದಾರೆ. ನಮ್ಮ ಸೈನ್ಯ ದೊಡ್ಡದಲ್ಲ. ಆದರೂ ಪ್ರಜೆಗಳಿಗೆ ನಮ್ಮ ಮೇಲೆ ಅಪರಿಮಿತ ವಿಶ್ವಾಸ. ಅದ್ದರಿಂದಲೇ ಅವರೆಲ್ಲರ ಪ್ರಯತ್ನಗಳೂ ವಿಫಲಗೊಂಡವು. ಆದರೆ ಈ ಸಲ ಮಾತ್ರ ನಮಗೆ ಸರಿಯಾದ ಪೆಟ್ಟನ್ನೇ ಕೊಟ್ಟಿದ್ದಾರೆ. ನಮ್ಮ ತಂದೆಗೇನಾದರೂ ಅಪಾಯ ಸಂಭವಿಸುತ್ತದೇನೋ ಎಂಬ ಭೀತಿ ಕಾಡುತ್ತಿದೆ" ಹೇಳಿದಳು ಮಯೂರಿ ಕಂಪಿಸುವ ಧ್ವನಿಯಲ್ಲಿ.

ಅದಕ್ಕೇನೂ ಉತ್ತರಿಸಲಿಲ್ಲ ಮಹೇಶ. ಇವರಿಗೂ ಗೋಲ್ಡನ್ ಗ್ಯಾಂಗ್‌ಗೂ ಬಹಳ ದಿನಗಳಿಂದ ಹೋರಾಟ ನಡೆಯುತ್ತಿದೆಯೆಂಬುದು ಮಾತ್ರ ಅರ್ಥವಾಗಿತ್ತು. ಹಿಡಿದ ಪಟ್ಟನ್ನು ಸುಲಭಕ್ಕೆ ಸಡಲಿಸದು ಗೋಲ್ಡನ್ ಗ್ಯಾಂಗ್. ಪ್ರಜೆಗಳ ಶಕ್ತಿಯೊಡನೆ ನಿಂತಿರುವ ಸ್ವತಂತ್ರ ದೇಶ ಬಾಲಿ ಐಲೆಂಡ್. ಕೊನೆಗೇನಾಗುತ್ತದೋ ? ತಮ್ಮ ವಿಷಯದಲ್ಲೂ

ಶತ್ರುಗಳು ಗೋಲ್ಡನ್ ಗ್ಯಾಂಗ್ ಅನ್ನು ಉಪಯೋಗಿಸಿಕೊಳ್ಳುತ್ತಿರಬಹುದೆಂಬ ಅನುಮಾನ ಶುರುವಾಯಿತು.

ಸ್ವಲ್ಪ ಹೊತ್ತು ಅವರ ನಡುವೆ ಮೌನವಾವರಿಸಿತು. ಕೊನೆಗೆ ಕಿಲ ಕಿಲ ನಗುತ್ತ ಮಹೇಶನ ಭುಜಕ್ಕೆ ರಪ್ಪನೆ ಹೊಡೆದಳು ಮಯೂರಿ.

"ಐಯಾಮ್ ಸಾರಿ....ಅನವಶ್ಯಕವಾಗಿ ನಮ್ಮ ಸಂಕಟಗಳನ್ನು ತಿಳಿಸಿ ನಿಮ್ಮ ಮನಸ್ಸಿಗೆ ನೋವುಂಟು ಮಾಡಿದೆ" ಅಂದಳು.

ಅವಳ ಮಾತುಗಳಿಂದೇನೂ ಹೆಚ್ಚು ನೋವಾಗದಿದ್ದರೂ ಅವಳ ಕೈ ಬಿದ್ದ ಜಾಗದಲ್ಲಿ ಮಾತ್ರ ಚೂರಿಯಿಂದ ಚುಚ್ಚಿದಂತಾಯಿತು. ದೋಣಿಯಿಂದ ಅಲೆಯ ಆಘಾತಕ್ಕೆ ಸಿಕ್ಕಿ ಹಾರಿ ಹೋಗಿ ಬೀಚ್‌ನಲ್ಲೆಲ್ಲೋ ಬಿದ್ದಾಗ ಕಲ್ಲೊಂದು ಚುಚ್ಚಿಕೊಂಡು ಅಲ್ಲಿ ಸಣ್ಣ ರಂಧ್ರ ಕೊರೆದಿತ್ತು. ಆ ಜಾಗಕ್ಕೆ ಸರಿಯಾಗಿ ಹೊಡೆದಿದ್ದಳು ಮಯೂರಿ!

ನೋವನ್ನು ಹಲ್ಲು ಕಚ್ಚಿ ತಡೆ ಹಿಡಿದು ಸುಮ್ಮನೆ ಕುಳಿತ ಮಹೇಶನ ಮುಖ ನೋಡಿ ನಿಶ್ಚಿಂತಳಾದಳು ಮಯೂರಿ.

"ವಾಟ್ ಸರ್....ವಾಟ್ ಹ್ಯಾಪನ್ಡ್?" ಅನ್ನುತ್ತಾ ಭುಜದ ಮೇಲಿಂದ ಕೈ ಸರಿಸಿ ನೋಡಿದಳು.

ಏಟು ಸೋಕಿದೊಡನೆ ಒಣಗಿದಂತೆ ತೋರುತ್ತಿದ್ದ ಚರ್ಮ ಓಪನ್ ಆಗಿ ರಕ್ತ ಒಸರತೊಡಗಿ ಷರ್ಟ್ ಮೇಲೆ ಕೆಂಪು ಬಣ್ಣ ಪ್ರತ್ಯಕ್ಷವಾಗತೊಡಗಿತ್ತು.

"ಐ....ಐಯಾಮ್ ರಿಯಲಿ ಸಾರಿ!" ಅನ್ನುತ್ತಾ ಫಸ್ಟ್ ಏಡ್ ಬಾಕ್ಸ್ ತರಲು ಚಿಗರೆಯಂತೆ ಓಡಿದಳು ಮಯೂರಿ.

# 11

"ಮಹೇಶ್ ಅಂದರೆ ನೀವೇನಾ ?"

"ಹೌದು ! ನೀವು ಲೆಫ್ಟಿನೆಂಟ್ ಸ್ವರೂಪ್ ಅಂದುಕೊಳ್ಳುತ್ತೇನೆ."

ಎದುರಿಗಿದ್ದ ಯುವಕ ಮಹೇಶನ ಮಾತಿಗೆ ಏನೂ ಉತ್ತರವೀಯದೆ ಕುಳಿತುಬಿಟ್ಟ.

"ನಿಮ್ಮೊಡನೆ ಏನಾದರೂ ತಂದಿರುವಿರಾ ?" ಕೇಳಿದ ನಿಮಿಷದ ನಂತರ ಮುಂದಕ್ಕೆ ಬಗ್ಗಿ.

"ಸರ್ಕ್ಯೂಟ್ ಕಾರ್ಡ್ ಮತ್ತು ಡಾಕ್ಟರ್ ಇವಾನ್‌ರನ್ನು ಕರೆತಂದಿದ್ದೇನೆ." ಅನ್ನುತ್ತಾ ಇವಾನ್ ಕಡೆಗೆ ತೋರಿಸಿದ ಮಹೇಶ.

ತೃಪ್ತಿಯೊಡನೆ ನಿಟ್ಟುಸಿರುಗರೆದು ಕುರ್ಚಿಯ ಬೆನ್ನನ್ನೊರಗಿ ಆರಾಮವಾಗಿ ಕುಳಿತ ಯುವಕ.

"ಎಸ್....ಐಯಾಮ್ ಲೆಫ್ಟಿನೆಂಟ್ ಸ್ವರೂಪ್ !" ಅಂದ ಕೊನೆಗೆ. "ನಿಮ್ಮ ಆಗಮನಕ್ಕಾಗಿ ನಾಲ್ಕು ದಿನಗಳಿಂದ ಕಾಯುತ್ತಿದ್ದೇನೆ."

"ಬೇಗ ಬರಬೇಕೆಂದೇ ಪ್ರಯತ್ನಿಸಿದೆವು. ಸರ್ಕ್ಯೂಟ್ ಕಾರ್ಡ್ ಹಾಗೂ ಡಾಕ್ಟರ್ ಇವಾನ್‌ರನ್ನು ನಿಮ್ಮ ಸುಪರ್ದಿಗೊಪ್ಪಿಸುವಂತೆ ನನಗೆ ಆರ್ಡರ್ ಬಂದಿದೆ. ಫ್ರಂ ದಿಸ್ ಮೊಮೆಂಟ್ ಯು ಪ್ಲೀಸ್ ಟೇಕ್ ದಿ ರೆಸ್ಪಾನ್ಸಿಬಿಲಿಟಿ" ಅಂದ ಮಹೇಶ.

"ರೈಟ್ ! ನಾವು ಈ ರಾತ್ರಿಗೇ ಹೊರಡುತ್ತೇವೆ" ಮೇಲೆದ್ದು ನಿಂತ ಸ್ವರೂಪ್.

"ನಾನು ಎಲ್ಲಾ ಅರೇಂಜ್‌ಮೆಂಟ್ಸ್ ಪೂರ್ತಿ ಮಾಡಿದ್ದೇನೆ. ನೀವು ರೆಡಿಯಾಗಿರಿ."

ಒಂದು ಗಂಟೆಯ ನಂತರ ಕಿಂಗ್ ಲೈಬ್ರರಿಯಲ್ಲಿ ಮತ್ತೆ ಭೇಟಿ

ಯಾಗುವುದೆಂದು ತೀರ್ಮಾನವಾಯಿತು. ಮಹೇಶ, ಇವಾನ್ ಎದ್ದು ತಮ್ಮ ಕೊಠಡಿಯ ಕಡೆಗೆ ಹೆಜ್ಜೆ ಹಾಕಿದರು. ಕಿಟಕಿಗಳೊಳಗಿಂದ ಮುಂಜಾವಿನ ಸೂರ್ಯ ಕಿರಣಗಳು ಒಳಗೆ ಪ್ರವೇಶಿಸುತ್ತಿದ್ದವು. ಹೊರಗೆ ಗಾರ್ಡನ್ನಲ್ಲಿ ಏನೋ ಕೋಲಾಹಲ ಕೇಳಿಸಿ ಒಂದು ಕಿಟಕಿಯಿಂದ ಬಗ್ಗಿ ನೋಡಿದ ಮಹೇಶ.

ಗಾರ್ಡನ್‌ನಲ್ಲಿ ಮೂವತ್ತು ಮಂದಿ ಆಯುಧಗಳನ್ನು ಹಿಡಿದ್ದ ವ್ಯಕ್ತಿಗಳು ಕೆಲವರನ್ನು ಸುತ್ತುವರೆದು ಬಲವಂತವಾಗಿ ಬಿಲ್ಡಿಂಗ್‌ನೊಳಕ್ಕೆ ಎಳೆ ತರುತ್ತಿದ್ದರು.

ತಕ್ಷಣ ಲೈಬ್ರರಿಗೆ ಓಟ ಕಿತ್ತ ಮಹೇಶ. ಏನೋ ನಡೆಯಬಾರದ್ದು ನಡೆದಿದೆಯೆಂದು ಅಪಶಕುನ ನುಡಿಯ ತೊಡಗಿತ್ತು ಅವನ ಮನಸ್ಸು. ಸ್ವರೂಪ್ ಹಾಗೂ ಕಿಂಗ್ ಆ ವೇಳೆಗಾಗಲೇ ಲೈಬ್ರರಿಗೆ ಬಂದಿದ್ದರು. ಬಾಗಿಲ ಬಳಿ ಮೆಷಿನ್‌ಗನ್ಸ್ ಹಿಡಿದ ಇಬ್ಬರು ವ್ಯಕ್ತಿಗಳು ನಿಂತಿದ್ದರು.

"ಸಾರ್....ಹೊರಗಿರುವ ಸೆಂಟ್ರಿಗಳು ನಿಮ್ಮವರೇನಾ ?" ಕೇಳಿದ ಮಹೇಶ.

"ಇಲ್ಲ....ಇವರನ್ನು ನಾನಿದುವರೆಗೆ ನೋಡಿಲ್ಲ." ತಲೆ ತಿರುಗಿಸುತ್ತಾ ಉತ್ತರಿಸಿದ ಕಿಂಗ್.

ಅದಕ್ಕೆ ಮೊದಲು ಇಬ್ಬರು ವ್ಯಕ್ತಿಗಳು ಬಂದು ಯಾವುದೇ ಗಲಭೆ ಮಾಡದೆ ಲೈಬ್ರರಿಯಲ್ಲಿರುವಂತೆ ಕಿಂಗ್‌ಗೆ ಆಜ್ಞಾಪಿಸಿ ಹೋದರಂತೆ. ಏನಾದರೂ ತರಲೆ ಮಾಡಲು ಪ್ರಯತ್ನಿಸಿದರೆ ಇಡೀ ಪ್ಯಾಲೆಸ್ ಡೈನಾಮೈಟ್‌ನಿಂದ ಉಡಾಯಿಸಿ ಬಿಡುವುದಾಗಿ ಬೆದರಿಸಿದರಂತೆ.

"ವೆಲ್....ವೆಲ್....ನಾವಿಲ್ಲಿಗೆ ಬಂದ ವಿಷಯ ತಿಳಿದು ಹೋದಂತಿದೆ." ಉದ್ಗರಿಸಿದ ಮಹೇಶ.

"ಹೇಗೆ ?" ಭೀತಿಯೊಡನೆ ಕೇಳಿದ ಸ್ವರೂಪ್.

"ರಾತ್ರಿ ಎಂಬೆಸಿಗೆ ರೇಡಿಯೋ ಮೆಸ್ಸೇಜ್ ಕಳಿಸಿದೆಯಾ ?" ಪ್ರಶ್ನಿಸಿದ ಮಹೇಶ.

"ಕಳಿಸಿದೆ....ನೀವು ಹೊರಟಿರುವಿರೋ ಇಲ್ಲವೋ ಎಂದು ತಿಳಿಯಲು

ಹಾಗೂ ನಿಮ್ಮ ಐಡೆಂಟಿಟಿ ಅರಿಯಲು ಒಂದು ಕೋಡೆಡ್ ಮೆಸ್ಸೇಜ್ ಕಳಿಸಿದೆ." ಅಂದ ಸ್ವರೂಪ್.

ಕೆಂಪಾದವು ಮಹೇಶನ ಕಣ್ಣುಗಳು. ಬಹಳ ಕಷ್ಟಪಟ್ಟು ನಿಗ್ರಹಿಸಿಕೊಂಡ ಅವನ ಕೆನ್ನೆಗೊಂದು ಹಾಕುವ ಬಯಕೆಯನ್ನ.

"ಶತ್ರುಗಳಿಗೆ ನಿನ್ನ ಮೆಸ್ಸೇಜ್‌ನಲ್ಲಿ ಏನಿದೆಯೆಂದು ತಿಳಿದುಕೊಳ್ಳುವ ಅವಶ್ಯಕತೆಯಿಲ್ಲ. ಬಾಲಿ ಐಲೆಂಡ್‌ನಿಂದ ಇಂಡಿಯನ್ ಷಿಪ್ ಹರ್ಬಿ ಸೇರಿದೆಯೆಂದು ತಿಳಿದರೆ ಸಾಕು. ಮಿಕ್ಕ ವಿಷಯಗಳನ್ನು ಊಹಿಸುವಷ್ಟು ಬುದ್ಧಿ ಅವರಿಗಿದೆ. ತಕ್ಷಣ ವಿಮಾನಗಳಲ್ಲಿ ಹೊರಟು ಬಂದಿರುತ್ತಾರೆ" ವಿವರಿಸಿದ ಮಹೇಶ.

"ಡಾಮಿಟ್! ಹೀಗಾಗುತ್ತದೆಂದು ಅಂದುಕೊಳ್ಳಲೇ ಇಲ್ಲ ನಾನು!" ಫ್ರಸ್ಟ್ರೇಷನ್‌ನಿಂದ ಟೇಬಲ್ ಗುದ್ದಿದ ಸ್ವರೂಪ್.

"ಈಗೇನು ಮಾಡುವುದು? ಇವರಿಷ್ಟು ಸಲೀಸಾಗಿ ಪ್ಯಾಲೆಸ್ ನೊಳಕ್ಕೆ ಬರಲು ಹೇಗೆ ಸಾಧ್ಯವಾಯಿತು?" ಆಶ್ಚರ್ಯದೊಡನೆ ಕೇಳಿದ ಕಿಂಗ್.

"ಬಹುಶಃ ಕತ್ತಲಲ್ಲಿ ನಿಮ್ಮ ಏರ್‌ಫೀಲ್ಡ್‌ನಲ್ಲಿಳಿದು ಇಲ್ಲಿಗೆ ಬಂದಿರುತ್ತಾರೆ. ಈ ಸಂಗತಿ ನಿಮ್ಮ ಪ್ರಜೆಗಳಿಗಾಗಲಿ, ಮಿಲಿಟರಿ ಕ್ವಾರ್ಟರ್ಸ್‌ಗಾಗಲಿ ತಿಳಿದಿರಲಾರದು. ಅನಿರೀಕ್ಷಿತವಾಗಿ ಬಂದು ಮೇಲೆರಗಿದ ಕಾರಣ ನಿಮ್ಮ ಪ್ಯಾಲೆಸ್ ಗಾರ್ಡ್‌ಗಳಿಂದ ಯಾವುದೇ ಪ್ರತಿರೋಧ ಬಂದಿಲ್ಲ." ಹೇಳಿದ ಮಹೇಶ.

"ಇದರಿಂದ ಅವರಿಗಾಗುವ ಪ್ರಯೋಜನವೇನು?" ಕೇಳಿದ ಕಿಂಗ್.

"ಅದು ಸ್ಪಷ್ಟವಾಗಿಯೇ ಕಾಣುತ್ತಿದೆ. ಅವಳ ಪ್ರಯತ್ನವೆಲ್ಲಾ ಸಿಲ್ವರ್ ಕಿಂಗ್‌ಗಾಗಿಯೇ. ಅದೆಲ್ಲಿದೆಯೆಂದು ತಿಳಿದರೆ ಅವರಿಲ್ಲಿ ಒಂದು ನಿಮಿಷವೂ ಇರಲಾರರೆಂದೇ ನನ್ನ ಅಭಿಪ್ರಾಯ. ಬಹಳ ದಿನಗಳಿದ್ದರೆ ಪ್ರಜೆಗಳಿಗೆ ಅನುಮಾನ ಬಂದು ಅವರು ತಿರುಗಿ ಬೀಳಬಹುದು. ಆದ್ದರಿಂದ ತಕ್ಷಣ ಅವರು ನಮ್ಮ ಮೇಲೆ ಬಂಹೆರಗುತ್ತಾರೆ. ಅವರಿಗೆ ರಹಸ್ಯ ಮಾಹಿತಿ ತಿಳಿಸಿಬಿಟ್ಟೆವೋ ನಾವು ಉಳಿಯುವುದಂತೂ ಕನಸಿನ ಮಾತೇ. ಹೇಳುವವರೆಗೆ ಕೊಲ್ಲಲಾರರು. ಅದು ಗ್ಯಾರಂಟಿ." ಅಂದ ಮಹೇಶ.

ಅವನ ಸೂಚನೆಗಳನ್ನು ಎಲ್ಲರೂ ಒಪ್ಪಿದರು.

"ಇವರ್ ಹ್ಯೆನೆಸ್....ಯುವರಾಣಿಯನ್ನು ದೂರದಲ್ಲಿಲ್ಲೋ ಬಿಟ್ಟಿರ ಬೇಡಿ. ಅವರು ಯಾವಾಗಲೂ ನಿಮ್ಮ ಪಕ್ಕದಲ್ಲೇ ಇರುವುದು ಒಳ್ಳೆಯದು. ನಮ್ಮನ್ನು ಬೆದರಿಸಿ ವಿಷಯ ತಿಳಿಯಲಾಗದಿದ್ದರೆ ಆಕೆಯನ್ನೂ ಬೆದರಿಸ ಬಹುದು...."

ಲೈಬ್ರರಿ ಡೋರ್ ತೆರೆದುಕೊಂಡದ್ದನ್ನು ಗಮನಿಸಿ ಟಕ್ಕನೆ ಮಾತು ನಿಲ್ಲಿಸಿದ ಮಹೇಶ. ದಪ್ಪಗೆ ಒರಟೊರಟಾಗಿದ್ದ ವ್ಯಕ್ತಿಯೊಬ್ಬ ಒಳ ಬಂದ. ಕಪ್ಪು ಸೂಟ್ ಧರಿಸಿದ್ದ ಇನ್ನೊಬ್ಬ ವ್ಯಕ್ತಿ ಅವನ ಹಿಂದೆ ಬಂದ.

"ನಿಮ್ಮ ಹೆಸರುಗಳನ್ನು ಹೇಳುವಿರಾ ?" ಮಹೇಶನ ಕಡೆ ನೋಡುತ್ತಾ ಕೇಳಿದ ಕಪ್ಪು ಸೂಟಿನವ.

"ವಿತ್ ಪ್ಲೆಷರ್ ಸಾರ್....ಹಿ ಈಸ್ ಆಂಥೋನಿ ಕ್ವಿನ್....ಐಯಾಮ್ ಮಾರ್ಲನ್ ಬ್ರಾಂಡೋ...." ಅಂದ ಮಹೇಶ.

"ತಮಾಷೆ ಮಾಡುತ್ತಿರುವೆಯೇನು ? ಅದೂ ನೋಡೋಣ...." ಹಲ್ಲು ಕಚ್ಚುತ್ತಾ ಹೊರಗೋದ ಅವರನ್ನು ನೋಡಿ ಮನಸ್ಸಿನಲ್ಲೇ ನಕ್ಕ ಮಹೇಶ.

ಕಿಂಗ್ ಸಹ ಹಾಗೆಯೇ ಉತ್ತರಿಸಿರಬೇಕು. ಅದ್ದರಿಂದಲೇ ಬಾಲ ಸುಟ್ಟ ಬೆಕ್ಕಿನಂತೆ ಮುಖ ಮಾಡಿಕೊಂಡಿದ್ದಾನವನು !

# 12

ಸರ್ಕ್ಯೂಟ್ ಕಾರ್ಡ್ ತೆಗೆದು ಮಯೂರಿಯ ಕೈಗಿತ್ತು ಪಿಸಪಿಸನೆ ನುಡಿದ ಮಹೇಶ. "ಇದು ನಿಮ್ಮ ಬಳಿಯೇ ಇರಲಿ. ಹುಡುಕಲು ಶುರು ಮಾಡಿದರೆ ನಿಮ್ಮ ಸರದಿ ಕೊನೆಯಲ್ಲಿ ಬರುತ್ತದೆ. ಬಿ ಕೇರ್‌ಫುಲ್ !" ಎಚ್ಚರಿಸಿದ.

ಹಾಗೆಯೇ ಆಗಲೆಂದು ತಲೆಯಾಡಿಸಿ ಅದನ್ನು ಸ್ತನಗಳ ನಡುವೆ ಅಡಗಿಸಿಟ್ಟಳು ಮಯೂರಿ.

ಅವರೀಗ ಲೈಬ್ರರಿಯ ಪಕ್ಕದಲ್ಲೇ ಇದ್ದ ಕೊಠಡಿಯಲ್ಲಿ ಕುಳಿತಿದ್ದರು. ಸೆಂಟ್ರಿಯೊಬ್ಬ ಕಾವಲಿದ್ದ ಬಾಗಿಲ ಬಳಿ.

ಕಿಂಗ್ ಮಕ್ಕಳಲ್ಲಿ ಮಯೂರಿಯ ವಿನಹ ಮಿಕ್ಕವರೆಲ್ಲಾ ಬೆಟ್ಟಗಳ ನಡುವೆಯಿರುವ ಸಮ್ಮರ್ ಪ್ಯಾಲೆಸ್‌ಗೆ ಹೋಗಿದ್ದಾರೆಂದು ಅರಿತ ಮೇಲೆ ಸ್ವಲ್ಪ ನಿರಾಳವಾಯಿತು ಮಹೇಶನಿಗೆ.

ಅವರಿಲ್ಲದಿರುವುದೇ ಒಳ್ಳೆಯದಾಯಿತು.

ದೂರದಲ್ಲಿರುವ ಕೊಠಡಿಯಲ್ಲಿ ಡಾಕ್ಟರ್ ಇವಾನ್ ಮತ್ತು ಸ್ವರೂಪ್‌ರನ್ನು ಪ್ರಶ್ನಿಸುತ್ತಿದ್ದರು. ಅವರಿಬ್ಬರಲ್ಲಿ ವೀಕ್ ಡಾಕ್ಟರ್ ಇವಾನ್. ಅದಕ್ಕೆ ಮೊದಲೇ ಟಾರ್ಚರ್‌ಗೊಳಗಾಗಿದ್ದಾನೆ. ಈ ಸಲ ತಡೆದುಕೊಳ್ಳುವನೋ ಇಲ್ಲವೋ ಹೇಳಲಾಗದು.

ಅವರೆಲ್ಲರಲ್ಲೂ ಮಯೂರಿಗೆ ಮಾತ್ರ ಎಲ್ಲ ಕಡೆಗೆ ಓಡಾಡುವ ಸ್ವಾತಂತ್ರ್ಯವಿತ್ತು. ಅವಳನ್ನು ಬಂಧನದಲ್ಲಿರಿಸುವ ಐಡಿಯಾ ಬಂದಿರಲಿಲ್ಲ ಗ್ಯಾಂಗ್‌ನವರಿಗೆ. ಅವಳ ಮೂಲಕವೇ ಗ್ಯಾಂಗ್‌ನೆಲ್ಲಾ ಏಟುಗಳಿಗೂ ಏದಿರೇಟು ಕೊಡುವ ತೀರ್ಮಾನಕ್ಕೆ ಬಂದ ಮಹೇಶ.

"ಮಯೂರಿ....ಈ ಬಿಲ್ಡಿಂಗ್‌ನಲ್ಲಿ ನಮ್ಮ ನಂಬಿಕೆಗೆ ಪಾತ್ರನಾದ ವ್ಯಕ್ತಿ ಯಾರಾದರೂ ಇದ್ದಾನೆಯೇ ?" ಮೆಲು ಧ್ವನಿಯಲ್ಲಿ ಪ್ರಶ್ನಿಸಿದ.

ತಕ್ಷಣ ತಲೆಯಾಡಿಸಿದಳು ಮಯೂರಿ. "ನನ್ನ ದಾದಿ....ಚಿಕ್ಕ ವಯಸ್ಸಿಂದ ನನ್ನನ್ನು ಸಾಕಿದವಳು. ಅವಳನ್ನು ನಂಬಬಹುದು."

"ಅವಳ ಗಂಡ ?"

"ನಮ್ಮ ಕಾರಿನ ಡ್ರೈವರ್."

"ಅವನೂ ಭವನದೊಳಗೆ ಇದ್ದಾನೆಯೇ ?"

"ಹೌದು."

"ಅವನೂ ನಂಬಿಕಸ್ತ ತಾನೇ ?"

"ಅದರಲ್ಲಿ ಸಂಶಯವೇ ಬೇಡ."

"ಇನ್ನೊಂದು ಪ್ರಶ್ನೆ. ನಿಮ್ಮ ಮಿಲಿಟರಿ ಕಮಾಂಡರ್ ಯಾರು ?"

"ಮೇಜರ್‌ಸಿಂಗ್. ನಮ್ಮ ಮುತ್ತಾತನ ಕಾಲದಿಂದ ಅವರ ವಂಶಸ್ತರೇ ಮಿಲಿಟರಿ ಕಮಾಂಡರ್‌ಗಳಾಗಿ ನೇಮಕಗೊಳ್ಳುತ್ತಿದ್ದಾರೆ. ವೆರಿ ಲಾಯಲ್ ಪರ್ಸನ್. ನಾವೆಂದರೆ ಪ್ರಾಣ ಕೊಡಲೂ ಹಿಂಜರಿಯುವುದಿಲ್ಲ."

ಆಗ ತನ್ನ ಪ್ಲಾನ್ ಅವಳಿಗೆ ವಿವರಿಸಿದ ಮಹೇಶ.

"ಸಾಧ್ಯವಾದಷ್ಟೂ ಮೇಜರ್‌ಸಿಂಗ್ ನಿಮ್ಮ ತಂದೆಯನ್ನು ಭೇಟಿ ಮಾಡಲು ಬಿಡುವುದಿಲ್ಲ ಗ್ಯಾಂಗ್‌ನವರು. ಅವನಿಗೆ ಮೆಸ್ಸೇಜ್ ಕಳಿಸಿದರೆ ಈ ಗಂಡಾಂತರದಿಂದ ಪಾರಾಗಬಹುದು" ಅಂದ.

ಏನೆಂದು ಮೆಸ್ಸೇಜ್ ಕಳಿಸುವುದೆಂದು ವಿಚಾರಿಸಿದಳು ಮಯೂರಿ.

ಇಲ್ಲಿನ ಘಟನೆಗಳನ್ನು ವಿವರಿಸಿ ತಕ್ಷಣ ಭವನದ ಬಳಿಗೆ ಬಂದು ರೆಡಿಯಾಗಿರಲು ತಿಳಿಸುವಂತೆ ಸೂಚಿಸಿದ. ಆತುರ ಪಟ್ಟು ದಾಳಿಯೆಸಗಿದರೆ ಮಹಾರಾಜರ ಪ್ರಾಣಕ್ಕೇ ಅಪತ್ತುಂಟಾಗಬಹುದು. ಆದ್ದರಿಂದ ಫರ್ದರ್ ಆರ್ಡರ್ಸ್‌ಗಾಗಿ ಕಾಯುತ್ತಿರುವಂತೆ ಹೇಳಲು ಆದೇಶಿಸಿದ. ಜೊತೆಗೆ ಮಯೂರಿಗೆ ಈ ವಿಷಯದಲ್ಲಿ ಬಹಳ ಎಚ್ಚರಿಕೆಯೊಡನೆ ವರ್ತಿಸುವಂತೆಯೂ ಸೂಚಿಸಿದ.

ಈ ವಿಷಯ ಲೀಕ್ ಆದರೆ ತಮ್ಮೆಲ್ಲರ ಪ್ರಾಣಗಳಿಗೂ ತೊಂದರೆ !

"ವೆಲ್....ನಿಮ್ಮ ವಿಷಯವೇನು ?" ಕೇಳಿದಳು ಮಯೂರಿ.

"ನಮ್ಮ ವಿಷಯವೇ ?" ಅನ್ನುತ್ತಾ ಭುಜ ಎಗರಿಸಿದ ಮಹೇಶ.

ಏನಾಗಲಿ ಬಿಡಲಿ ಸ್ವರೂಪ್, ಇವಾನ್ ಮತ್ತು ತನ್ನನ್ನು ಮಾತ್ರ

ಪ್ರಾಣದೊಡನಿರಿಸರು ಗೋಲ್ಡನ್ ಗ್ಯಾಂಗ್‌ನವರು. ಸಿಲ್ವರ್ ಕಿಂಗ್ ಜಾಡು ತಿಳಿಯಲಿ, ತಿಳಿಯದೆಹೋಗಲಿ ತಮ್ಮನ್ನು ಕೊಲ್ಲದೆ ಬಾಲಿ ಐಲೆಂಡ್ ಬಿಟ್ಟು ಹೋಗರು ಗ್ಯಾಂಗ್‌ನವರು.

ಹತ್ತು ನಿಮಿಷಗಳ ನಂತರ ಬ್ಲಾಕ್ ಸೂಟ್ ಒಳಗೆ ಬಂದ. ಅವನ ಹಿಂದೆಯೇ ಮೆಷಿನ್‌ಗನ್ ಹಿಡಿದ ಗಾರ್ಡ್‌ಒಬ್ಬನೂ ಬಂದ. ಅವರು ಬರುವಷ್ಟರಲ್ಲಿ ಒಬ್ಬರ ಪಕ್ಕ ಒಬ್ಬರು ಕುಳಿತು ಯಾವುದೋ ಪುಸ್ತಕಗಳ ಪೇಜಸ್ ತಿರುವುತ್ತಿದ್ದರು ಮಹೇಶ, ಮಯೂರಿ.

"ಆಲ್‌ರೈಟ್ ಫನ್ನಿ ಫೆಲೋ....ಈಗ ನಿನ್ನ ಸರದಿ ಬಂತು." ಅಂದ ಡಾರ್ಕ್ ಸೂಟ್.

"ವಾಟ್ ಎಬೌಟ್ ಪ್ರಿನ್ಸೆಸ್ ?" ಕೇಳಿದ ಮಹೇಶ.

"ಅವಳೊಡನೆ ಆಮೇಲೆ ಮಾತಾಡುತ್ತೇವೆ."

"ಅವಳ ದಾದಿಯನ್ನು ಕರೆತರುವತನಕ ಒಂಟಿಯಾಗಿ ಬಿಟ್ಟು ಹೋಗುವುದಿಲ್ಲ ನಾನು." ಮೊಂಡನಂತೆ ಹೇಳಿದ ಮಹೇಶ. ಎಷ್ಟು ನೀಟಾಗಿ ತನಗೆ ಅವಕಾಶ ಒದಗಿಸುತ್ತಿದ್ದಾನೆ ಅಂದುಕೊಂಡಳು ಮಯೂರಿ. ಚಾಣಕ್ಯನ ಅರ್ಥಶಾಸ್ತ್ರದ ಪುಸ್ತಕ ಅವಳ ಕೈನಲ್ಲಿತ್ತು.

"ಚಂದ್ರಗುಪ್ತ ಮೌರ್ಯ ನಂದರಾಜನನ್ನು ನಾಶ ಮಾಡುತ್ತೇನೆಂದು ಪ್ರತಿಜ್ಞೆ ಮಾಡಿ ಚಾಣಕ್ಯನ ಸಹಾಯ ಕೋರಿದ. ಅಷ್ಟೊತ್ತಿಗೆ ನಂದ ರಾಜರನ್ನು ನಾಶ ಮಾಡುತ್ತೇನೆಂದು ಪ್ರತಿಜ್ಞೆ ಮಾಡಿಬಿಟ್ಟಿದ್ದ ಚಾಣಕ್ಯ...."

ಬ್ಲಾಕ್ ಸೂಟ್‌ಧಾರಿ ಕೊಠಡಿಯಲ್ಲಿರುವುದನ್ನು ಮರೆತೇ ಹೋದವನಂತೆ ಹೇಳುತ್ತಾ ಹೋದ ಮಹೇಶ. ವಿಧೇಯ ವಿದ್ಯಾರ್ಥಿಯಂತೆ ತಲೆ ಯಾಡಿಸುತ್ತಿದ್ದಳು ಮಯೂರಿ.

"ಮಾಸ್ಟರ್ ! ಅಲೆಕ್ಸಾಂಡರ್ ಮಗಧ ದೇಶದ ಮೇಲೆ ದಂಡೆತ್ತಿ ಬರಲು ಕಾರಣವೇನು ?" ಪ್ರಶ್ನಿಸಿದಳು.

ಅಸಹನೆಯಿಂದ ನೆಲವನ್ನು ಕಾಲಿನಿಂದೊದ್ದ ಗೋಲ್ಡನ್ ಗ್ಯಾಂಗ್ ಅನುಚರ. "ನಿಮ್ಮ ದಾದಿ ಯಾರು ?" ಕಿರುಚಿದ.

"ಹಮಾ !" ಪುಸ್ತಕದಿಂದ ತಲೆ ಎತ್ತದೆಯೇ ಹೇಳಿದಳು ಮಯೂರಿ. ಬಾಗಿಲ ಬಳಿಗೋಗಿ ಸೆಂಟ್ರಿಗೆ ಏನೋ ಹೇಳಿದ ಬ್ಲಾಕ್ ಸೂಟ್.

ಆಗ ಮೇಲೆದ್ದು ಮಯೂರಿಗೆ ಕಣ್ಣು ಹೊಡೆದು ಬ್ಲಾಕ್ ಸೂಟ್ ಹಿಂದೆ ಹೆಜ್ಜೆ ಹಾಕಿದ ಮಹೇಶ.

ಬೇಸ್‌ಮೆಂಟ್‌ನಲ್ಲಿದ್ದ ಸ್ಟೋರ್ ರೂಂನಲ್ಲಿ ಬಟ್ಟೆಗಳನ್ನು ಬಿಚ್ಚಿಸಿ ನಿಲ್ಲಿಸಿದರು ಗಾರ್ಡೊಬ್ಬ ಬೆನ್ನಿಗೆ ಮೆಷಿನ್‌ಗನ್‌ನಳಿಗೆ ಚುಚ್ಚಿ ನಿಂತ. ಹೆಬ್ಬೆರಳುಗಳಿಗೆ ಸಣ್ಣನೆಯ ವೈರ್ ಕಟ್ಟಿ ಸೀಲಿಂಗ್‌ಗೆ ತೂಗು ಬಿಟ್ಟರು.

ಆ ನೋವು ತಪ್ಪಿಸಿಕೊಳ್ಳಲು ಮೇಲೇಳಬೇಕು. ಸರಿಯಾಗಿ ಕಾಲ ಬೆರಳುಗಳ ಮುಂದೆ ನಿಂತರೆ ಹೆಬ್ಬೆರಳುಗಳ ನೋವು ಕಡಿಮೆಯಾಗುತ್ತದೆ. ಮಿಲಿಮೀಟರ್ ಕೆಳಗಿಳಿದರೂ ಚರ್ಮ ಕತ್ತರಿಸಿ ಒಳಗಿಳಿಯುತ್ತದೆ ಹೆಬ್ಬೆರಳಿಗೆ ಬಿಗಿದಿರುವ ವೈರ್.

"ನಿನ್ನ ಹೆಸರೇನು?"

"ನಿನಗಿಷ್ಟ ಬಂದ ಹೆಸರಲ್ಲಿ ಕರಿ....ಮಾತಾಡುತ್ತೇನೆ."

ಮುಂದಕ್ಕೆ ಮಹೇಶನ ಹೊಟ್ಟೆಗೆ ಪಂಚ್ ಮಾಡಿದ ಬ್ಲಾಕ್ ಸೂಟ್. ನೋವಿಗೆ ಅಲ್ಲಾಡಿಹೋದ ಮಹೇಶ.

"ನಿನ್ನ ಹೆಸರೇನೆಂದು ನಾವು ಊಹಿಸಬಲ್ಲೆವು 'ಪಿಂಕ್'....ಹೇಗಿದೆ ನಮ್ಮ ಟ್ರೀಟ್‌ಮೆಂಟ್?" ವಿಕಟವಾಗಿ ನಗುತ್ತಾ ಕೇಳಿದ.

ಅಷ್ಟು ನೋವಿನಲ್ಲೂ ಇವರಿಗೆ ತನ್ನ ಐಡೆಂಟಿಟಿ ಹೇಗೆ ತಿಳಿಯಿತೆಂದು ಯೋಚಿಸಿದ ಮಹೇಶ.

ಯಾರು ಹೇಳಿರಬಹುದು? ಸ್ವರೂಪ್? ಅಥವ ಇವಾನ್? ಇವರಿಬ್ಬರೂ ಬಾಯಿ ಬಿಡದಿದ್ದಲ್ಲಿ ತಿಳಿದ ಬಗೆ ಹೇಗೆ? ಡರ್ಬಿಯಲ್ಲೇ ತಿಳಿದುಕೊಂಡಿರಬಹುದೇ?

"ನಿನ್ನೊಡನೆ ಬಂದ ರಷ್ಯನ್ ಡಾಕ್ಟರ್ ಇವಾನ್ ತಾನೇ? ಎರಡನೆ ಯವನು ಸ್ವರೂಪ್ ಅಲ್ಲವೇ?"

ತಡೆಯಲಾಗದ ನೋವಿಗೆ ಕಣ್ಣು ಮುಚ್ಚಿ ತುದಿ ಬೆರಳುಗಳ ಮೇಲೆ ನಿಲ್ಲಲು ಪ್ರಯತ್ನಿಸತೊಡಗಿದ ಮಹೇಶ. ಭುಜದ ಗಾಯ ಓಪನ್ ಆಗಿ ರಕ್ತ ಹರಿಯಲು ಶುರು ಮಾಡಿತು. ಕುಯ್ದ ಹೆಬ್ಬೆರಳ ಬಳಿಯಿಂದಲೂ ತೊಟ ತೊಟ ಹನಿಯತೊಡಗಿತು ರಕ್ತ.

"ಸ್ವರೂಪ್....ಯಾರೋ ನನಗೆ ಗೊತ್ತಿಲ್ಲ. ಅವನನ್ನು ಮೊದಲ ಬಾರಿಗೆ ಇಲ್ಲೇ ನೋಡಿದ್ದು...."

"ಸ್ವರೂಪ್ ಯಾರು?"

ಅದೊಂದು ಪ್ರಶ್ನೆಯಿಂದಲೇ ಅವರಿಬ್ಬರೂ ಇವರ ಯಾವುದೇ ಪ್ರಶ್ನೆಗಳಿಗೂ ಉತ್ತರಿಸಿಲ್ಲವೆಂಬುದು ಸ್ಪಷ್ಟವಾಯಿತು. ಇನ್ನೂ ಸಂದೇಹದೊಡನೆಯೇ ಇದ್ದಾರೆ. "ಟ್ಯೂಷನ್ ಮಾಸ್ಟರ್....ಭಾರತದಿಂದ ಬಂದಿದ್ದಾನೆ." ಹಲ್ಲು ಕಚ್ಚಿ ಹೇಳಿದ.

"ನೋ....ಸ್ವರೂಪ್ ಸಿಲ್ವರ್‌ಕಿಂಗ್‌ನಿಂದ ಬಂದವನಲ್ಲವೇ !" ಮಹೇಶನ ತಲೆಗೂದಲಿಡಿದು ಬಗ್ಗಿಸುತ್ತಾ ಗದರಿಸಿ ಕೇಳಿದ ಬ್ಲಾಕ್ ಸೂಟ್ ವ್ಯಕ್ತಿ.

ಉತ್ತರ ಹೊರಬರದಿದ್ದಾಗ ತನ್ನ ತೂಕ ಸಹ ಮಹೇಶನ ಮೇಲೆ ಹಾಕಿ ಗುಂಜತೊಡಗಿದ.

ಬೆರಳುಗಳು ತುಂಡಾಗಿ ಹೋದಂತೆ ಫೀಲಿಂಗ್ ಮಹೇಶನಿಗೆ. ಕಣ್ಣುಗಳ ಮುಂದೆ ದಟ್ಟ ಕಪ್ಪು ತೆರೆ ವ್ಯಾಪಿಸತೊಡಗಿ ಮೂರ್ಛೆ ಹೋದ ಮಹೇಶ. ಅದನ್ನು ಗಮನಿಸಿ ಕ್ಯಾಕರಿಸಿ ಮುಖಕ್ಕೆ ಉಗಿದು ಹೊರಕ್ಕೋಗಿಬಿಟ್ಟ ಕಪ್ಪು ಸೂಟ್‌ನವ.

ಎಷ್ಟೋ ಹೊತ್ತಾದ ಮೇಲೆ....

ಕತ್ತಲ ಕೋಣೆಯಲ್ಲಿ ಕಣ್ಣು ತೆರೆದು ನೋಡಿದ ಮಹೇಶ. ಕೈಗಳಲ್ಲಿನ ಸತ್ವವೆಲ್ಲಾ ಉಡುಗಿಹೋಗಿ ನೋವೇ ತಿಳಿಯಲಿಲ್ಲ. ಕೈಗಳನ್ನು ಕಣ್ಣುಗಳ ಬಳಿಯಿರಿಸಿ ನೋಡಿದ. ಐಸ್ ಕ್ಯೂಬ್ಸ್ ಇರಿಸಿ ಬ್ಯಾಂಡೇಜ್ ಮಾಡಲಾಗಿತ್ತು. ಮೈತುಂಬಾ ಅದೇ ರೀತಿಯ ಬ್ಯಾಂಡೇಜ್‌ಗಳು.

ಆಕಾರವೊಂದು ಕೊಠಡಿಯ ಮೂಲೆಯಿಂದ ಬಂದು ಮಂಚದ ಮೇಲೆ ಕುಳಿತಿತು. ಮೇಲ್ಮುಸುಕಿನೊಳಗಿನ ಮುಖವನ್ನು ಗುರುತಿಸಿದ ಮಹೇಶ.

"ಮಯೂರಿ....ನೀವಿಲ್ಲಿಗೆ ಹೇಗೆ ಬಂದಿರಿ ?"

"ದಾದಿ ನನ್ನಂತೆ ನಟಿಸುತ್ತಿದ್ದಾಳೆ. ನಾನವಳ ವೇಷದಲ್ಲಿ ತಪ್ಪಿಸಿಕೊಂಡು ಬಂದೆ."

"ಮೇಜರ್‌ಸಿಂಗ್‌ಗೆ ಮೆಸ್ಸೇಜ್ ಕಳಿಸಿದಿರಾ ?"

"ಕಳಿಸಿದೆ. ಎಲ್ಲರೊಡನೆ ಕಾಂಪೌಂಡ್ ಹಿಂದೆ ರೆಡಿಯಾಗಿರುತ್ತೇನೆಂದು ಅವನಿಂದ ಸುದ್ದಿ ಬಂದಿದೆ."

"ನಿಮ್ಮ ತಂದೆ ?"

"ಅವರು ಕ್ಷೇಮವಾಗಿದ್ದಾರೆ. ಆದರೆ ಕೊಠಡಿಯಿಂದ ಹೊರಗೆ ಬರಲು ಬಿಡುತ್ತಿಲ್ಲ. ಒಂದು ಬಟ್ಟೆ ತಣ್ಣನೆಯ ನೀರಲ್ಲಿ ನೆನೆಸಿ ಅವನ ಮುಖ ಒರೆಸಿದಳು ಮಯೂರಿ.

ಮುಖ ಕಿವುಚಿದ ಮಹೇಶ.

"ನೋವಿದೆಯೇನು ?" ಆರ್ದ್ರತೆಯೊಡನೆ ಕೇಳಿದಳು.

"ಇಲ್ಲ-ಐಸ್ ಮೈ ಜಡವಾಗುತ್ತಿದೆ. ಆದರೆ ಹೀಗಾದರೆ ಬಹಳ ಕಷ್ಟ. ನಾನು ಏಳದಿದ್ದರೆ ಹೇಗೆ ?" ಅನ್ನುತ್ತಾ ಮೇಲೇಳಲು ಪ್ರಯತ್ನಿಸಿದ ಮಹೇಶ.

ಅವನೆದೆಯ ಮೇಲೆ ಕೈಯ್ಯಿರಿಸಿ ಹಾಸಿಗೆಯಿಂದ ಮೇಲೇಳಲಾಗದಂತೆ ಅದುಮಿ ಹಿಡಿದಳು ಮಯೂರಿ. "ನೀನೀಗ ಎದ್ದು ಮಾಡಬೇಕಾದ್ದೇನೂ ಇಲ್ಲ. ಗೋ ಟು ಸ್ಲೀಪ್...." ಅಂದಳು.

"ಇನ್ನು ನಿದ್ರೆ ಎಲ್ಲಿ ಬರುತ್ತದೆ ? ಹಾಗೋ ಹೀಗೋ ನಿರ್ಧರಿಸಿ ಬಿಡಬೇಕು. ಕೊಠಡಿಯ ಹೊರಗೆ ಕಾವಲಿದೆಯೇ ?"

"ಇಬ್ಬರು ಗಾರ್ಡ್‌ಗಳಿದ್ದಾರೆ."

"ಹಾಗಾದರೆ ನೀನು ಒಳಗೆ ಬಂದದ್ದೇಗೆ ?"

ತೋರು ಬೆರಳಿಂದ ಒಂದು ಬೊಂಬೆ ತೋರಿಸಿದಳು ಮಯೂರಿ. ಅದೊಂದು ರಹಸ್ಯ ಮಾರ್ಗ.

ತಕ್ಷಣ ಮೇಲೆದ್ದು ಕುಳಿತ ಮಹೇಶ. ಮೈಮೇಲಿದ್ದ ಐಸ್ ಪೀಸ್‌ಗಳನ್ನು ಪಕ್ಕಕ್ಕೊಗೆದು ಷರ್ಟ್ ಹಾಕಿಕೊಂಡ.

"ಮಯೂರಿ....ನಿನ್ನ ದಾದಿಯ ಗಂಡನ ಡ್ರೆಸ್ ಸಿಗುತ್ತದೆಯೇ ? ಸಿಕ್ಕಿದರೆ ಮ್ಯೂಸಿಯಂಗೆತ್ತಿಕೊಂಡು ಬಾ. ನಾನಲ್ಲಿರುತ್ತೇನೆ." ಅದಕ್ಕೆ ಮೊದಲೇ ಅವಳ ಬಳಿ ಭವನದ ಪ್ಲಾನೆಲ್ಲಾ ಕೇಳಿ ಮನದಲ್ಲಿ ಇಂಪ್ರಿಂಟ್ ಮಾಡಿಕೊಂಡಿದ್ದ ಕಾರಣ ಸಲೀಸಾಗಿ ಹೇಳಿದ.

ತಾನು ಬಂದ ದಾರಿಯ ಮೂಲಕ ಹೊರಟು ಹೋದಳು ಮಯೂರಿ. ಮೆಲ್ಲನೆದ್ದು ಬಾಗಿಲು ತೆರೆದು ಹೊರಕ್ಕೆ ಬಗ್ಗಿ ನೋಡಿದ ಮಹೇಶ.

ಬೆನ್ನು ಬಾಗಿಲ ಕಡೆಗೆ ತಿರುಗಿಸಿ ತೂಕಡಿಸುತ್ತಿದ್ದ ಗಾರ್ಡ್. ತಟ್ಟ

ವಾಗದಂತೆ ಬಂಗಾರದ ಸಿಂಹದ ಬೊಂಬೆ ಕೈನಲ್ಲಿಡಿದು ಬಾಗಿಲು ಪೂರ್ತಿ ತೆಗೆದ ಮಹೇಶ.

ಬೆಚ್ಚಿ ಹಿಂದೆ ತಿರುಗಹೋದ ಗಾರ್ಡ್. ಬಲವಾಗಿ ನಡು ನೆತ್ತಿಯ ಮೇಲೆ ಬಿತ್ತು ಸಿಂಹ. ವೆಲ್ಡ್ ಮಾಡಿದ್ದ ಅದರ ತಲೆ ಮುರಿದು ಬಿತ್ತು. ತನ್ನ ತಲೆ ಸೀಳಿ ಕೆಳಕ್ಕೆ ಕುಸಿದು ಮೂರ್ಛೆ ಹೋದ ಗಾರ್ಡ್.

ಜಾರಿ ಹೋಗುತ್ತಿದ್ದ ಪ್ಯಾಂಟನ್ನು ಮೇಲೆಳೆದುಕೊಳ್ಳಲೂ ಚೈತನ್ಯ ಇರಲಿಲ್ಲ ಮಹೇಶನಿಗೆ. ಬೆರಳುಗಳೆಲ್ಲಾ ಶಕ್ತಿಯೇ ನಶಿಸಿಹೋದಂತೆ ಕದಲಲೇ ನಿರಾಕರಿಸಿಬಿಟ್ಟವು. ಅದೇ ಅವಸ್ಥೆಯೊಡನೆಯೇ ಮ್ಯೂಸಿಯಂ ಕಡೆಗೆ ಹೆಜ್ಜೆ ಹಾಕಿದ.

# 13

"ಸ್ವರೂಪ್ ! ನಾನು ಹೇಳಿದಂತೆ ಮಾಡಬಲ್ಲೆಯಾ ?" ಅಂದೋ ಳನೆಯೊಡನೆ ಕೇಳಿದ ಮಹೇಶ.

ಸ್ವರೂಪ್‌ಗೂ ತಮ್ಮ ಪ್ರಶ್ನೆಗಳಿಗೆ ಉತ್ತರ ಹೇಳಲಿಲ್ಲವೆಂಬ ಕೋಪಕ್ಕೆ ಬಲಕಾಲನ್ನು ಜಜ್ಜಿ ಬಿಟ್ಟಿದ್ದರು ಇಂಟರ್‌ಗೇಟರ್‍ಸ್. ಮೂಳೆ ನಜ್ಜುಗುಜ್ಜಾಗಿ ಹೋಗಿತ್ತು. ನೋವಿಗೆ ವಿಲವಿಲ ಒದ್ದಾಡುತ್ತಿದ್ದ ಅವನು.

ಮ್ಯೂಸಿಯಂನಲ್ಲಿ ಆಯುಧಗಳಿಗಾಗಿ ಹುಡುಕಾಡಿ ಬರಿಗೈನಲ್ಲಿ ವಾಪ ಸ್ಸಾಗಿದ್ದ ಮಹೇಶ. ಗಾರ್ಡೊಬ್ಬನನ್ನು ಕೊಂದು ಮೆಷಿನ್‌ಗನ್ ಒಂದನ್ನು ಮಾತ್ರ ಸಂಪಾದಿಸಿದ್ದನಷ್ಟೇ. ಅದರೊಡನೆ ಅವರಿಬ್ಬರನ್ನೂ ಇರಿಸಿದ್ದ ಕೊಠಡಿ ಸೇರಿಕೊಂಡಿದ್ದ. ತಮ್ಮ ಡಿಸ್ಪೆನ್ಸರಿಯಿಂದ ಒಂದು ಮಾರ್ಫಿಯಾ ಇಂಜೆಕ್ಷನ್ ಬಾಟಲ್ ತಂದು ಕೊಟ್ಟಿದ್ದಳು ಮಯೂರಿ. ಅದನ್ನು ಇಂಜೆಕ್ಟ್ ಮಾಡಿ ಅವನ ನೋವನ್ನು ಸಾಕಷ್ಟು ಕಡಿಮೆ ಮಾಡಿದ್ದ ಮಹೇಶ. ತನ್ನ ಪ್ಲಾನ್ ಅವರಿಗೆ ವಿವರಿಸಿ ಹೇಳಿದ. ಅವರ ಒಪ್ಪಿಗೆ ಸಿಕ್ಕೊಡನೆ ಮೆಷಿನ್ ಗನ್ ಇವಾನ್ ಕೈಗೆ ಕೊಟ್ಟು ಸ್ವರೂಪ್‌ನನ್ನು ಭುಜದ ಮೇಲೆ ಹೊತ್ತು ಹೊರಗಡೆಗೆ ಬಂದ.

ಒಂದು ಮೂಲೆಯಲ್ಲಿ ನಿಂತು ಅವರಿಗಾಗಿ ಕಾಯುತ್ತಿದ್ದಳು ಮಯೂರಿ.

ಸ್ವರೂಪ್‌ನನ್ನು ಇವಾನ್ ಭುಜಕ್ಕೆ ಸೇರಿಸಿ ಕೊನೆಯ ಸಾರಿ ತನ್ನ ಇನ್‌ಸ್ಟ್ರಕ್ಷನ್ ನೀಡಿದ. ಮಯೂರಿಯನ್ನು ಕಳಿಸಿ ತಾನು ಕಿಂಗ್ ಅನ್ನು ಕರೆ ತರುತ್ತೇನೆಂದು ಹೇಳಿ ಹೊರಟ. ಎಚ್ಚರ ಎಂದು ಕಾಷನ್ ನೀಡಿದಳು ಮಯೂರಿ.

ಡ್ರೈವರ್ ಪ್ಯಾಂಟ್, ಕೋಟ್ ಧರಿಸಿ ಗೋಡೆಗಳ ಪಕ್ಕದಲ್ಲೇ ನಡೆ

ಯುತ್ತಾ ಕಿಂಗ್ ಇರುವ ಕೊಠಡಿಯ ಕಡೆಗೆ ಸಾಗಿದ ಮಹೇಶ. ಪ್ಯಾಲೆಸ್ ಗಾರ್ಡ್‌ಗಳೆಲ್ಲಾ ಗ್ಯಾಂಗ್ ಮೆಂಬರ್‌ಗಳ ಬಂಧನದಲ್ಲಿದ್ದರು. ಒಟ್ಟು ಎಷ್ಟು ಜನ ಬಂದರೋ ಲೆಕ್ಕ ಸಿಗುತ್ತಿಲ್ಲ.

ಕಿಂಗ್ ಕೊಠಡಿಯ ಹೊರಗೆ ಇಬ್ಬರು ಗಾರ್ಡ್‌ಗಳು ಕಾವಲಿದ್ದರು. ಇಬ್ಬರ ಕೈಗಳಲ್ಲೂ ಆಯುಧಗಳಿದ್ದವು.

ಕಾರಿಡಾರ್ ಪೂರ್ತಿ ನೆಲವನ್ನು ಮೃದುವಾದ ಕಾರ್ಪೆಟ್ ಆವರಿಸಿತ್ತು. ಬಾಗಿಲೆದುರಿಗೆ ಸೀಲಿಂಗ್‌ನಲ್ಲಿ ಒಂದು ಬಲ್ಬ್ ಉರಿಯುತ್ತಿತ್ತು. ಖಾಸ ಕಾರಿಡಾರ್‌ನಲ್ಲಿ ಕಾಲಿಟ್ಟರೆ ಗಾರ್ಡ್‌ಗಳ ಕಣ್ಣಿಗೆ ಬೀಳುವುದು ಗ್ಯಾರಂಟಿ. ಅಡಗಲು ಅವಕಾಶವಿಲ್ಲ. ಏನು ಮಾಡುವುದೆಂದು ಯೋಚಿಸುತ್ತಾ ಗೋಡೆಯನ್ನೊರಗಿ ದೂರದಲ್ಲೇ ನಿಂತುಬಿಟ್ಟ.

ಮಹೇಶ ನಿಂತಿದ್ದ ಜಾಗದಲ್ಲೇ ಕಾರಿಡಾರ್ ತಿರುವು ತಿರುಗಿತ್ತು. ಅಲ್ಲಿ ಪಿಲ್ಲರ್ ಬದಿಗೆ ಸ್ವಲ್ಪ ನೆರಳಿತ್ತು. ಆ ನೆರಳಲ್ಲಿ ನಿಂತು ಮೆಲ್ಲನೆ ಕೆಮ್ಮಿದ ಮಹೇಶ. ಹಿಂದೆ ತಿರುಗಿ ಗಾರ್ಡ್‌ಗಳೇನು ಮಾಡುತ್ತಿದ್ದಾರೆಂದು ನೋಡುವ ಅವಕಾಶವಿಲ್ಲ. ಶಬ್ದ ಕೇಳಿ ಅವರು ಬರುತ್ತಾರೆಂಬುದೇನೋ ಖಚಿತ. ಇಬ್ಬರೂ ಬಂದಾರೆಯೇ ? ಅಥವ ಒಬ್ಬನೇ ಬರುವನೇ ? ಹೆಜ್ಜೆ ಶಬ್ದ ಕಾರ್ಪೆಟ್ ಕಾರಣ ಕೇಳಿಸದು. ಹಾಗೆಯೇ ನೆರಳಲ್ಲಿ ಕಾದು ನಿಂತ.

ಮೆತ್ತನೆಯ ಕಾರ್ಪೆಟ್ ಮೇಲೆ ಅಸ್ಪಷ್ಟವಾಗಿ ಕೇಳಿಸಿತು ಬೂಟ್ಸ್ ಗಾಲಿನ ಶಬ್ದ. ಒಂದು ನೆರಳು ಕಾರ್ನರ್ ಕ್ರಮಿಸಿತು. ಒಂದೇ ಹಾರಿನಲ್ಲಿ ಬೆನ್ನ ಮೇಲೊರಗಿ ಬಿದ್ದ ಮಹೇಶ. ಒಂದು ಕೈ ಬಾಯಿ ಮುಚ್ಚಿತು. ಇನ್ನೊಂದು ಕೈ ಗಂಟಲಿಗೆ ಚಾಪ್ ಮಾಡಿತು. ಉಸಿರಾಡಲಾಗದೆ ವಿಲವಿಲ ಒದ್ದಾಡಿದ ಅವನಿಗಿಂತಾ ಹೆಚ್ಚು ನೋವನುಭವಿಸಿದ ಮಹೇಶ ಅಂಗೈನಿಂದ ಭುಜದವರೆಗೆ ಷಾಕ್ ಹೊಡೆದಂತಾಗಿ, ಆದರೂ ಮತ್ತೊಮ್ಮೆ ಅದೇ ನೋವು ತುಂಬಿದ ಕೈನಿಂದ ಅದೇ ಸ್ಪಾಟ್‌ಗೆ ಚಾಪ್ ಮಾಡಿದ. ಸಣ್ಣಗೆ ಮೂರು ಗೋಣು ಚೆಲ್ಲಿ ಬಿಟ್ಟ ಗಾರ್ಡ್. ಅವನನ್ನು ಮೆಲ್ಲಗೆ ಕತ್ತಲಲ್ಲೇ ಮಲಗಿಸಿ ರೈಫಲ್ ಬಾಯೊನೇಟ್ ಬೇರ್ಪಡಿಸಿ ಕೈನಲ್ಲಿಡಿದು ಇನ್ನೊಬ್ಬನ ಆಗಮನಕ್ಕೆ ಸನ್ನದ್ಧನಾದ.

ಬೈದುಕೊಂಡೇ ಬಂದ ಎರಡನೇ ಗಾರ್ಡ್. ಕಾರಿಡಾರ್ ತಿರುವು

ಕ್ರಮಿಸಿದೊಡನೆ ಹುಲಿಯಂತೆ ಅವನ ಮೇಲೆ ಬಿದ್ದ ಮಹೇಶ. ಕಸಕ್ಕನಿಳಿಸಿದ ಬಾಯೋನೆಟ್ ಅವನ ಹೊಟ್ಟೆಯೊಳಕ್ಕೆ. ಕೂಗು ಅವನ ಬಾಯಿಂದ ಹೊರ ಬರದಂತೆ ಅದುಮಿ ಹಿಡಿದ. ನಿಮಿಷದಲ್ಲಿ ಸ್ತಬ್ಧನಾದ ಅವನನ್ನಲ್ಲೇ ಒರಗಿಸಿ ಎರಡು ರೈಫಲ್ಸ್ ಕಂಕುಳಲ್ಲಿರುಕಿಕೊಂಡು ಸರಸರನೆ ಕಿಂಗ್ ಕೊಠಡಿಯೊಳಕ್ಕೆ ನಡೆದ.

"ಇವರ್ ಹೈನೆಸ್....ತಕ್ಷಣ ಹೊರಡಿ ?" ಎಂದು ಅವಸರಿಸಿದ.

ಯಾರಾದರೂ ಗಾರ್ಡ್‌ಗಳನ್ನು ಕಂಡರೆ ಕಷ್ಟ. ತಕ್ಷಣ ಹೊರಟು ಬಿಟ್ಟರೆ ಕ್ಷೇಮ. ಕಿಂಗ್ ರೆಡಿಯಾಗುವಷ್ಟರಲ್ಲಿ ಪಕ್ಕದ ಕೊಠಡಿಯ ಬಾಗಿಲು ತೆಗೆದುಕೊಂಡು ಒಳಬಂದ ಬ್ಲಾಕ್ ಸೂಟ್ ವ್ಯಕ್ತಿ !

"ಅವಸರವೇನಿಲ್ಲ....ನಿಧಾನವಾಗಿ ಹೋಗಬಹುದು" ಅಂದ ಕ್ರೂಕೆಡ್ ಸ್ಮೈಲ್‌ನೊಡನೆ.

"ಐಯಾಂ ಸಾರಿ....ಸಂಜೆಯಿಂದ ಅವನು ನನ್ನ ಕೊಠಡಿಯಲ್ಲೇ ಇದ್ದಾನೆ." ಅಸಹಾಯಕತೆಯೊಡನೆ ನುಡಿದ ಕಿಂಗ್.

ಡಾರ್ಕ್ ಸೂಟ್ ಕಡೆಗೆ ಅವನ ಕೈನಲ್ಲಿದ್ದ ಪಿಸ್ತೂಲ ಕಡೆಗೆ ನೋಟ ಬದಲಿಸಿ ನೋಡಿದ ಮಹೇಶ. ಅವನಿಗೂ ತನಗೂ ಹತ್ತಡಿಗಳಷ್ಟು ಅಂತರ ಇದೆ. ತನ್ನ ಕೈ ತುಸು ಕದಲಿದರೂ ಪಿಸ್ತೂಲು ಬೆಂಕಿಯುಗುಳುತ್ತದೆ. ತಾನೇ ಅಲ್ಲ....ತನ್ನವರೆಲ್ಲಾ ಅಪಾಯಕ್ಕೆ ಸಿಕ್ಕಿಕೊಳ್ಳುತ್ತಾರೆ. ಈ ಸಿಕ್ಕಿನಿಂದ ಹೇಗೆ ಪಾರಾಗುವುದೆಂದು ತೀವ್ರವಾಗಿ ಯೋಚಿಸತೊಡಗಿದ ಮಹೇಶ.

ಎರಡೆಜ್ಜೆ ಮುಂದೆ ಬಂದ ಬ್ಲಾಕ್ ಸೂಟ್.

"ನಮಗೆ ಬೇಕಾದ್ದು ಸಿಂಪಲ್ ಇನ್‌ಫರ್ಮೇಷನ್. ಸಿಲ್ವರ್ ಕಿಂಗ್ ಎಲ್ಲಿದೆ ? ಅದೆಲ್ಲಿದೆಯೆಂದು ತಿಳಿಸಿದರೆ ನಾವು ಹೊರಟು ಬಿಡುತ್ತೇವೆ" ನಗುತ್ತಾ ಹೇಳಿದ.

"ಹೈನೆಸ್‌ಗೆ ಅದೆಲ್ಲಿದೆಯೆಂದು ಗೊತ್ತಿಲ್ಲ. ಅವರ ಸೇವಕ ನಾನು, ನನಗೇಗೆ ತಿಳಿಯುತ್ತದೆ ?" ಕೇಳಿದ ಮಹೇಶ.

"ಗೊತ್ತಿಲ್ಲವೆಂದರೆ....ಸಾವು ತಪ್ಪದು ?" ಎಚ್ಚರಿಸಿದ ಅವನು.

"ಗೊತ್ತಿಲ್ಲವೆಂದು ಹೇಳಿದರೂ ನಂಬದಿದ್ದರೇನು ಮಾಡುವುದು ?" ಅನ್ನುತ್ತಾ ಕೆಳಗೆ ನೋಡಿದ ಮಹೇಶ. ಗಾರ್ಡನ್ನು ಕೊಂದ ವೇಳೆ

ಬಾಯೊನೆಟ್ ಸಾಕ್ಸ್‌ನಲ್ಲಿರಿಸಿದ್ದ. ಪ್ಯಾಂಟ್ ಮೇಲಿಂದ ಹತ್ತಂಗುಲದಷ್ಟು ಹೊರಗಿತ್ತದು. ಆತುರದಲ್ಲಿ ಅವನು ಗಮನಿಸಿರಲಿಲ್ಲ....ಬ್ಲಾಕ್‌ಸೂಟ್‌ಗೂ ಅತ್ತ ಕಡೆಗೆ ಗಮನ ಹೋಗಿರಲಿಲ್ಲ.

"ಕೈಗಳು ನೋವಾಗುತ್ತಿವೆ....ರೈಫಲ್ಸ್ ಕೆಳಗಿಡಲೇ ?" ಕೇಳಿದ ಮಹೇಶ.

"ನೋ ಪ್ರಾಬ್ಲಂ ! ಆದರೆ ಹುಷಾರ್....ಏನಾದರೂ ತರಲೆ ಮಾಡಿದರೆ ತಲೆ ಡ್ರಿಲ್ ಮಾಡಿಬಿಡುತ್ತೇನೆ" ಎಚ್ಚರಿಸಿ ಇನ್ನೆರಡೆಜ್ಜೆ ಮುಂದೆ ಬಂದ ಬ್ಲಾಕ್ ಸೂಟ್.

ಎರಡೂ ರೈಫಲ್ಸ್ ಕೇರ್‌ಫುಲ್ಲಾಗೇ ಕೆಳಗಿರಿಸಿದ ಮಹೇಶ. ಸೊಂಟ ಪೂರ್ತಿ ಮೇಲಕ್ಕೆ ಬರುವಷ್ಟರಲ್ಲೇ ಬಲಗೈ ಮಿಂಚಿನ ವೇಗದಲ್ಲಿ ಮೂವ್ ಆಯಿತು. ಗಾಳಿಯನ್ನು ಸೀಳುತ್ತಾ ಹೋಗಿ ಪಿಸ್ತೂಲಿಗೆ ತಗುಲಿತು ಬಯೊನೇಟ್.

ಚೀರಿ ಪಿಸ್ತೂಲನ್ನು ಬಿಟ್ಟುಬಿಟ್ಟ ಬ್ಲಾಕ್ ಸೂಟ್. ಟ್ರಿಗರ್ ಮೇಲೆ ಒತ್ತಡ ಬಿದ್ದ ಕಾರಣ ಅಯಾಚಿತವಾಗಿ ಗರ್ಜಿಸಿತ್ತು ಪಿಸ್ತೂಲು.

ಮುಂದಕ್ಕೆ ಡೈವ್ ಮಾಡಿ ಅವನ ಹೊಟ್ಟೆಗೆ ತಲೆಯಿಂದ ಬಲವಾಗಿ ಗುದ್ದಿದ ಮಹೇಶ. ಇಬ್ಬರೂ ನೆಲದ ಮೇಲೆ ಬಿದ್ದರು. ಕೈಗೆ ಸಿಕ್ಕಿದ ಬಾಯೊನೆಟ್ ಎತ್ತಿಕೊಂಡು ಕಸಕ್ಕನಿಳಿಸಿದ ಮಹೇಶ ಕಂಠ ಭಾಗದಲ್ಲಿ.

ಹೊರಗಡೆ ವಿಷಲ್ಸ್ ಕೇಳಿಸಿದವು. ಅತ್ತ ಕಡೆಗೆ ಓಡಿ ಬರುತ್ತಿರುವ ಶಬ್ದ ಕೇಳಿಸಿತು.

"ಇವರ್ ಹೈನೆಸ್....ಕ್ವಿಕ್ !" ಅನ್ನುತ್ತಾ ರೈಫಲ್ಸ್ ಎತ್ತಿಕೊಂಡು ಹೊರಕ್ಕೋಡಿದ ಮಹೇಶ.

ನಿಮಿಷದ ನಂತರ ಕೊಠಡಿಯಲ್ಲಿ ಕಾಲಿರಿಸಿದ ಗ್ಯಾಂಗ್ ಮೆಂಬರ್ಸ್‌ಗೆ ಭಯಂಕರ ದೃಶ್ಯವೊಂದು ಕಾಣಿಸಿತು. ನೆಲದ ಮೇಲಿದ್ದ ಬ್ಲಾಕ್ ಸೂಟ್ ಧಾರಿಯ ಬಾಯಲ್ಲಿ ಆಕಾಶದತ್ತ ಮುಖ ಮಾಡಿ ನಿಂತಿತ್ತೊಂದು ಬಾಯೊನೇಟ್ !

# 14

"ಈ ಶತ್ರುಗಳಿಗೆ ಮೇಜರ್ ಸಿಂಗ್ ಬರಬೇಕಿತ್ತಲ್ಲ....ಏಕೆ ಬರಲಿಲ್ಲ ?" ಆಶ್ಚರ್ಯ ಪಟ್ಟಳು ಮಯೂರಿ.

ಎಲ್ಲರೂ ಪ್ಯಾಲೆಸ್ ಬದಿಯ ಗಾರ್ಡನ್‌ನಲ್ಲಿ ದಟ್ಟ ಪೊದೆಯ ಹಿಂದೆ ಕುಳಿತಿದ್ದರು. ಅವರನ್ನು ಸುತ್ತುವರೆದು ಕೊಲ್ಲಲು ತೀವ್ರ ಕೃಷಿಯೆಸಗುತ್ತಿದ್ದರು ಗೋಲ್ಡನ್ ಗ್ಯಾಂಗ್ ಮೆಂಬರ್ಸ್. ಅಲ್ಲಿಯವರೆಗೆ ತನ್ನ ಕೈನಲ್ಲಿದ್ದ ಮೆಷಿನ್ ಗನ್‌ನಿಂದ ಅವರಿಗೆ ಸೂಕ್ತ ಉತ್ತರವಿತ್ತಿದ್ದ ಡಾಕ್ಟರ್ ಇವಾನ್. ಬುಲೆಟ್ಸ್ ಖಾಲಿಯಾಗಿ ಮೆಷಿನ್‌ಗನ್ ಮೌನ ತಾಳಿದೊಡನೆ ಮುಂದೆ ಬರಲು ಶುರು ಮಾಡಿದರು ಶತ್ರುಗಳು. ರೆಡಿಯಾಗಿರುತ್ತೇನೆಂದು ತಿಳಿಸಿದ್ದ ಮೇಜರ್‌ಸಿಂಗ್ ಅಡ್ರೆಸ್ಸೇ ಇಲ್ಲ.

ಗುಂಡುಗಳು ಅವರ ಸುತ್ತಲೂ ಹಾರಾಡುತ್ತಿದ್ದವು.

"ಹೈನೆಸ್....ನಿಮ್ಮ ರೈಫಲ್‌ನಲ್ಲಿ ಎಷ್ಟು ಬುಲೆಟ್ಸ್ ಇವೆ ?" ಕೇಳಿದ ಮಹೇಶ.

"ಮೂರು."

"ಹೌ ಎಬೌಟ್ ಯು ಪ್ರಿನ್ಸೆಸ್ ?"

"ಫೋರ್ !"

"ಸ್ವರೂಪ್....ನಿನ್ನ ಬಳಿ ?"

"ಉತ್ತರ ಬರದಿದ್ದಾಗ ಹಿಂದೆ ತಿರುಗಿ ನೋಡಿದ ಮಹೇಶ. ಬೋರಲು ಬಿದ್ದಿದ್ದ ಸ್ವರೂಪ್. ತಕ್ಷಣ ಅವನನ್ನು ಅಂಗಾತಾಗಿ ತಿರುಗಿಸಿದ. ಕೆಂಪು ಕಲೆ ಎದೆಯ ಮೇಲೆ ಹರಡತೊಡಗಿತ್ತು. ಇವಾನ್‌ಗೆ ತನ್ನ ರೈಫಲ್ ಕೊಟ್ಟು ಸ್ವರೂಪ್‌ನನ್ನು ಪೊದೆಯ ಮಧ್ಯಕ್ಕೆಳೆದು ತಂದ.

"ಸ್ವರೂಪ್....ಸ್ವರೂಪ್...." ಕಿವಿಯ ಬಳಿ ತುಟಿಯಿರಿಸಿ ಮೆಲ್ಲಗೆ ಕರೆದ.

"ಮ್‌ ಮ್‌...." ಅಸ್ಪಷ್ಟವಾಗಿ ಮುಲುಗಿದ ಸ್ವರೂಪ್.

"ಅವರಿಗೇನಾದರೂ ಹೇಳಿದೆಯಾ ?"

"ನೋ....ಇನ್ನು ನನ್ನ ಕಥೆ....ಮುಗಿಯಿತು...."

ಅವನ ನೋವನ್ನು ಅರ್ಥಮಾಡಿಕೊಂಡ ಮಹೇಶ. ಬ್ರೇಕಿಂಗ್ ಪಾಯಿಂಟ್ ರೀಚ್ ಆಗಿದ್ದಾನೆ ಸ್ವರೂಪ್. ಇನ್ನು ಉಳಿಯುವುದು ಕಷ್ಟ. ಕೊನೆಯುಸಿರೆಳೆದಿದ್ದಾನೆ.

"ಡೋಂಟ್ ವರಿ ಫ್ರೆಂಡ್....ಇನ್ನವರ ಕೈಗೆ ಸಿಕ್ಕೆವು ನಾವು. ನಮಗೆ ಇನ್ನೇನಂ ಸಹಾಯ ಬರಲಿದೆ...."

"ನಾನು ಮಾಡಿದ ತಪ್ಪು... ನೀವೆಲ್ಲಾ ಕಷ್ಟ ಅನುಭವಿಸುತ್ತಿದ್ದೀರಿ...." ತಾನು ಕೋಡ್ ಮೆಸ್ಸೇಜ್ ಕಳಿಸಿದ್ದೇ ಇಷ್ಟೆಲ್ಲಾ ಅನಾಹುತಕ್ಕೆ ಕಾರಣ ಅಂದುಕೊಂಡಿದ್ದ ಅವನು.

"ಡೋಂಟ್ ಟಾಕ್ ರಬಿಷ್....ಇವರ್ಯಾರೂ ಕಾರಣರಲ್ಲ. ಸಿಲ್ವರ್ ಕಿಂಗ್ ಎಲ್ಲಿದೆ ? ಬೇಗಹೇಳು....ಎಲ್ಲಿದೆ ಸಿಲ್ವರ್ ಕಿಂಗ್ ?" ಅವಸರ ಪಡಿಸಿದ ಮಹೇಶ.

ಮೌನವಾಗಿದ್ದ ಎರಡು ಕ್ಷಣ ಸ್ವರೂಪ್. ಮಾತಾಡಲು ಪ್ರಯತ್ನಿಸಿದರೂ ಗಂಟಲ ನರಗಳು ಸಹಕರಿಸಲಿಲ್ಲ. ಕೊನೆಗೆ ಕ್ಷೀಣ ಧ್ವನಿಯಲ್ಲುಸುರಿದ. "ನಾಲ್ಕು ಮೈಲಿಗಳ ದೂರದಲ್ಲಿ....ಎರಡು ಸಾವಿರ ಅಡಿಗಳ ಆಳದೊಳಗೆ....ಬಾಲಿ ದ್ವೀಪಕ್ಕೆ ಉತ್ತರದಲ್ಲಿ...." ನಿಂತಿತು ಧ್ವನಿ.

"ಎಲ್ಲಿ ಸ್ವರೂಪ್....ಎಲ್ಲಿ ? ಉತ್ತರಕ್ಕೆಲ್ಲಿ ?" ಪ್ರೆಷರ್ ಹಾಕಿದ.

"ಮೂರು ಬೆಟ್ಟಗಳ ಬಳಿ....ಜೀರೊ ಜೀರೋ ಹವರ್ಸ್ !" ಮಾತಿನೊಡನೆಯೇ ಬಾಯಿಂದ ರಕ್ತ ನುಗ್ಗಿ ಬಂತು. ಜೋರಾಗೊಮ್ಮೆ ಕೆಮ್ಮಿ ಹಿಂದಕ್ಕೆ ವಾಲಿ ತಲೆ ನೆಲಕ್ಕೊರಗಿಸಿಬಿಟ್ಟ ಸ್ವರೂಪ್.

ಇನ್ನಿಲ್ಲ ಅವನು !

ನಿಟ್ಟುಸಿರುಗರೆದು ಅವನ ಕಣ್ಣು ಮುಚ್ಚಿ ಮೇಲೆದ್ದು ಕಿಂಗ್ ಪಕ್ಕಕ್ಕೆ ಸೇರಿಕೊಂಡ ಮಹೇಶ. ಶತ್ರುಗಳು ಫೈನಲ್ ಅಸಾಲ್ಟ್ ಮಾಡಿದರೆ

ತಮ್ಮ ಕಥೆ ಮುಗಿದಂತೆ ಅಂದುಕೊಳ್ಳುತ್ತಿದ್ದಂತೆಯೇ ಅಟಾಕ್ ಶುರು ವಾಗೇ ಬಿಟ್ಟಿತು. ಸತತ ಅಗ್ನಿ ವರ್ಷದೊಡನೆ ಮುಂದಕ್ಕೆ ಬರತೊಡಗಿದವು ಶತ್ರುಗಳು.

ಮಹೇಶನ ರೈಫಲ್‌ನಲ್ಲಿ ಬುಲೆಟ್ಸ್ ಕ್ಲೋಸಾಯಿತು. ಹಿಂದೆ ಮುಂದೆ ಯೋಚಿಸದೆ ರೈಫಲ್ ಹಿಡಿದು ಪೊದೆಯ ಹೊರಗಡೆಗೆ ಜಂಪ್ ಮಾಡಿದ. ಕಣ್ಣಿಗೆ ಬಿದ್ದವರಿಗೆಲ್ಲಾ ಎಗ್ಗಾ ಮಗ್ಗಾ ಬೀಸತೊಡಗಿದ. ಹಾಗೆಯೇ ಎಷ್ಟು ಹೊತ್ತು ವಿಜೃಂಭಿಸಿದನೋ ತಿಳಿಯದು. ತಿಳಿದದ್ದು ಪಟಾರ್ರ ತಲೆಯಲ್ಲೆಲ್ಲೋ ಒಂದೆಡೆ ಕಾದ ಕಬ್ಬಿಣದ ಸಲಾಕೆಯಿಟ್ಟಂತಹ ಫೀಲಿಂಗ್. ತಾನು ಕತ್ತಲ ಲೋಕದತ್ತ ಸಾಗುತ್ತಿರುವ ಅನುಭೂತಿ. ಆಮೇಲೇನಾಯಿತೋ ಗೊತ್ತಿಲ್ಲ.

ಕಣ್ಣು ತೆರೆದಾಗ ಮತ್ತೊಮ್ಮೆ ಮೈ ತುಂಬಾ ಬ್ಯಾಂಡೇಜ್‌ಗಳೇ ತುಂಬಿದ್ದವು. ತಲೆಗೂ ಒಂದು ಬ್ಯಾಂಡೇಜ್. ಸುಪ್ಪತ್ತಿಗೆಯೊಂದರ ಮೇಲೆ ಮಲಗಿದ್ದ. ಮಂಚದ ಸುತ್ತಲೂ ಸೊಳ್ಳೆಪರದೆ ಆವರಿಸಿತ್ತು.

ಮಹೇಶ ಕದಲಿದ್ದ ಶಬ್ದ ಕೇಳಿದೊಡನೆ ಸೊಳ್ಳೆ ಪರದೆ ಪಕ್ಕಕ್ಕೆ ಸರಿಸಿ ಮಂಚದ ಮೇಲೆ ಕುಳಿತಳು ಮಯೂರಿ. ಅವಳ ಕೈನಲ್ಲೊಂದು ಗ್ಲಾಸ್ ಇತ್ತು.

"ಪ್ಲೀಸ್ ಡ್ರಿಂಕ್ ದಿಸ್...." ಮಹೇಶನ ಭುಜವಿಡಿದು ಆದೇಶಿಸಿದಳು.

"ನೋ ಥ್ಯಾಂಕ್ಸ್....ಮಲಗುತ್ತೇನೆ" ಕಣ್ಣು ಮುಚ್ಚಿಕೊಳ್ಳುತ್ತಾ ಹೇಳಿದ ಮಹೇಶ.

ಆದರೂ ಬಲವಂತವಾಗಿ ಗ್ಲಾಸ್‌ನಲ್ಲಿದ್ದದನ್ನು ಅವನಿಗೆ ಕುಡಿಸಿದಳು ಮಯೂರಿ. ಕುಡಿದೊಡನೆ ಒಂದು ರೀತಿಯ ಮತ್ತು ಅವನನ್ನು ಆವರಿಸ ತೊಡಗಿತು. ಮೈ ನೋವು ತಿಳಿಯುತ್ತಿಲ್ಲ. ಯಾವುದೇ ಅನೂಹ್ಯ ಉತ್ಸಾಹ.

ಮೋಹಕವಾಗಿ ನಗುತ್ತಿದ್ದಳು ಮಯೂರಿ.

ಗಾಳಿಯಲ್ಲಿ ತೇಲಿ ಹೋಗುತ್ತಿದ್ದ ಮಹೇಶ.

ಏನೋ ತಿಳಿಯಲಾಗದ ಮತ್ತು. ಆ ಮತ್ತಿನಲ್ಲೇ ಕೈ ಚಾಚಿ ಮಯೂರಿಯನ್ನು ಮೈ ಮೇಲೆಳೆದುಕೊಂಡ.

# 15

"ಈ ಪ್ರದೇಶವನ್ನೇ ಮೂರು ಬೆಟ್ಟವೆನ್ನುತ್ತಾರೆ !"

ಸಣ್ಣ ಗುಡ್ಡವೊಂದರ ಮುಂದೆ ಕಾರು ನಿಲ್ಲಿಸಿ ಹೇಳಿದ ಮೇಜರ್ ಸಿಂಗ್.

ಹಿಂದಿನ ರಾತ್ರಿ ಮಹೇಶ ಕೆಳಕ್ಕುರುಳುವ ವೇಳೆಗೆ ಬಂದು ತನ್ನ ಅಸಾಲ್ಟ್ ಶುರು ಮಾಡಿದ್ದ ಮೇಜರ್ ಸಿಂಗ್. ಹತ್ತೇ ನಿಮಿಷಗಳಲ್ಲಿ ಶರಣಾಗಿದ್ದರು. ಗೋಲ್ಡನ್ ಗ್ಯಾಂಗ್ ಅನುಚರರು. ಲೀಡರ್ಸ್ ಮಾತ್ರ ಪರಾರಿಯಾಗಿ ಬಿಟ್ಟಿದ್ದರು. ಅವೆರಡು ವಿಮಾನಗಳು ಬಾಲಿ ಐಲೆಂಡ್‌ಗೆ ಕಾಣಿಕೆಯಾಗಿ ಸಿಕ್ಕಿದ್ದವು.

ಮಹೇಶ ಎದ್ದು ಓಡಾಡುವವರೊಡನೆ ಸಿಲ್ವರ್ ಕಿಂಗ್ ಅನ್ವೇಷಣೆಗಾಗಿ ಹೊರಟಿದ್ದ. ಮೇಜರ್‌ಸಿಂಗ್, ಇವಾನ್ ಮತ್ತು ಮಯೂರಿ ಅವನೊಡನಿದ್ದರು.

ಸ್ವರೂಪ್ ಮಾತುಗಳನ್ನು ಜ್ಞಾಪಿಸಿಕೊಂಡ ಮಹೇಶ.

"ಮೂರು ಬೆಟ್ಟಗಳ ಬಳಿ ಉತ್ತರಕ್ಕೆ....ನಾಲ್ಕು ಮೈಲಿಗಳ ದೂರದಲ್ಲಿ ಎರಡು ಸಾವಿರ ಅಡಿಗಳ ಕೆಳಗಿದೆ ಸಿಲ್ವರ್ ಕಿಂಗ್. ಪ್ರತಿದಿನ ಜೀರೋ ಹವರ್ಸ್‌ಗೆ ಮೇಲೆ ಬರುತ್ತದೆ. ಅಂದರೆ ರಾತ್ರಿ ಹನ್ನೆರಡು ಮತ್ತು ಒಂದು ಗಂಟೆಯ ನಡುವೆ.

"ಮೇಜರ್....ನಿಮಗೆ ಈ ಪ್ರದೇಶವೆಲ್ಲಾ ಪರಿಚಿತವೇ ?" ಕೇಳಿದ.

"ಗೊತ್ತು ಏಕೆ ?"

"ಇಲ್ಲಿ ಸಮುದ್ರ ತೀರದಲ್ಲಿರುವ ಬೆಟ್ಟದ ಗುಹೆಯುಲ್ಲೆಲ್ಲೋ ಲೆಫ್ಟಿನೆಂಟ್ ಸ್ವರೂಪ್ ಒಂದು ಸಣ್ಣ ಸಬ್ ಮೆರೀನ್ ಅಡಗಿಸಿಟ್ಟಿದ್ದಾನೆ.

ಅದನ್ನು ಹುಡುಕಿ ನಾಶ ಮಾಡುವಿರಾ ? ಅದು ಮತ್ತೆ ಯಾರ ಕೈಗೂ ಸಿಗಬಾರದು" ರಿಕ್ವೆಸ್ಟ್ ಮಾಡಿದ.

"ಡೆಫನೆಟ್ಲಿ ! ಆದರೆ ಹಾಳುಗೆಡವುವುದು...." ವಿಷಾದದೊಡನೆ ಹೇಳಿದ ಸಿಂಗ್.

ಕತ್ತಲಲ್ಲಿ ಮುಗುಳ್ನಕ್ಕ ಮಹೇಶ. "ನಿಮ್ಮ ನೌಕಾದಳಕ್ಕೆ ಬೇಕೆನಿಸಿದರೆ....ಉಪಯೋಗಿಸಿಕೊಳ್ಳಿ...." ಅನ್ನುತ್ತಾ ಟಾರ್ಚ್ ಮೂಲಕ ಸಮುದ್ರದೊಳಕ್ಕೆ ಸಿಗ್ನಲ್ಸ್ ಕಳಿಸಲು ಶುರು ಮಾಡಿದ.

ಸರಿಯಾಗಿ ಹನ್ನೆರಡು ಗಂಟೆ ನಲವತ್ತೆರಡು ನಿಮಿಷಗಳಿಗೆ ಸಮುದ್ರದ ಮೇಲಿನಿಂದೊಂದು ಸಿಗ್ನಲ್ ಬರತೊಡಗಿತು.

ಮೋರ್ಸ್ ಕೋಡ್‌ನಲ್ಲಿ ತನ್ನ ಐಡೆಂಟಿಟಿ ತಿಳಿಸಿದ ಮಹೇಶ. ಕಾಲು ಗಂಟೆಯ ನಂತರ ಮೋಟರ್ ಬೋಟೊಂದು ಬರುತ್ತಿರುವ ಶಬ್ದ ಕೇಳಿಸಿತು. ಎಲ್ಲರೂ ಕಾರಿಳಿದು ನೀರಿನ ಸಮೀಪದಲ್ಲಿ ನಿಂತರು.

ಮೋಟರ್ ಬೋಟ್ ದಡದ ಸಮೀಪ ನಿಂತಿತು. ಫ್ಲ್ಯಾಷ್ ಲೈಟೊಂದು ಬೆಳಗಿತು. ಎರಡು ಮೆಷಿನ್‌ಗನ್ಸ್ ಅವರನ್ನೇ ಕಣ್ಣು ಮಿಟುಕಿಸದೆ ನೋಡುತ್ತಿದ್ದವು.

"ಲೆಫ್ಟಿನೆಂಟ್ ಸ್ವರೂಪ್ ?"

"ನೋ....ಹಿ ಈಸ್ ಡೆಡ್ !" ಉತ್ತರಿಸಿದ ಮಹೇಶ.

"ಹೂ ಆರ್ ಯು ?"

"ಐಯಾಮ್ ಮಹೇಶ. ಡಾಕ್ಟರ್ ಇವಾನ್ ಹಾಗೂ ಸೆಕ್ಯೂರಿಟಿ ಗಾರ್ಡ್‌ನೊಡನೆ ಬಂದಿದ್ದೇನೆ. ರಷ್ಯಾದಿಂದ ಬಂದಿರುವ ಮ್ಯಾಥ್‌ಮೆಟೀಷಿಯನ್ ಡಾಕ್ಟರ್ ಇವಾನ್." ಹೇಳಿದ ಮಹೇಶ.

"ಆಲ್‌ರೈಟ್ ಕಮಾನ್...." ಅವಸರಿಸಿದ ಮೋಟರ್ ಬೋಟ್‌ನಲ್ಲಿದ್ದವರಲ್ಲೊಬ್ಬ.

ಮುಯೂರಿ ಕೊಟ್ಟು ಸೆಕ್ಯೂರಿಟಿ ಗಾರ್ಡ್ ಡಾಕ್ಟರ್ ಇವಾನ್ ಕೈನ ಕ್ಲಿಂಚ್ ಕಳಿಸಿದ ಮಹೇಶ.


ಬೋಟ್ ಹತ್ತಿ, ಹ್ಯಾಪಿ ಲ್ಯಾಂಡಿಂಗ್ ಮಹೇಶ...." ಎಂದು ಕೈ ಬೀಸಿದ ಇವಾನ್.

ಮೋಟರ್ ಬೋಟ್ ಕಣ್ಮರೆಯಾಗುವವರೆಗೆ ಅಲ್ಲೇ ನಿಂತಿದ್ದು ಹಿಂದಕ್ಕೆ ತಿರುಗಿದ ಮಯೂರಿಯೊಡನೆ ಮಹೇಶ.

ಇನ್‌ಫ್ಯಾಕ್ಟ್ ಅವನೂ ಇವಾನ್ ಜೊತೆಗೆ ಹೋಗಬೇಕಾಗಿತ್ತು.

ಆದರೆ ಒಂದು ವಾರ ತಮ್ಮೊಡನಿದ್ದು ಚೇತರಿಸಿಕೊಂಡು ಹೋಗೆಂದು ಮಯೂರಿ ನೀಡಿದ್ದ ಆಹ್ವಾನವನ್ನು ಅದೇಕೋ ನಿರಾಕರಿಸಲಾಗಿರಲಿಲ್ಲ ಅವನಿಗೆ !

— ಮುಗಿಯಿತು —



# ಸಪ್ತಗಿರಿ ಪ್ರಕಾಶನ

[illegible] ಬೆಂಗಳೂರು- 560053.